بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 28

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15 ಜುಲೈ 2021, 15 ವಫಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
04 ಝುಲ್ ಖಅ್‌ದ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اَلَمْ تَعْلَمْ اَنَّ اللّٰهَ لَهٗ مُلْكُ السَّمٰوٰتِ وَالْاَرْضِ ؕ يُعَذِّبُ مَنْ يَّشَآءُ وَيَغْفِرُ لِمَنْ يَّشَآءُ ؕ وَاللّٰهُ عَلٰى كُلِّ شَيْءٍ قَدِيْرٌ ۝

(ಅಲ್‌ಮಾಇದ: 41)

ಅಂದರೆ: ನಿಸ್ಸಂದೇಹವಾಗಿಯೂ ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅಲ್ಲಾಹನಿಗೆದೆಯೆಂದು ನಿನಗೆ ತಿಳಿದಿಲ್ಲವೇ? ತಾನು ಉದ್ದೇಶಿಸುವವರನ್ನು ಅವನು ಶಿಕ್ಷಿಸುತ್ತಾನೆ. ತಾನು ಉದ್ದೇಶಿಸುವವರನ್ನು ಅವನು ಕ್ಷಮಿಸುತ್ತಾನೆ. ಅಲ್ಲಾಹನು ಎಲ್ಲ ಕಾರ್ಯಗಳ ಮೇಲೆ ಸಂಪೂರ್ಣ ಸಾಮರ್ಥ್ಯ ಹೊಂದಿದ್ದಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಮೃತನನ್ನು ಪ್ರಶಂಸಿಸುವುದು

(1367) ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ– ಜನರು ಜನಾಝ (ಶವ)ದ ಬಳಿಯಿಂದ ಹೋದರು. ಅವರು ಆ ಶವವನ್ನು ಕಂಡು ಆತನನ್ನು ಹೊಗಳಿದರು, ಆಗ ನಬಿ(ಸ) ಹೇಳಿದರು: ಆತನ್ನು ನೀಡಲಾಯಿತು! ಮತ್ತೆ ಅವರು ಮತ್ತೊಂದು ಶವದ ಬಳಿಯಿಂದ ಹೋದರು, ಆಗ ಅವರು ಆ ಶವವನ್ನು ಕಂಡು ನಿಂದಿಸಿದರು, ನಬಿ ಕರೀಂ(ಸ) ಹೇಳಿದರು: ಆತನನ್ನು ಸಹ ನೀಡಲಾಯಿತು. ಅದಕ್ಕೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಕೇಳಿದರು ಯಾ ರಸೂಲಲ್ಲಹ್ ಏನು ನೀಡಲಾಯಿತು? ನಬಿ(ಸ) ಹೇಳಿದರು: ಯಾರನ್ನು ನೀವು ಪ್ರಶಂಸಿರುವಿರೋ ಅವನ ಮೇಲೆ ಸ್ವರ್ಗ ನಿಶ್ಚಿತವಾಯಿತು ಮತ್ತು ಯಾರನ್ನು ನೀವು ನಿಂದಿಸಿದ್ದೀರಿ, ಅವನ ಮೇಲೆ ನರಕ ನಿಶ್ಚಿತವಾಯಿತು, ನೀವು ಈ ಭೂಮಿಯ ಮೇಲೆ ಸಾಕ್ಷಿಯಾಗಿದ್ದೀರಿ.

(1368) ಅಬುಲ್ ಅಸ್ವದ್ ವರದಿ ಮಾಡಿತ್ತಾರೆ– ನಾನು ಮದೀನಕ್ಕೆ ಬಂದಾಗ ಅಲ್ಲಿ ಮಹಾಮಾರಿ ಹರಡಿತ್ತು. ನಾನು ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಬಳಿ ಕುಳಿತಿದ್ದೆ. ಅವರ ಬಳಿಯಿಂದ ಒಂದು (ಜನಾಝ) ಶವಯಾತ್ರೆ ಹೊರಡಿತ್ತು, ಆತನನ್ನು ಅವರು ಚನ್ನಾಗಿ ಹೊಗಳಿದರು. ಹಝ್ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಇನ್ನೊಂದು ಶವಯಾತ್ರೆ ಹೊರಡಿತ್ತು ಆತನನ್ನು ಸಹ ಹೊಗಳಿದರು, ಹಝ್ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಮೂರನೆಯದ್ದೊಂದು ಶವಯಾತ್ರೆ ಹೊರಡಿತ್ತು ಆತನನ್ನು ಕಂಡು ಅವರು ತೆಗಳಿದರು. ಹಝ್ರತ್ ಉಮರ್(ರ) ಹೇಳಿದರು: ಆತನಿಗೂ ನೀಡಲಾಯಿತು! ಅಬುಲ್ ಅಸ್ವದ್ ಹೇಳುತ್ತಿದ್ದರು– ನಾನು ಕೇಳಿದೆ ಯಾ ಅಮೀರಲ್ ಮುಮಿನೀನ್ ಏನು ನೀಡಲಾಯಿತು ಎಂದಿದ್ದೀರಿ? ಅದಕ್ಕೆ ಅವರು ಹೇಳಿದರು: ನಾನು ನಬಿ(ಸ) ಹೇಳಿದ್ದನ್ನು ಹೇಳಿರುತ್ತೇನೆ ಯಾವ ಮುಸಲ್ಮಾನನ ಪರವಾಗಿ ನಾಲ್ಕು ಮುಸಲ್ಮಾನರು ಒಳ್ಳೆಯ ಸಾಕ್ಷಿ ನೀಡುವರೋ– ಅಲ್ಲಾಹನು ಅವನನ್ನು ಸ್ವರ್ಗಕ್ಕೆ ಕಳುಹಸುವನು. ನಾವು ಕೇಳಿದೆವು ಮೂವರು ಸಾಕ್ಷಿ ನೀಡಿದರೆ? ಅವರು(ಸ) ನುಡಿದರು: ಅವರು ಸಹ! ನಾವು ಕೇಳಿದೆವು: ಇಬ್ಬರು ಸಾಕ್ಷಿ ನೀಡಿದರೆ– ಅವರು(ಸ) ನುಡಿದರು: ಎರಡು ಆದರು ಸರಿ. ಮತ್ತೆ ನಾವು ಒಬ್ಬರ ಸಾಕ್ಷಿಯ ಬಗ್ಗೆ ಕೇಳಲಿಲ್ಲ.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ 2006 ಖಾದಿಯಾನ್)**

**ಕಾಗದ ಪತ್ರದ ಪ್ರಭಾವ ಬೀರಲು ಎಷ್ಟು ಸಾಧ್ಯ. ಅದು ಇಂದು ಇದ್ದರೆ ನಾಳೆ ಮಾಯವಾಗಬಹುದು. ಆದರೆ ಆಕಾಶದಲ್ಲಿ ಏನೆಲ್ಲಾ ಬರೆಯಲ್ಪಡುತ್ತದೆ. ಅದು ಎಂದೂ ವ್ಯರ್ಥವಾಗುವುದಿಲ್ಲ. ಅದರ ಪ್ರಭಾವ ಶಾಶ್ವತವಾದುದು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸಾಂಪತ್ತಿಕ ತ್ಯಾಗ ಕೇವಲ ಅಲ್ಲಾಹನ ಸಂತೃಪ್ತಿಗೋಸ್ಕರ ಆಗಬೇಕು. ಯಾವನೋ ಒಬ್ಬ ವ್ಯಕ್ತಿ ತನ್ನ ಹೆಸರು ಪ್ರಕಟಿಸಲು ಚಂದ ಕೊಡುವುದಾದರೆ ಅಥವಾ ಧಾರ್ಮಿಕ ಅಗತ್ಯಗಳಿಗಾಗಿ ಕೊಡುವುದಾದರೆ, ನಿಶ್ಚಿತವಾಗಿ ತಿಳಿದುಕೊಳ್ಳಿರಿ. ಅವನು ಲೌಕಿಕ ಪ್ರಸಿದ್ಧಿ ಮತ್ತು ತನ್ನ ಹೆಸರು ತೋರ್ಪಡಿಸುವ ಬಯಕೆ ಹೊಂದಿರುತ್ತಾನೆ. ಆದರೆ ಯಾರು ಕೇವಲ ಅಲ್ಲಾಹನಿಗೋಸ್ಕರ ಈ ಮಾರ್ಗದಲ್ಲಿ ಹೆಜ್ಜೆ ಇಡುವನೋ ಮತ್ತು ಧರ್ಮಸೇವೆಗಾಗಿ ಪಣತೊಡುವನೋ, ಅವನಿಗೆ ಬೇರೆ ಮಾತಿನೆಡೆ ಲಕ್ಷ್ಯವಿರುವುದಿಲ್ಲ, ಲೌಕಿಕ ಹೆಸರುವಾಸಿತನದಿಂದ ಏನೂ ಪ್ರಯೋಜನವಿಲ್ಲ. ಅದು ತನ್ನೊಳಗೆ ಯಾವ ಪ್ರಭಾವವು ಹೊಂದಿರುವುದಿಲ್ಲ. ಆಕಾಶದ ಮೇಲೆ ಬರೆಯಲ್ಪಡುವ ಹೆಸರುಗಳೇ ಉತ್ತಮವಾಗಿರುತ್ತವೆ. ಕಾಗದ ಪತ್ರ ಎಷ್ಟು ಪ್ರಭಾವ ಬೀರಲು ಸಾಧ್ಯ. ಇಂದು ಇದ್ದರೆ ನಾಳೆ ಮಾಯವಾಗುವುದು. ಆದರೆ ಆಕಾಶದಲ್ಲಿ ಏನೆಲ್ಲಾ ಬರೆಯಲ್ಪಡುತ್ತದೆ. ಅದು ಎಂದೂ ವ್ಯರ್ಥ ಹೋಗುವುದಿಲ್ಲ, ಅದರ ಪ್ರಭಾವ ಶಾಶ್ವತವಾದುದು. ನನ್ನ ಬಹಳಷ್ಟು ನಿಷ್ಠಾವಂತ ಮಿತ್ರರಿದ್ದಾರೆ. ಅವರ ಹೆಸರು ಸಹ ನೀವು ತಿಳಿದಿರಲಿಕ್ಕಿಲ್ಲ. ಆದರೆ ಅವರು ಸದಾಕಾಲ ನನಗೆ ನೆರವು ನೀಡಿದ್ದಾರೆ. ಅಂದ ಹಾಗೆ ನಾನು ಉದಾಹರಣೆಯಾಗಿ ಹೇಳಬಯಸುತ್ತೇನೆ. ಮಿರ್ಝಾ ಯೂಸೂಫ್ ಬೇಗ್ ಸಾಹಿಬ್ ನನ್ನ ಅತ್ಯಂತ ನಿಷ್ಠಾವಂತರು ಹಾಗೂ ಸತ್ಯಸಂಧ ಮಿತ್ರರಾಗಿದ್ದಾರೆ. ನಾನು ಅವರ ಹೆಸರು ಏಕೆ ಪ್ರಸ್ತಾಪಿಸಿದ್ದೇನೆಂದರೆ ಆ ಮೂಲಕ ಸಹೋದರ ಭಾವನೆ ಉಂಟಾಗುತ್ತದೆ, ಪರಿಚಯ ಹಾಗೂ ಪ್ರೀತಿ ಹುಟ್ಟುತ್ತದೆ. ಮಿರ್ಝಾ ಸಾಹಿಬ್ ನನ್ನ ಗೌಪ್ಯ ಜೀವನ ನಡೆಸುವ ಕಾಲದಿಂದ ಸಂಬಂಧವಿರಿಸಿಕೊಂಡಿದ್ದಾರೆ. ನಾನು ನೋಡುತ್ತಿದ್ದೇನೆ. ಅವರ ಹೃದಯ ಪ್ರೀತಿ ಹಾಗೂ ನಿಷ್ಠೆಯಿಂದ ತುಂಬಿ ಹೋಗಿದೆ ಮತ್ತು ಅವರು ಸದಾಕಾಲ ಧರ್ಮಸೇವೆ ಮಾಡಲು ತಮ್ಮೊಳಗೆ ಒಂದು ಉತ್ಸಾಹ ಹೊಂದಿದವರಾಗಿದ್ದಾರೆ. ಇವರಂತೆಯೇ ಇನ್ನು ಹಲವು ಮಿತ್ರರಿದ್ದಾರೆ. ಎಲ್ಲರೂ ತಮ್ಮ ತಮ್ಮಲ್ಲಿ ವಿಶ್ವಾಸ ಮತ್ತು ಆಧ್ಯಾತ್ಮಿಕ ಜ್ಞಾನಗಳನ್ವಯ ಧರ್ಮಪ್ರೇಮದ ಉತ್ಸಾಹದಿಂದ ಪುಳಕಿತರಾಗಿರುತ್ತಾರೆ.

### ವಿಶ್ವಾಸ ದೃಢತೆ ಇಲ್ಲದಿದ್ದರೆ ಏನು ಮಾಡಲಾಗದು.

ನನ್ನ ಪ್ರಕಾರ ಸತ್ಕರ್ಮಗಳ ಭಾಗ್ಯ ನಿಧಾನವಾಗಿ ಬೆಳೆಯುತ್ತಾ ಬರುತ್ತದೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ವಿಶ್ವಾಸ ದೃಢತೆ ಇರುವವರೆಗೆ ಸತ್ಕರ್ಮಗಳಲ್ಲಿ ಶಕ್ತಿ ಉಂಟಾಗುತ್ತದೆ. ಎಲ್ಲಿಯವರೆಗೆಂದರೆ ಈ ವಿಶ್ವಾಸ ದೃಢತೆ ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದರೆ, ಅಂತಹ ಸತ್ಯವಿಶ್ವಾಸಿಯೊಬ್ಬರು ಶಹೀದ್ ಸ್ಥಾನ ಪಡೆಯುವವನಾಗುತ್ತಾನೆ. ಏಕೆಂದರೆ ಯಾವ ಅಡೆತಡೆಯು ಅವನ ಮಾರ್ಗದಲ್ಲಿ ಇರುವುದಿಲ್ಲ. ಅವನು ತನ್ನ ಪ್ರೀತಿಯ ಪ್ರಾಣ ಸಹ ತ್ಯಾಗ ಮಾಡಲು ಹಿಂಜರಿಯುವುದಿಲ್ಲ. **(ಮಲ್ಫೂಝಾತ್, ಸಂಪುಟ–1, ಪುಟ–309, 310, ಮದ್ರಣ 2018 ಖಾದಿಯಾನ್)**

**ಈ ವಚನವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಬಹುದಾಗಿದೆ. ಭಾರತದ ಮುಂದಿನ ಭಾಷೆ ಉರ್ದು ಆಗಿರಬಹುದು ಮತ್ತು ಅದರ ಮುಂದೆ ಯಾವ ಭಾಷೆಗಳು ಸಹ ನಿಲ್ಲಲಾರವು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಇಬ್ರಾಹಿಂ ವಚನ 5 **ವಮಾ ಅರ್‌ಸಲ್‌ನಾ ಮಿಂರ್‌ರಸೂಲಿನ್ ಇಲ್ಲಾ ಬಿಲಿಸಾನಿ ಖೌಮಿಹೀ ಲಿಯುಬೈಯಿನಲಹುಮ್, ಫಯುಝಿಲ್ಲುಲ್ಲಾಹಿ ಮೈಯಶಾಉ ವ ಯಹ್‌ದಿ ಮೈಯಶಾಉ, ವಹುವಲ್ ಅಝೀಝುಲ್ ಹಕೀಮ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

“ಇಲ್ಲಬಿಲಿಸಾನಿ ಖೌಮಿಹಿ” ಅರ್ಥಾತ್ ಕೆಲವರ ಭಾವನೆ ಏನೆಂದರೆ ಪ್ರವಾದಿಗಳಿಗೆ ಅವರ ದೇಶಿಯ ಭಾಷೆಯಲಿಯೇ ದೇವವಾಣಿ ಆಗುತ್ತದೆ ಎಂದು. ಆದರೆ ಅದು ಸರಿಯಲ್ಲ. ಹೌದು ಸರಿಯಾದುದೇನೆಂದರೆ ಅವರ ದೇಶಿಯ ಭಾಷೆಯಲ್ಲಿ ಅವಶ್ಯವಾಗಿ ದೇವವಾಣಿಯಾಗಬೇಕಾಗಿದೆ. ಏಕೆಂದರೆ ಅವರ ಸಂದೇಶ ತಮ್ಮ ದೇಶವಾಸಿಗಳಿಗೆ ತಿಳಿಸಬೇಕಾದರೆ ಇತರ ಭಾಷೆಯಲ್ಲಿ ಆದರೆ ಪ್ರಚಾರ ಕಾರ್ಯದಲ್ಲಿ ಕಠಿಣತೆ ಉಂಟಾಗುತ್ತದೆ. ಆದರೆ ದೃಷ್ಟಾಂತ ಮತ್ತು ಪವಾಡ ರೀತಿಯಲ್ಲಿ ಅನ್ಯಭಾಷೆಯಲ್ಲಿ ದೇವವಾಣಿಯಾದರೆ ಆತಂಕವೇ ಇಲ್ಲ.

ಕೆಲವರು ಹಝ್ರತ್ ಮಸೀಹ್ ಮೌಊದ್(ಅ)

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ಅಬ್ದುಲ್ಲ ಆಥಮನಿಗೆ ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನ ಅವರು ನಾನು ಇಸ್ಲಾಮಿನ ಭವಿಷ್ಯವಾಣಿಯ ಪ್ರಭಾವದಿಂದ ಹೆದರಿಕೊಂಡಿಲ್ಲ ಎಂದು ಒಪ್ಪಿಕೊಂಡಲ್ಲಿ

**ಬಹುಮಾನದ ಮೊತ್ತದಲ್ಲಿ ಹೆಚ್ಚಳ**

**ಪ್ರಮಾಣ ಮಾಡಿದ ತಕ್ಷಣ ತಡ ಮಾಡದೇ ಎರಡು ಸಾವಿರ ರೂಪಾಯಿ ನಗದು ಕೊಡಲಾಗುವುದು. ಒಂದು ನಿಮಿಷವು ಸಹ ತಡಮಾಡುವುದಿಲ್ಲ. ಇಲ್ಲದಿದ್ದರೆ ನಾವು ಸುಳ್ಳುಗಾರರಾಗುವೆವು, ಮರಣ ಶಿಕ್ಷೆಗೆ ಅರ್ಹರಾಗುವೆವು.**

ಹಿಂದಿನ ಸಂಚಿಕೆಗಳಲ್ಲಿ ನಾವು ವಿವರಿಸಿದ್ದೆವು. ಅಲ್ಲಾಹನು ತನ್ನ ಪವಿತ್ರ ದಿವ್ಯವಾಣಿಯ ಮೂಲಕ ಹಝುರತ್ ಮಸೀಹ್ ಮೌಊದ್(ಅ) ರವರಿಗೆ ಆಥಮನು ರುಜುಪಡಿಸಿಕೊಂಡಿದ್ದ ವಿಷಯ ತಿಳಿಸಿದ್ದನು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಒಂದು ಸಾರ್ವಜನಿಕ ಸಭೆ ಕರೆದು ಪ್ರಮಾಣ ಮಾಡಿ ಹೇಳಲಿ. ನಾನು ರುಜು ಮಾಡಿರಲಿಲ್ಲ ಎಂದು ಆಥಮನಿಗೆ ಪಂಥಾಹ್ವಾನ ನೀಡಿದ್ದರು. ಆಗ ಅವರಿಗೆ ಸಾವಿರ ರೂಪಾಯಿ ಬಹುವಾನ ನೀಡಲಾಗುವುದು. ಅವರು ಒಂದು ವರ್ಷದವರೆಗೆ ಜೀವಂತವಾಗಿದ್ದರೆ ನಾನು ಸುಳ್ಳುಗಾರ. ನನ್ನ ಭವಿಷ್ಯವಾಣಿಯು ಸುಳ್ಳು ಎಂದಾದೀತು. ಆ ಪ್ರಮಾಣದ ಜೊತೆಯಲ್ಲಿ ಯಾವ ಶರತ್ತು ಇಲ್ಲ. ಒಂದು ವರ್ಷದ ಗಡುವು ಅಂತಿಮ ಮತ್ತು ನಿಶ್ಚಿತವಾದುದಾಗಿದೆ. ಆದರೆ ಆಥಮನು ಪ್ರಮಾಣ ಮಾಡಲಿಲ್ಲ. ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಆ ಬಹುಮಾನದ ಮೊತ್ತ ಹೆಚ್ಚಿಸಿ ಅದನ್ನು ಎರಡು ಸಾವಿರ ಮಾಡಿದರು. ಅವರು ಹೇಗಾದರೂ ಸಹಿ ಸತ್ಯ ಬಯಲಾಗಬೇಕೆಂದು ಬಯಸುತ್ತಿದ್ದರು. ಏಕೆಂದರೆ ಮುಗ್ಧ ಜನರು ವಂಚನೆಗೆ ಒಳಗಾಗಬಾರದು. ಆಥಮನು ಒಂದೋ ತಾನು ರುಜುಪಡಿಸಿಕೊಂಡಿದ್ದೆ ಎಂದು ಒಪ್ಪಿಕೊಳ್ಳಲಿ ಅಥವಾ ಆಣೆ ಮಾಡಲಿ. ಒಂದು ವರ್ಷದೊಳಗೆ ನಿಧನಗೊಂಡು ಭವಿಷ್ಯವಾಣಿಯು ಸತ್ಯತೆ ಸಾಬೀತುಪಡಿಸಬೇಕಾಗಿದೆ. ಈ ಸಂಚಿಕೆಯಲ್ಲಿ ನಾವು ಅವರ ಕಡೆಯಿಂದ ಎರಡು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ ನೀಡಿದ ವಿವರ ನೀಡುವೆವು.

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು 9 ಸೆಪ್ಟೆಂಬರ್ 1894 ರ ಜಾಹೀರಾತಿನಲ್ಲಿ ಬರೆದಿದ್ದೆನು. ಆಥಮನು ಭವಿಷ್ಯವಾಣಿಯ ದಿನಗಳಲ್ಲಿ ಅವಶ್ಯವಾಗಿ ಸತ್ಯದೆಡೆ ರುಜುಪಡಿಸಿಕೊಂಡಿದ್ದನು ಮತ್ತು ಇಸ್ಲಾಮಿನ ಪ್ರತಾಪದ ಪ್ರಭಾವ ಅವನ ಮನದಲ್ಲಾಗಿತ್ತು. ಇದು ಸತ್ಯವಲ್ಲ ಎಂದಾದರೆ ಅವರು ನಗದು ಒಂದು ಸಾವಿರ ರೂಪಾಯಿ ಪಡೆದುಕೊಳ್ಳಲಿ. ಮತ್ತು ಆಣೆ ಮಾಡಿ ಹೇಳಲಿ “ನಾನು ಆ ಅವಧಿಯಲ್ಲಿ ಭಯಗೊಂಡು ರುಜು ಮಾಡಲಿಲ್ಲ ಎಂದು. ಅಂದ ಹಾಗೆ ಈ ಸತ್ಯವನ್ನು ಜನರ ಮುಂದೆ ಜಾಹೀರುಪಡಿಸಲು ಮೂರು ರಿಜಿಸ್ಟರ್ ಪತ್ರಗಳು. ಆಥಮ್ ಸಾಹಿಬ್, ಡಾ॥ ಮಾರ್ಟಿನ್ ಕ್ಲಾರ್ಕ್ ಮತ್ತು ಪಾದರಿ ಇಮಾಮುದ್ದೀನ್ ರವರಿಗೆ ರವಾನಿಸಿದ್ದೇನೆ. ನಿನ್ನೆ ಡಾ॥ ಮಾರ್ಟಿನ್ ಕ್ಲಾರ್ಕ್ ಸಾಹಿಬ್ ರವರಿಂದ ನಿರಾಕರಣೆಯ ಪತ್ರ ಬಂತು. ಅದರಿಂದ ಸ್ಪಷ್ಟವಾಗಿ ಸಾಬೀತಾಗುತ್ತದೆ. ಆಥಮನು ಆಣೆ ಮಾಡಿ ಹೇಳಲು ತಯಾರಿಲ್ಲ. ಅದಾಗ್ಯೂ 10 ಸೆಪ್ಟೆಂಬರ್ 1894 ರಿಂದ ಒಂದು ವಾರದ ಗಡುವು ನೀಡಲಾಗಿತ್ತು. ಆ ಅವಧಿಯೂ ಮುಗಿದು ಹೋಯಿತು. ಆದರೆ ಈ ಒಂದು ನಿರಾಕರಣೆಯ ಪತ್ರ ಬಿಟ್ಟರೆ ಯಾವ ಸತ್ಯವು ಬಂದಿಲ್ಲ. ಈಗಲೂ ಸಾಬೀತಾಗಿಲ್ಲವೇ. ಶ್ರೀ ಅಬ್ದುಲ್ಲಾ ಆಥಮ್ ಸಾಹಿಬ್ ಅವಶ್ಯವಾಗಿ ಭವಿಷ್ಯವಾಣಿಯ ಕಾಲದಲ್ಲಿ ಇಸ್ಲಾಮಿನ ಪ್ರತಾಪವನ್ನು ಮನದಲ್ಲಿಟ್ಟುಕೊಂಡು ಸತ್ಯದೆಡೆ ರುಜುಪಡಿಸಿಕೊಂಡಿದ್ದರೆಂದು. ಆದರೆ ಈಗಲೂ ಕೆಲ ದ್ವೇಷ ಸ್ವಭಾವದವರು, ಅಲ್ಪ ಬುದ್ಧಿಯ ಜನರು ಸಂಶಯ ಹೊಂದಿದ್ದಾರೆ, ಇದೀಗ ನಾವು ಈ ಎರಡನೆಯ ಜಾಹೀರಾತು ಎರಡು ಸಾವಿರ ರೂಪಾಯಿಯ ಬಹುಮಾನದ ಜೊತೆಯಲ್ಲಿ ಹೊರಡಿಸುತ್ತಿದ್ದೇವೆ. ಆಥಮ್ ಸಾಹೇಬರು ಸಾರ್ವಜನಿಕ ಸಭೆಯಲ್ಲಿ ಮೂರು ಸಲ ಆಣೆ ಮಾಡಿ ಹೇಳಲಿ. ನಾನು ಭವಿಷ್ಯವಾಣಿಯ ಅವಧಿಯಲ್ಲಿ ಇಸ್ಲಾಮಿನ ಪ್ರತಾಪವನ್ನು ಒಪ್ಪಿಕೊಳ್ಳಲಿಲ್ಲ. ಬದಲು ಇಸ್ಲಾಮನ್ನು ವಿರೋಧಿಸುತ್ತಿದ್ದೇನೆ. ಮತ್ತು ಹಝ್ರತ್ ಈಸಾ(ಅ) ದೇವಪುತ್ರ ಮತ್ತು ದೇವತ್ವ ಮತ್ತು ಪಾಪ ಪರಿಹಾರದ ಮೇಲೆ ದೃಢ ವಿಶ್ವಾಸ ಹೊಂದಿದ್ದೆ. ಆಗ ಅದೇ ಸಮಯಕ್ಕೆ ನಗದು ಎರಡು ಸಾವಿರ ರೂಪಾಯಿ ಅವರಿಗೆ 9 ಸೆಪ್ಟೆಂಬರ್ 1894 ರ ಶರತ್ತಿಗೆ ಅನುಗುಣವಾಗಿ ತಡೆಮಾಡದೇ ಕೊಡಲಾಗುವುದು. ಆಣೆ ಮಾಡಿದ ನಂತರ ನಾವು ಎರಡು ಸಾವಿರ ರೂಪಾಯಿ ಕೊಡಲು ಒಂದು ನಿಮಿಷದ ತಡ ಮಾಡಿದರೂ ನಮ್ಮ ವಿರೋಧಿಗಳು ಹಾಕುತ್ತಿರುವ ಎಲ್ಲಾ ಶಾಪಗಳಗೆ ಗುರಿಯಾಗುವೆವು. ಮತ್ತು ನಿಸ್ಸಂಶಯವಾಗಿ ನಾವು ಸುಳ್ಳುಗಾರರಾದೆವು ಮತ್ತು ಖಂಡಿತವಾಗಿಯೂ ನಾವು ಮರಣ ದಂಡನೆಗೆ ಅರ್ಹರಾಗುವೆವು. ಮತ್ತು ನಮ್ಮ ಎಲ್ಲಾ ಗ್ರಂಥಗಳನ್ನು ಸುಟ್ಟು ಹಾಕಬಹುದು ಮತ್ತು ನಮ್ಮ ಹೆಸರು ಶೈತಾನನೆಂದು ಹೆಸರಿಸಬಹುದು. ಈಗಲೂ ಆಥಮ್ ಸಾಹಿಬರು ಇಷ್ಟೆಲ್ಲ ಭಾರಿ ಬಹುಮಾನ ನೀಡುವಾಗಲೂ ಆಣೆ ಮಾಡಲು ಒಪ್ಪುವುದಿಲ್ಲ ಎಂದಾದರೆ ಎಲ್ಲಾ ಶತ್ರುಗಳಾಗಲಿ, ಮಿತ್ರರಾಗಲಿ ನೆನಪಿಡಿರಿ. ಅವರು ಕೇವಲ ಕ್ರೈಸ್ತರಿಗೆ ಹೆದರಿ ಸತ್ಯವನ್ನು ಮರೆಯಾಚಿದ್ದಾರೆ ಮತ್ತು ಇಸ್ಲಾಮ್ ಧರ್ಮವು ಸಫಲ ಹಾಗೂ ವಿಜಯಿಯಾಗಿದೆ. ಮೊದಲಂತೂ ಅವರು ಸತ್ಯದೆಡೆ ರುಜುವಹಿಸಿದ್ದಕ್ಕೆ ಒಂದೇ ಸಾಕ್ಷಿ ಇತ್ತು. ಅಂದರೆ ಅವರ ಭಯಭೀತ ಅವಸ್ಥೆ, ಅದರಲ್ಲಿ ಅವರು 15 ತಿಂಗಳು ಕಳೆದರು. ಎರಡನೇ ಸಾಕ್ಷಿ ಎಂದರೆ ಅವರು ಸಾವಿರ ರೂಪಾಯಿ ಬಹುಮಾನ ನೀಡುತ್ತೇನೆ ಎಂದರೂ ಆಣೆ ಮಾಡಲು ತಯಾರಿಲ್ಲ. ಇದೀಗ ಮೂರನೆಯ ಸಾಕ್ಷಿ ಈ ಎರಡು ಸಾವಿರ ರೂಪಾಯಿ ಜಾಹೀರಾತಾಗಿದೆ. ಈಗಲೂ ಸಹ ಆಣೆ ಮಾಡಲು ನಿರಾಕರಿಸಿದರೆ ಅವರ ರುಜು ಸಾಬೀತಾದಂತೆಯೇ, ಸತ್ಯವಂತನಾದ ಒಬ್ಬನು ಸಾವಿನಿಂದ ಹೆದರಿ ನಿರಾಕರಿಸಬಹುದೇ, ಪ್ರತಿಯೊಂದು ಜೀವ ದೇವನ ಕೈಯಲ್ಲಿವೆ.

**ಈಗಲೂ ಸಹ ಆಥಮನು ಆಣೆ ಮಾಡಲು ನಿರಾಕರಿಸಿದರೆ, ಇಡೀ ಲೋಕವೇ ಸಾಕ್ಷ್ಯವಾಗಿರಲಿ. ನಮಗೆ ಪರಿಪೂರ್ಣ ವಿಜಯ ದೊರೆತಿದೆ. ಆಥಮರು ಸತ್ಯವಂತರಾಗಿರುತ್ತಿದ್ದರೆ, ಒಂದು ಸಲ ಅಲ್ಲ, ಸಾವಿರ ಸಲ ಆಣೆ ಮಾಡಲು ಸಿದ್ಧರಿರುತ್ತಿದ್ದರು.**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಅಂದ ಹಾಗೆ ಕ್ರೈಸ್ತರು ಹೇಳುತ್ತಿದ್ದಾರೆ. ಅವರ ಜೀವ ಮಸೀಹರು ಉಳಿಸಿದ್ದಾರೆಂದು. ನಾವು ಹೇಳುತ್ತೇವೆ ಖಂಡಿತ ಇಲ್ಲ, ಎಂದೂ ಇಲ್ಲ. ಬದಲಾಗಿ ಇಸ್ಲಾಮಿನ ಪ್ರತಾಪವನ್ನು ತನ್ನ ಮನದಲ್ಲಿಟ್ಟುಕೊಂಡ ಪರಿಣಾಮವಾಗಿ ಭವಿಷ್ಯವಾಣಿಯ ಶರತ್ತಿನ ಅನ್ವಯ ಜೀವ ಉಳಿದಿದೆ. ಇದೀಗ ಈ ವಿವಾದದ ಸತ್ಯತೆ ಅವರು ಆಣೆ ಮಾಡದೇ ಹೇಗೆ ಬಯಲಾಗಲು ಸಾಧ್ಯ. ಮಸೀಹರ ಅನುಗ್ರಹದಿಂದ ಜೀವ ಉಳಿದದ್ದೇ ಸತ್ಯವೆಂದಾದರೆ, ಇದೀಗ ಈ ಸಮಸ್ಯೆಯ ಪರಿಹಾರವಾಗಿ ಯಾವ ಶರತ್ತು ಸಹ ಇಲ್ಲ. ಅವಶ್ಯವಾಗಿ ಮಸೀಹನು ಅನುಗ್ರಹಿಸುವನು, ವಾಸ್ತವವಾಗಿಯೂ ಭಯಭೀತನಾಗಿದ್ದ ಆ ದಿನಗಳಲ್ಲಿ ತನ್ನ ಮನದಲ್ಲಿ ಇಸ್ಲಾಮಿನ ಪ್ರತಾಪವನ್ನು ಒಪ್ಪಿಕೊಂಡಿದ್ದ ಎಂದಾದರೆ, ಈಗ ನಿರಾಕರಣೆಯ ಆಣೆ ಮಾಡಿದರೆ ಅವಶ್ಯವಾಗಿ ತಡವಿಲ್ಲದೆ ಮತ್ತು ಯಾವ ನೆಪವಿಲ್ಲದೆ, ಶರತ್ತಿಲ್ಲದೇ ಅವರಿಗೆ ಸಾವು ಬರುವುದು ನಿಶ್ಚಿತ. ಈ ತೀರ್ಪು ಅವಶ್ಯವಾಗಿರುತ್ತದೆ. ಅದರಿಂದ ಅವರು ಎಲ್ಲಿ ಹೇಗೆ ಬಚಾವಾಗಲು ಸಾಧ್ಯ? ಇದೀಗ ಎರಡು ಸಾವಿರ ರೂಪಾಯಿಗಳ ಬಹುಮಾನ ನೀಡುತ್ತಿದ್ದರೂ ಅದು ಅವರಿಗೆ ಅನಾಯಸವಾಗಿ ದೊರೆಯುತ್ತಿದೆ. ಆದರೂ ಆಣೆ ಮಾಡಲು ನಿರಾಕರಿಸಿದರೆ ಇಡೀ ಲೋಕವೇ ಸಾಕ್ಷ್ಯವಾಗಿರಲಿ. ನಮಗೆ ಪರಿಪೂರ್ಣ ವಿಜಯ ದೊರೆತಿದೆ. ಮತ್ತು ಕ್ರೈಸ್ತರು ಅಪ್ಪಟ ಸೋಲನ್ನು ಪಡೆದಿರುತ್ತಾರೆ. ನಮಗೆ ಮೊದಲನೆಯ ಜಾಹೀರಾತೇ ಸಾಕಾಗಿತ್ತು. ಏಕೆಂದರೆ ಆಗ ಸಾವಿರ ರೂಪಾಯಿ ನಗದು ನೀಡುವೆ ಎಂದರೂ ಆಣೆ ಮಾಡಲಿಲ್ಲ. ಆಗಲೇ ನ್ಯಾಯತೀರ್ಪು ಬಹಿರಂಗಗೊಂಡಿತು. ಆದರೂ ಸಹ ನಾವು ದಡ್ಡ ಜನರಿಗಾಗಿ, ದ್ವೇಷ ಸ್ವಭಾವದವರಿಗಾಗಿ ಅವರ ಮೇಲೆ ಕನಿಕರಪಡುತ್ತಾ ಪುನಃ ಈ ಎರಡು ಸಾವಿರ ರೂಪಾಯಿ ಜಾಹೀರಾತು ತಮ್ಮ ಸತ್ಯತೆಯ ಮೂರನೇ ಸಾಕ್ಷ್ಯ ರೂಪದಲ್ಲಿ ಜಾರಿ ಮಾಡಿದೆವು. ನಮಗೆ ಕಾಫಿರ್ ಎನ್ನುವ ಮೌಲ್ವಿಗಳು, ಕ್ರೈಸ್ತರ ಮನಸಾರೆ ವಿಜಯ ಬಯಸುವವರು ಎಲ್ಲರೂ ಸೇರಿ ಅವರಿಗೆ ಮನವರಿಕೆ ಮಾಡಿಕೊಡಲಿ. ಅವರು ಆಣೆ ಮಾಡುವಂತೆ ಪ್ರೇರೇಪಿಸಲಿ. ಅವರ ಮರ್ಯಾದೆಯೂ ಉಳಿದೀತು ಮತ್ತು ತಮ್ಮದು ಸಹ. ಇದೀಗ ಎಲ್ಲದಕ್ಕಿಂತ ಹೆಚ್ಚಾದ ಸಾಕ್ಷ್ಯವೆಂದರೆ ಅವರು ಸಾವಿರ ರೂಪಾಯಿ ಪಡೆದು ಆಣೆ ಮಾಡಲು ಒಪ್ಪಲಿಲ್ಲ. ಅಲ್ಲದೇ ಹದಿನೈದು ತಿಂಗಳವರೆಗೆ ಸತತ ಅನುಭವದಿಂದ ಸುಳ್ಳು ಸಾಬೀತಾಗಿದೆ. ಆ ಸುಳ್ಳಿನ ನಿರಾಕರಣೆಯು ಮಾಡಲಿಲ್ಲ. ಸ್ವಾಭಿಮಾನವಿದ್ದರೆ ಒಂದು ಸಲ ಅಲ್ಲ ಸಾವಿರ ಸಲ ಆಣೆ ಮಾಡಲು ಸಿದ್ಧವಿರುತ್ತಿದ್ದರು. ಏಕೆಂದರೆ ತನ್ನನ್ನು ಸತ್ಯವಾದಿ ಎಂದು ಭಾವಿಸುತ್ತಿದ್ದರು ಮತ್ತು ನನ್ನನ್ನು ಮಿಥ್ಯವಾದಿ ಎಂದು. ಅದೇ ರೀತಿ ಸತ್ಯಪರೀಕ್ಷೆಗಾಗಿ ಆಣೆ ಮಾಡುವ ಸಲಹೆ ವರ್ಷದವರೆಗೆ ಜೀವಂತವಿರುವ ಆಣೆ ಮಾಡುತ್ತಿದ್ದೆವು.

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝುಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-06-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ಖುತ್‌ಬದಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಪಟ್ಟು ಹುದೈಬಿಯಾ ಸಂಧಿಯ ಪ್ರಸ್ತಾಪ ನಡೆಯುತ್ತಿತ್ತು. ಹುದೈಬಿಯಾ ಸಂಧಿಗೆ ವಿರುದ್ಧವಾಗಿ ಖುರೈಶಿಯರ ಸಹಾಯಕ ಗೋತ್ರವಾದ ಬನೂಬಕರ್ ಗೋತ್ರವು ಮುಸ್ಲಿಮರ ಸಹಾಯಕ ಗೋತ್ರವಾದ ಬನೂಖುಝಾಅದ ಮೇಲೆ ಹಲ್ಲೆ ನಡೆಸಿತು. ಖುರೈಶಿಗಳು ಬನೂಬಕರ್ ಗೋತ್ರಕ್ಕೆ ನೆರವು ಸಹ ನೀಡಿತ್ತು ಹಾಗೂ ಹುದೈಬಿಯದ ಒಪ್ಪಂದಕ್ಕೆ ಬೆಲೆಕೊಡಲಿಲ್ಲ. ಆದ್ದರಿಂದ ಒಪ್ಪಂದವನ್ನು ನವೀಕರಿಸಲು ಅಬೂಸುಫ್‌ಯಾನ್ ಮದೀನಕ್ಕೆ ಬಂದರು. ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು. ಆದರೆ ಹಝ್ರತ್ ಪೈಗಂಬರ್(ಸ) ಅವರ ಯಾವುದೇ ಮಾತಿಗೆ ಜವಾಬು ನೀಡಲಿಲ್ಲ. ಅನಂತರ ಅವರು ಅಬೂಬಕರ್‌ರ(ರ) ಬಳಿಗೆ ಹೋದರು. ಹಝ್ರತ್ ಪೈಗಂಬರರೊಂದಿಗೆ(ಸ) ಈ ಸಂಬಂಧವಾಗಿ ಮಾತನಾಡಲು ಅವರೊಡನೆ ಹೇಳಿದರು. ನಾನು ಹಾಗೆ ಮಾಡುವುದಿಲ್ಲವೆಂದು ಹಝ್ರತ್ ಅಬೂಬಕರ್(ರ) ಹೇಳಿದರು. ಅನಂತರ ಅಬೂಸುಫ್‌ಯಾನ್ ಹಝ್ರತ್ ಉಮರರ(ರ) ಬಳಿಗೆ ಹೋದರು. ಹಝ್ರತ್ ಉಮರ್(ರ) ಹೇಳಿದರು: ನಾನು ಹಝ್ರತ್ ಪೈಗಂಬರರೊಂದಿಗೆ(ಸ) ಈ ಸಂಬಂಧವಾಗಿ ಮಾತನಾಡಬೇಕೇ? ಅಲ್ಲಾಹನಾಣೆ, ನನ್ನ ಬಳಿ ಒಂದು ಹುಲ್ಲುಕಡ್ಡಿ ಮಾತ್ರವಿರುವುದಾದರೆ, ಅದರೊಂದಿಗೆ ನಿಮ್ಮ ವಿರುದ್ಧ ಮಾಡುತ್ತಿದ್ದೆ.
(ಸೀರತ್ ಇಬ್ನೆ ಹಿಶ್ಶಾಮ್, ಪುಟ-735, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಲ್‌ಕಾಮಿಲ್ ಫಿತ್ತಾರೀಖ್ ಸಂಪುಟ-2, ಪುಟ-115, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಮಕ್ಕದ ವಿಜಯವನ್ನು ಉಲ್ಲೇಖಿಸಿ ಡಾ. ಅಲಿ ಮುಹಮ್ಮದ್ ಸಲಾಬಿ ಅವರು ಹೀಗೆ ಬರೆಯುತ್ತಾರೆ: ಪೈಗಂಬರ್(ಸ) ರವರು ಮರ್ರಾ ಉಝ್ಝುಹ್ರಾನ್‌ಗೆ ತಲುಪಿದಾಗ, ಅಬು ಸುಫ್ಯಾನ್‌ಗೆ ತನ್ನ ಬಗ್ಗೆ ಚಿಂತೆ ಪ್ರಾರಂಭಿವಾಯಿತು. ಪೈಗಂಬರ್(ಸ) ರವರ ಚಿಕ್ಕಪ್ಪ ಹಝ್ರತ್ ಅಬ್ಬಾಸ್(ರ) ಅವರು ಅವನಿಗೆ ಪೈಗಂಬರ್(ಸ) ಅವರಿಂದ ಆಶ್ರಯ ಕೋರಲು ಸಲಹೆ ನೀಡಿದರು. ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ ನಾನು ಅಬೂ ಸುಫ್ಯಾನ್‌ನ್ನು ನಿನಗೆ ಕೆಟ್ಟದಾಗಲಿ ಎಂದು ಹೇಳಿದೆ. ನೋಡಿ, ಪೈಗಂಬರ್(ಸ) ಜನರಲ್ಲಿ ಉಪಸ್ಥಿತರಿದ್ದಾರೆ. ಅಬು ಸುಫ್ಯಾನ್ ಹೇಳಿದನು "ನನ್ನ ಪೋಷಕರು ನಿಮ್ಮ ಮೇಲೆ ಅರ್ಪಿತವಾಗಲಿ!" ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ? ಅದಕ್ಕೆ ನಾನು ಉತ್ತರಿಸಿದೆ. ಅಲ್ಲಾಹನಆಣೆ!" ಅವರು ನಿನ್ನನ್ನು ಬಂಧಿಸಿದರೆ, ಅವರು ಖಂಡಿತವಾಗಿಯೂ ನಿನ್ನನ್ನು ಕೊಲ್ಲುತ್ತಾರೆ. ನನ್ನ ಹಿಂದೆ ಹೇಸರಗತ್ತೆಯ ಮೇಲೆ ಸವಾರಿ ಮಾಡಿ. ನಾನು ನಿನ್ನನ್ನು ಪ್ರವದಿ ಮುಹಮ್ಮದ್(ಸ)ರವರ ಬಳಿ ಕರೆದೊಯ್ಯುತ್ತೇನೆ ಮತ್ತು ನಂತರ ನಾನು ನಿನಗಾಗಿ ಆಶ್ರಯ ಕೇಳುತ್ತೇನೆ. ಹಝ್ರತ ಅಬ್ಬಾಸ್ ಹೇಳುತ್ತಾರೆ: ಅವನು ನನ್ನ ಹಿಂದೆ ಸವಾರಿ ಮಾಡಿದರು. ನಾನು ಯಾವುದೇ ಮುಸ್ಲಿಮರ ಬೆಂಕಿಯಿಂದ ಹಾದುಹೋದಾಗ, ಅವರು "ಇದು ಯಾರು?" ಎಂದು ಕೇಳುತ್ತಿದ್ದನು. ಅದು ರಾತ್ರಿಯ ಹೊತ್ತಾಗಿತ್ತು, ಬೆಂಕಿ ಉರಿಯುತ್ತಿತ್ತು. ಅವರು ಪೈಗಂಬರ್(ಸ) ರವರ ಹೇಸರಗತ್ತೆಯನ್ನು ನೋಡಿ ಮತ್ತು ನಾನು ಅದರ ಮೇಲೆ ಸವಾರಿ ಮಾಡುತ್ತಿದ್ದೇನೆ ಎಂದು ಹೇಳಿದಾಗ, ಅವರು ಪೈಗಂಬರ್(ಸ)ರವರ ಚಿಕ್ಕಪ್ಪ ಅವರ ಹೇಸರಗತ್ತೆಯ ಮೇಲೆ ಇದ್ದಾರೆ ಎಂದು ಹೇಳುತ್ತಿದ್ದರು. ನಾನು ಉಮರ್ ಬಿನ್ ಖತ್ತಾಬ್‌ನ ಬೆಂಕಿಯಿಂದ ಹಾದುಹೋದಾಗ ಅವರು ಕೇಳಿದರು, "ಇದು ಯಾರು?" ಅವರು ನನ್ನ ಪಕ್ಕದಲ್ಲಿ ಬಂದು ನಿಂತರು. ಅವರು ಅಬು ಸುಫ್ಯಾನ್ ನನ್ನು ನೋಡಿದಾಗ ಅವರು ಹೇಳಿದರು: ಅಬು ಸುಫ್ಯಾನ್, ಅಲ್ಲಾಹನ ವೈರಿ! ಎಲ್ಲಾ ರೀತಿಯ ಹೊಗಳಿಕೆಗಳು ಅಲ್ಲಾಹನಿಗಿದೆ ಆವನು ಯಾವುದೇ ಪ್ರತಿಜ್ಞೆ ಇಲ್ಲದೆ ನಮಗೆ ನಿಮ್ಮ ಮೇಲೆ ಜಯ ನೀಡಿದನು. ತದನಂತರ ಹಝ್ರತ್ ಅಬ್ಬಾಸ್(ರ) ರವರು ಅಬೂ ಸುಫ್ಯಾನ್‌ನ್ನು ಎಳೆದುಕೊಂಡು ಪೈಗಂಬರ್(ಸ)ರ ಬಳಿ ಬಂದರು, ಮತ್ತು ಹಝ್ರತ್ ಉಮರ್(ರ) ರವರು ಸಹ ಅವರ ಬಳಿಗೆ ಬಂದು ಪೈಗಂಬರ್(ಸ) ಅವರನ್ನು ಕೇಳಿದರು ಯಾ ರಸೂಲಲ್ಲಹ್(ಸ)! ನನಗೆ ಅನುಮತಿ ನೀಡಿರಿ ನಾನು ಅವನ ಕುತ್ತಿಗೆ ಹೊಡೆಯುತ್ತೇನೆ. ಆಗ ಹಝ್ರತ್ ಅಬ್ಬಾಸ್(ರ) ಹೇಳಿದರು ಯಾ ರಸೂಲಲ್ಲಾಹ್! ನಾನು ನಾನು ಅವನಿಗೆ ಆಶ್ರಯ ನೀಡಿದ್ದೇನೆ. ಹಝ್ರತ್ ಉಮರ್(ರ) ವರವು ತಮ್ಮ ಮಾತನ್ನು ಒತ್ತಾಯಿಸುತ್ತಲೇ ಇದ್ದಾಗ ನಾನು ಹೇಳಿದೆ: ಓ ಉಮರ್-ನಿರೀಕ್ಷಿಸಿ ಅಲ್ಲಾಹನಆಣೆ! ಅವನು ಬನೂ ಅದಿಗೆ ಸೇರಿದವನಾಗಿದ್ದರೆ ನೀವು ಹೀಗೆ ಹೇಳುತ್ತಿರಲಿಲ್ಲ ಮತ್ತು ಅವನು ಬನೂ ಅಬ್ದುಲ್-ಮನಾಫ್‌ನಿಂದ ಇರುವನು ಎಂದು ನಿಮಗೆ ಮೊದಲಿನಿಂದಲೇ ತಿಳಿದಿದೆ. ಇದರ ನಂತರ, ಹಝ್ರತ್ ಉಮರ್ ಹೇಳಿದರು: ಓ ಅಬ್ಬಾಸ್! ನಿರೀಕ್ಷಿಸಿ ಅಲ್ಲಾಹನಆಣೆ! ನೀವು ಇಸ್ಲಾಂಗೆ ಮತಾಂತರಗೊಂಡಾಗ ನನಗೆ ಎಷ್ಟು ಸಂತೋಷವಾಗಿತ್ತು ಆಗಿತ್ತು ಎಂದರೆ ನನ್ನ ತಂದೆ ಖತ್ತಾಬ್ ಸಹ ಈಮಾನ್ ತರುತ್ತಿದ್ದರು ನನಗೆ ಅಷ್ಟು ಸಂತೋಷವಾಗುತ್ತಿರಲಿಲ್ಲ ಮತ್ತು ಪೈಗಂಬರ್(ಸ) ಅವರನ್ನು ನಿಮ್ಮ ಈಮಾನ್ ತರುವುದು ಖತ್ತಾಬ್ ಈಮಾನ್ ತರುವುದಕ್ಕು ಹೆಚ್ಚು ಸಂತೋಷವಾಗುತ್ತಿತ್ತು ಎಂದು ನನಗೆ ತಿಳಿದಿತ್ತು. ಅವನು ಇಸ್ಲಾಂಗೆ ಮತಾಂತರಗೊಳ್ಳುತ್ತಿದ್ದರೆ. ಆಗ ಪೈಗಂಬರ್ (ಸ) ಹೇಳಿದರು: ಓ ಅಬ್ಬಾಸ್! ಅಬು ಸುಫ್ಯಾನ್ ಅವರನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗಿ ಬೆಳಿಗ್ಗೆ ಕರೆತನ್ನಿ. (ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಅಲ್-ಸಲಾಬಿ, ಪುಟ-51, ದಾರ್ ಅಲ್-ಮಾರಿಫಾ ಬೈರುತ್ 2007)

ಏನೇ ಇರಲಿ, ಹಝ್ರತ್ ಉಮರ್ ಮತ್ತು ಹಝ್ರತ್ ಅಬ್ಬಾಸ್ ನಡುವಿನ ಈ ಸಂಭಾಳಣೆ ಮುಂದುವರಿಯಿತು ಮತ್ತು ಅಂತಿಮವಾಗಿ ಪೈಗಂಬರ್(ಸ)ರವರು ಹಝ್ರತ್ ಅಬ್ಬಾಸ್(ರ) ಅವರನ್ನು ಕರೆದುಕೊಂಡು ಹೋಗುವಂತೆ ಹೇಳಿದರು. ನೀವು ಅವನಿಗೆ ಆಶ್ರಯ ನೀಡಿದ್ದರೆ, ಅವನನ್ನು ಕರೆದುಕೊಂಡು ಹೋಗಿ. ಅವನಿಗೆ ಏನನ್ನೂ ಹೇಳಬೇಡಿ.

ಅಬೂಬಕರ್ ಇಬ್ನ್ ಅಬ್ದುಲ್ ರಹಮಾನ್(ರ) ಅವರಿಂದ ಶಾಬಾನ್ 7 ಹಿಜರಿನಲ್ಲಿ ಪೈಗಂಬರ್(ಸ) ಅವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರನ್ನು ಮೂವತ್ತು ಜನರ ಗುಂಪಿನೊಂದಿಗೆ ತುರಾಬದ ಹವಾಝುನ್ ಬುಡಕಟ್ಟಿನ ಶಾಖೆಗೆ ಕಳುಹಿಸಿದ್ದಾರೆ ಎಂದು ವಿವರಿಸಲಾಗಿದೆ. ತುರಾಬ ಮಕ್ಕದಿಂದ ಎರಡು ದಿನಗಳ ಪ್ರಯಾಣದ ದೂರ ಒಂದು ಕಣಿವೆ ಆಗಿತ್ತು ಅಲ್ಲಿ ಹವಾಝುನ್ ವಾಸವಾಗಿದ್ದರು. ಎರಡು ದಿನಗಳ ಉಲ್ಲೇಖ ಎಂದರೆ, ನನ್ನ ಪ್ರಕಾರ ಪ್ರಾಚೀನಕಾಲದಲ್ಲಿ ಹಳೆಯ-ಶೈಲಿಯ ಸವಾರಿಗಳು ಕುದುರೆಗಳು ಅಥವಾ ಒಂಟೆಗಳಿಂದ ಪ್ರಯಣಿಸುತ್ತಿದ್ದರು. ಖೈಬರ್ ಜನರ ಕ್ಷೇತ್ರಕ್ಕೆ ಪೈಗಂಬರ್(ಸ) ಇಳಿದಾಗ ಅವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರಿಗೆ ಧ್ವಜವನ್ನು ನೀಡಿದರು ಎಂದು ಬುರೈದಾ ಇಸ್ಲಾಮಿಯಿಂದ ನಿರೂಪಿಸಲಾಗಿದೆ. (ಅತ್ತಬಖಾತುಲ್ ಕುಬ್ರಾ, ಸಂಪುಟ-3, ಪುಟ-206, ದಾರ್ ಅಲ್-ಕುತುಬ್ ಅಲ್-ಇಲ್‌ಮಿಯಾ ಬೈರೂತ್, ಲೆಬನಾನ್ 2012) (ಫರ್ಹಾಂಗ್ ಸಿರಾ, ಪುಟ-75, ಝುವಾರಿ ಅಕಾಡಮಿ ಕರಾಚಿ 2003)

ಚರಿತ್ರೆಯ ಗ್ರಂಥಗಳಲ್ಲಿ, ಮೊತ್ತಮೊದಲಾಗಿ ಖೈಬರ್ ಯುದ್ಧದಲ್ಲಿ ಹಝ್ರತ್ ಪೈಗಂಬರರ(ಸ) ಧ್ವಜದ ಪ್ರಸ್ತಾಪ ಬರುತ್ತದೆ. ಅದಕ್ಕೆ ಮುಂಚೆ ಸಣ್ಣ ಬಾವುಟಗಳು ಮಾತ್ರವಿರುತ್ತಿದ್ದುವು. ಖೈಬರ್ ಜನರ ಕ್ಷೇತ್ರದಲ್ಲಿ ಪೈಗಂಬರ್(ಸ) ತಂಗಿದಾಗ ಅವರು ಹಝ್ರತ್ ಉಮರ್ ಬಿನ್ ಖತ್ತಾಬ್‌ಗೆ ಧ್ವಜವನ್ನು ನೀಡಿದರು ಎಂದು ಬರೀದಾ ಅಸ್ಲಾಮಿಯಿಂದ ವರದಿಯಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಚರಿತ್ರೆಯ ಗ್ರಂಥಗಳಲ್ಲಿ, ಮೊತ್ತಮೊದಲಾಗಿ ಖೈಬರ್ ಯುದ್ಧದಲ್ಲಿ ಹಝ್ರತ್ ಪೈಗಂಬರರ(ಸ) ಧ್ವಜದ ಪ್ರಸ್ತಾಪ ಬರುತ್ತದೆ. ಅದಕ್ಕೆ ಮುಂಚೆ ಸಣ್ಣ ಬಾವುಟಗಳು ಮಾತ್ರವಿರುತ್ತಿದ್ದುವು. ಹಝ್ರತ್ ಪೈಗಂಬರರ(ಸ) ಉಖಾಬ್ ಎಂಬ ಹೆಸರಿನ ಈ ಧ್ವಜ ಕಪ್ಪು ಬಣ್ಣದ್ದಾಗಿತ್ತು. ಅದನ್ನು ಉಮ್ಮುಲ್

ಮೂಅ್‌ಮಿನೀನ್ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರ ಚಾದರದಿಂದ ತಯಾರಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಖೈಬರ್‌ನಲ್ಲಿ ತಂಗಿದ್ದಾಗ ತೀವ್ರವಾದ ತಲೆನೋವಿನ ಕಾರಣದಿಂದ ಅವರಿಗೆ ಹೊರಗೆ ಬರಲಾಗಲಿಲ್ಲ. ಈ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಅಬೂಬಕರ್‌ರಿಗೆ(ರ) ಕೊಟ್ಟರು. ಅನಂತರ ಅದೇ ಧ್ವಜವನ್ನು ಹಝ್ರತ್ ಉಮರ್‌ರಿಗೆ(ರ) ನೀಡಿದರು. ಅಂದು ತೀವ್ರವಾದ ಯುದ್ಧ ನಡೆಯಿತು. ಆದಾಗ್ಯೂ ಮುಸ್ಲಿಮರು ಕೋಟೆಯ ಮೇಲೆ ವಿಜಯ ಸಾಧಿಸಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರ ಮೂಲಕ ಅಲ್ಲಾಹನು ವಿಜಯವನ್ನು ನೀಡಲಿರುವನೋ ಆ ವ್ಯಕ್ತಿಗೆ ನಾಳೆ ನಾನು ಈ ಧ್ವಜವನ್ನು ಕೊಡುವೆನು. ಹೀಗೆ ಮುಂದಿನ ದಿನ ಧ್ವಜವನ್ನು ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ ನೀಡಿದರು. ಅವರ ಕೈಗಳಿಂದ ಅಲ್ಲಾಹನು ವಿಜಯವನ್ನು ಪ್ರದಾನ ಮಾಡಿದನು. (ಸಬ್‌ಲುಲ್ ಹುದಾ ಎರ್‌ಶ್ಶಾದ್, ಸಂಪುಟ–5, ಪುಟಗಳು–120, 124, 125)

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಖೈಬರಿನ ಖರ್ಜೂರದ ತೋಟಗಳನ್ನು ಹಝ್ರತ್ ಪೈಗಂಬರ್(ಸ) ಯಹೂದಿಯರಿಗೆ ಯಾವ ಶರತ್ತಿನ ಮೇಲೆ ನೀಡಿದ್ದರು ಎಂದು ನಾನು ಇಬ್ನು ಶಿಹಾಬ್ ಝ್ಝೊಹ್‌ರಿಯೊಡನೆ ಕೇಳಿದೆ. ಝ್ಝೊಹ್‌ರಿ ಹೇಳಿದರು: ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಖೈಬರ್‌ನ ಮೇಲೆ ವಿಜಯ ಸಾಧಿಸಿದ್ದರು. ಅದರಿಂದ ಲಭಿಸಿದ ಯುದ್ಧ ಸಂಪತ್ತಿನಲ್ಲಿ ಐದನೇ ಒಂದು ಭಾಗ ಹಝ್ರತ್ ಪೈಗಂಬರರದ್ದಾಗಿತ್ತು(ಸ). ಅದನ್ನು ಅವರು ಮುಸ್ಲಿಮರಿಗೆ ವಿತರಣೆ ಮಾಡಿದರು. ಯುದ್ಧದ ನಂತರ ದೇಶವನ್ನು ತೊರೆಯಲು ತಯಾರಾಗಿದ್ದ ಯಹೂದಿಗಳು ತಮ್ಮ ಕೋಟೆಗಳಿಂದ ಇಳಿದುಬಂದರು. ಆಗ ಹಝ್ರತ್ ಪೈಗಂಬರ್(ಸ) ಅವರನ್ನು ಕರೆದು ಹೇಳಿದರು: ನೀವು ಇಚ್ಛಿಸುವವರಾದರೆ, ಈ ಸಂಪತ್ತನ್ನು ನಿಮಗೆ ಒಪ್ಪಿಸಬಹುದಾಗಿದೆ. ಆದರೆ ಶರತ್ತು ಏನೆಂದರೆ, ನೀವು ಇದರಲ್ಲಿ ಕೆಲಸ ಮಾಡಿಕೊಂಡು ಅದರ ಪ್ರತಿಫಲವನ್ನು ನಮ್ಮ ಮತ್ತು ನಿಮ್ಮ ಮಧ್ಯೆ ಸಮವಾಗಿ ವಿತರಿಸಲಾಗುವುದು. ಯಹೂದಿಯರು ಈ ನಿಬಂಧನೆಯನ್ನು ಅಂಗೀರಕರಿಸಿದರು. ಯಹೂದಿಯರು ಅದರಲ್ಲಿ ಕೆಲಸ ಮಾಡುತ್ತಾ ಇದ್ದರು. ತೋಟದ ಹಣ್ಣುಗಳನ್ನು ವಿತರಿಸಲು ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ್‌ರನ್ನು(ರ) ಕಳುಹಿಸುತ್ತಿದ್ದರು. ಅವರು ಫಲಗಳನ್ನು ನ್ಯಾಯವಾಗಿ ವಿತರಿಸುತ್ತಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ನಿಧನರಾದರು. ಹಝ್ರತ್ ಪೈಗಂಬರರ(ಸ) ನಂತರ ಹಝ್ರತ್ ಅಬೂಬಕರರ(ರ) ಖಿಲಾಫತ್ ಕಾಲದಲ್ಲೂ ಇದೇ ರೀತಿ ಜಾರಿಯಲ್ಲಿತ್ತು. ಹಝ್ರತ್ ಉಮರ್(ರ) ತನ್ನ ಖಿಲಾಫತಿನ ಆರಂಭ ಕಾಲದಲ್ಲಿ ಇದೇ ರೀತಿಯನ್ನು ಅವಲಂಬಿಸಿದರು. ಅನಂತರ ಅರೇಬಿಯಾ ಭೂಖಂಡದಲ್ಲಿ ಎರಡು ಧರ್ಮಗಳು ಒಟ್ಟಿಗೆ ಇರಲಾರವು ಎಂದು ಹಝ್ರತ್ ಪೈಗಂಬರ್(ಸ) ತನ್ನ ಜೀವಿತದ ಕೊನೆಯ ರೋಗಾವಸ್ಥೆಯ ವೇಳೆ ಹೇಳಿದ್ದಾಗಿ ಹಝ್ರತ್ ಉಮರ್‌ರಿಗೆ(ರ) ಅವರ ಖಿಲಾಫತ್ ಕಾಲದಲ್ಲಿ ಗೊತ್ತಾಯಿತು. ಹಝ್ರತ್ ಉಮರ್(ರ) ಇದರ ಬಗ್ಗೆ ಅನ್ವೇಷಣೆ ನಡೆಸಿದರು. ಇದು ಸರಿಯೆಂದು ಸಾಬೀತಾದಾಗ, ಅವರು ಖೈಬರ್‌ನಿಂದ ಯಹೂದಿಯರಿಗೆ ಹೀಗೆ ಪತ್ರ ಬರೆದರು: ನೀವು ದೇಶವನ್ನು ತೊರೆಯಲು ಅಲ್ಲಾಹನು ಆದೇಶಿಸಿದ್ದಾನೆ. ಅರೇಬಿಯ ಭೂಖಂಡದಲ್ಲಿ ಎರಡು ಧರ್ಮಗಳು ಇರಲಾರದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು ಎಂಬ ಸಂಗತಿ ನನಗೆ ಗೊತ್ತಾಗಿದೆ. ಆದ್ದರಿಂದ ನಿಮ್ಮಲ್ಲಿ ಯಾರಾದರೂ ಹಝ್ರತ್ ಪೈಗಂಬರ್‌ರೊಂದಿಗೆ(ಸ) ಏನಾದರೂ ಒಪ್ಪಂದ ಮಾಡಿರುವವರಾದರೆ ಅದನ್ನು ತೆಗೆದುಕೊಂಡು ನನ್ನ ಬಳಿಗೆ ಬನ್ನಿರಿ. ಅದನ್ನು ಜಾರಿಗೊಳಿಸಲಾಗುವುದು. ಯಾರ ಬಳಿ ಹಝ್ರತ್ ಪೈಗಂಬರರ(ಸ) ಯಾವುದೇ ಒಪ್ಪಂದವಿಲ್ಲವೋ ಅವರು ದೇಶವನ್ನು ತೊರೆಯಲು ತಯಾರಿ ಮಾಡಲಿ. ಇಲ್ಲೇ ಇರಿಸಲು ಯಾರೊಡನೆಯಾದರೂ ಹಝ್ರತ್ ಪೈಗಂಬರ್(ಸ) ವಾಗ್ದಾನ ಮಾಡಿರುವುದಾದರೆ ಸರಿ. ಅದನ್ನು ನಾನು ಈಡೇರಿಸುವೆನು. ಆದರೆ ಹಾಗೇನಾದರೂ ಇಲ್ಲದಿದ್ದರೆ ಈ ಜಾಗವನ್ನು ನೀವು ಬಿಟ್ಟುಬಿಡಬೇಕಾಗುವುದು. ಹೀಗೆ ಹಝ್ರತ್ ಪೈಗಂಬರರೊಂದಿಗೆ(ಸ) ಯಾವುದೇ ಒಪ್ಪಂದ ಮಾಡಿರದ ಎಲ್ಲ ಯಹೂದಿಯರನ್ನು ಹಝ್ರತ್ ಉಮರ್(ರ) ದೇಶದಿಂದ ಹೊರಗೆ ಹಾಕಿದರು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ನಾನು, ಹಝ್ರತ್ ಝುಬೈರ್ ಬಿನ್ ಅವ್ವಾಮ್(ರ) ಮತ್ತು ಹಝ್ರತ್ ಮುಕ್ದಾದ್ ಬಿನ್ ಅಸ್ವಾದ್(ರ) ಅವರ ಆಸ್ತಿಯನ್ನು ನೋಡಲು ಖೈಬರ್‌ಗೆ ಹೋಗಿದ್ದೆವು ಮತ್ತು ನಾವು ಅಲ್ಲಿಗೆ ತಲುಪಿದಾಗ ನಾವು ಪ್ರತ್ಯೇಕವಾಗಿ ನಮ್ಮ ನಮ್ಮ ಆಸ್ತಿಯ ಕಡೆಗೆ ಹೋದೆವು. ನನ್ನ ರಾತ್ರಿ ಹೊತ್ತು ಮಲಗಿದ್ದಾಗ ನನ್ನ ಮೇಲೆ ಹಲ್ಲೆ ನಡೆಯಿತು. ನನ್ನ ತೋಳುಗಳ ಕೀಲುಗಳು ನನ್ನ ಮೊಣಕೈಯಿಂದ ಬಿದ್ದವು. ಬೆಳಿಗ್ಗೆ ಆದಾಗ, ನನ್ನ ಇಬ್ಬರು ಸಹಚರರು ಕೂಗುತ್ತಾ ನನ್ನ ಬಳಿಗೆ ಬಂದು "ನಿಮಗೆ ಯಾರು ಹೀಗೆ ಮಾಡಿದರು?" ನನಗೆ ಗೊತ್ತಿಲ್ಲ ಎಂದು ನಾನು ಹೇಳಿದರು. ಅವರಿಬ್ಬರೂ ನನ್ನ ತೋಳುಗಳನ್ನು ನೇರಗೊಳಿಸಿದ ನಂತರ ನನ್ನನ್ನು ಹಝ್ರತ್ ಉಮರ್(ರ) ರವರ ಬಳಿ ಕರೆದೊಯ್ದರು. ಹಝ್ರತ್ ಉಮರ್(ರ)ರವರು ಹೇಳಿದರು ಇದು ಯಹೂದಿಗಳ ಕೃತ್ಯವಾಗಿದೆ. ತದನಂತರ ಅವರು ಜನರನ್ನು ಉದ್ದೇಶಿಸಲು ಎದ್ದುನಿಂತು: ಓ ಜನರೇ! ಪೈಗಂಬರ್(ಸ) ಅವರು ಖೈಬರ್‌ನ ಯಹೂದಿಗಳೊಂದಿಗೆ ನಾವು ಬಯಸಿದಾಗಲೆಲ್ಲಾ ಅವರನ್ನು ಹೊರಹಾಕುವೆವು ಎಂಬ ಳರತ್ತಿನೊಂದಿಗೆ ವ್ಯವಹರಿಸಿದ್ದರು. ಈಗ ಯಹೂದಿಗಳು ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರ ಮೇಲೆ ದಾಳಿ ಮಾಡಿದರು ಮತ್ತು ಅದು ನಿಮಗೆ ತಲುಪಿದಂತೆ ಅವರ ತೋಳುಗಳ ಕೀಲುಗಳನ್ನು ತೆಗೆದುಹಾಕಿದರು. ಈ ಹಿಂದೆ ಅನ್ಸಾರಿ ಅವರ ಮೇಲೂ ಈ ಜನರು ಹಲ್ಲೆ ನಡೆಸಿದ್ದರು. ಅವರು ಅವರ ಸಹಚಾರರಾಗಿದ್ದಾರೆ ಎಂಬುದರಲ್ಲಿ ನಮಗೆ ಯಾವುದೇ ಸಂದೇಹವಿಲ್ಲ. ಅವರನ್ನು ಹೊರತುಪಡಿಸಿ ನಮಗೆ ಅಲ್ಲಿ ಶತ್ರುಗಳಿಲ್ಲ. ಹಾಗಾಗಿ ಖೈಬರ್‌ನಲ್ಲಿ ಯಾರಾದರೂ ಯಾವುದೇ ಆಸ್ತಿಯನ್ನು ಹೊಂದಿದ್ದರೆ ಅದನ್ನು ನೋಡಿಕೊಳ್ಳಬೇಕು ಏಕೆಂದರೆ ನಾನು ಯಹೂದಿಗಳನ್ನು ಹೊರಹಾಕಲಿದ್ದೇನೆ ಮತ್ತು ಅವರು ಆ ಯಹೂದಿಯರನ್ನು ಹೊರಹಾಕಿದ್ದರು. ಅಬ್ದುಲ್ಲಾ ಇಬ್ನ್ ಮಕ್ನಾಫ್ ಹೇಳುತ್ತಾರೆ ಹಝ್ರತ್ ಉಮರ್(ರ) ಯಹೂದಿಗಳನ್ನು ಖೈಬರ್ ನಿಂದ ಓಡಿಸಿದಾಗ, ಅವರು ಸ್ವತಃ ಅನ್ಸಾರ್ ಮತ್ತು ಮುಹಜಿರೀನ್ ಮತ್ತು ಹಝ್ರತ್ ಜಬ್ಬರ್ ಇಬ್ನ್ ಸಖರ್(ರ) ಮತ್ತು ಹಝ್ರತ್ ಝೈದ್ ಇಬ್ನ್ ಸಾಬಿತ್(ರ) ಅವರೊಂದಿಗೆ ಹೊರಟರು. ಮದೀನದ ಜನರಿಗೆ ಹಣ್ಣುಗಳನ್ನು ಅಂದಾಜು ಮಾಡಿದವರು ಮತ್ತು ಅವರ ಅಕೌಂಟೆಂಟ್ ಆಗಿದ್ದವರು ಹಝ್ರತ್ ಜಬ್ಬರ್(ರ). ಅವರಿಬ್ಬರು ಖೈಬರ್ ಅನ್ನು ಅವರ ವಂಶಸ್ತರಲ್ಲಿ ಮುಂಚೆಯ ಹಂಚಿಕೆಯ ಪ್ರಕಾರದಲ್ಲಿಯೇ ಹಂಚಿದರು. (ಸೀರತ್ ಇಬ್ನ್ ಹಿಶಮ್, ಪುಟ–710, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಹಾತಿಬ್(ರ) ಅವರ ಪ್ರಕಾರ, ಮಹಿಳೆಯೊಬ್ಬಳು ಮಕ್ಕಾದ ಮುಶ್ರಿಕ್‌ಗಳಿಗೆ ರಹಸ್ಯವಾಗಿ ಪತ್ರವೊಂದನ್ನು ಕಳುಹಿಸಿದಳು ಅವಳು ಆ ಪತ್ರದಲ್ಲಿ ಪೈಗಂಬರ್(ಸ)ರವರ ಕೆಲವು ಉದ್ದೇಶಗಳನ್ನು ತಿಳಿಸಿದಳು. ಪೈಗಂಬರ್(ಸ) ಅವರಿಗೆ ಅಲ್ಲಾಹನಿಂದ ಇದರ ಬಗ್ಗೆ ತಿಳಿಸಲ್ಪಟ್ಟಿತು ಮತ್ತು ಹಝ್ರತ್ ಅಲಿ(ರ) ಅವರನ್ನು ಕಳುಹಿಸಿದರು ಆ ಮಹಿಳೆ ದಾರಿಯಲ್ಲಿ ಸಿಕ್ಕಿಬಿದ್ದಳು. ಅದರ ನಂತರ, ಪೈಗಂಬರ್(ಸ) ರವರು ಹಾತಿಬ್ ಅವರನ್ನು ಇದರ ಬಗ್ಗೆ ಪ್ರಶ್ನಿಸಿದಾಗ, ಅವರು ತಮ್ಮ ಕ್ಷಮೆಯನ್ನು ಅರ್ಪಿಸಿದರು ಮತ್ತು ಅವರು ತಮ್ಮ ಈಮಾನಿನ ಬಗ್ಗೆ ನನ್ನ ಈಮಾನಿನಲ್ಲಿ ದಾರಿತಪ್ಪುವಿಕೆ ಇಲ್ಲ ನನ್ನ ಈಮಾನ್ ಪರಿಪೂರ್ಣವಾಗಿದೆ ಎಂದು ಹೇಳಿದರು. ಹಝ್ರತ್ ಹಾತಿಬ್(ರ) ಭರವಸೆ ನೀಡಿದಾಗ ಪೈಗಂಬರ್(ಸ)ರವರು ಅದನ್ನು ಒಪ್ಪಿಕೊಂಡರು ಆದರೆ ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್! ಈ ಕಪಟಗಾರನ ಕುತ್ತಿಗೆಯನ್ನು ನಾನು ಕತ್ತರಿಸುವೆನು. ಪೈಗಂಬರ್(ಸ) ಹೇಳಿದರು: "ನೋಡಿ, ಅವರು ಬದ್ರ್ ಯುದ್ಧದಲ್ಲಿ ಪಾಲ್ಗೊಂಡಿದ್ದರು ಮತ್ತು ಬದ್ರ್ ಯುದ್ಧದಲ್ಲಿ ಭಾಗವಹಿಸಿದವರನ್ನು ಅಲ್ಲಾಹನು ನೋಡಿದ್ದಾನೆಂದು ನಿಮಗೆ ತಿಳಿದಿದೆಯೇ?" ಮತ್ತೆ ಅವರು ಹೇಳಿದರು: ನಿಮಗೆ ಬೇಕಾದುದನ್ನು ಮಾಡಿ ಆದರೆ ನಾನು ನಿಮ್ಮ ಪಾಪಗಳನ್ನು ಕಡೆಗಣಿಸಿರುವೆನು. (ಬುಖಾರಿ ಕಿತಾಬ್ ಅಲ್‌ಮಗಾಝಿ, ಹದೀಸ್–4274)

ಹಝ್ರತ್ ಉಮರ್‌ಗೆ ನೇರವಾಗಿ ಸಂಬಂಧವಿಲ್ಲದ ಮತ್ತೊಂದು ಘಟನೆ ಇದೆ ಆದರೆ ಹಝ್ರತ್ ಉಮರ್(ರ) ಅವರನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿದೆ ಆದ್ದರಿಂದ ನಾನು ಅದನ್ನು ಪ್ರಸ್ತಾಪಿಸುತ್ತೇನೆ. ಹುನೈನ್ ಘಟನೆ ನಡೆದಾಗ, ಓರ್ವ ಮುಸ್ಲಿಮ್ ವ್ಯಕ್ತಿ ಮುಶ್ರಿಕ್ ವ್ಯಕ್ತಿಯೊಂದಿಗೆ ಜಗಳವಾಡುತ್ತಿದ್ದನು ಮತ್ತು ಇನ್ನೊಬ್ಬ ಮುಶ್ರಿಕ್ ವ್ಯಕ್ತಿ ಅವನನ್ನು ಮೋಸಗೊಳಿಸಲು ಮತ್ತು ರಹಸ್ಯವಾಗಿ ಹಿಂದಿನಿಂದ ಆಕ್ರಮಣ ಮಾಡಲು ಬಯಸುತ್ತಿದ್ದನ್ನು ನೋಡಿದೆ ಎಂದು ಹಝ್ರತ್ ಅಬು ಖತಾದಾ ಹೇಳುತ್ತಾರೆ. ಇದನ್ನು ನೋಡಿದ ನಾನು ಮುಸ್ಲಿಮನನ್ನು ಮೋಸಗೊಳಿಸಲು ಬಯಸಿದ ವ್ಯಕ್ತಿಯ ಬಳಿಗೆ ಆತುರದಿಂದ ಹೋದೆ. ಅವನು ನನ್ನನ್ನು ಹೊಡೆಯಲು ಕೈ ಎತ್ತಿದನು ಆಗ ನಾನು ಆತನ ಕೈ ಮೇಲೆ ಹೊಡೆದು ಅದನ್ನು ಕತ್ತರಿಸಿದೆ. ತದನಂತರ ಅವನು ನನ್ನನ್ನು ಹಿಡಿದು ತುಂಬಾ ಜೋರಾಗಿ ನನಗೆ ಎಳೆದನು, ನಾನು ಅಸಹಾಯಕನಾಗಿದ್ದೆ. ನಂತರ ಅವನು ನನ್ನನ್ನು ಬಿಟ್ಟುಹೋದನು ಅವನು ಸಡಿಲಗೊಂಡನು, ಆಗ ನಾನು ಅವನನ್ನು ತಳ್ಳಿ ಅವನನ್ನು ಕೊಂದು ಹಾಕಿದೆನು. ಅಲ್ಲಿಯ ಪರಿಸ್ಥಿತಿ ಏನಾಗಿತ್ತು ಎಂದರೆ ಮುಸ್ಲಿಮರು ಸೋತಿ ಓಡಿಹೋದರು. ನಾನು ಸಹ ಅವರೊಂದಿಗೆ ಓಡಿಹೋದೆ. ಆಗ ನಾನು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ಜನರೊಂದಿಗೆ ಇರುವುದನ್ನು ನೋಡುತ್ತೇನೆ. ನಾನು ಅವರನ್ನು ಕೇಳಿದೆ, "ಓಡಿಹೋದ ಜನರಿಗೆ ಏನಾಯಿತು?" ಅವರು, ಹಝ್ರತ್ ಉಮರ್(ರ) ಅವರು ಅಲ್ಲಾಹನ ಉದ್ದೇಶವಿರಬಹುದು ಎಂದು ಹೇಳಿದರು. ನಂತರ ಜನರು ಪೈಗಂಬರ್(ಸ) ರವರ ಬಳಿ ಹಿಂತಿರುಗಿದರು. ಪೈಗಂಬರ್(ಸ) ಹೇಳಿದರು: ಕೊಂದು ಹೋದನ ಬಗ್ಗೆ

ಅವನು ಆತನ್ನು ಕೊಂದನೆಂದು ಯಾರು ಪುರಾವೆ ನೀಡುತ್ತಾರೋ, ಆಗ ಕೊಂದು ಹೋದವನ ವಸ್ತುಗಳು ಅವನ ಕೊಲೆಗಾರನಿಗೆ ಸೇರುತ್ತವೆ. ನನ್ನ ಕೊಂದು ಹೋದವನ ಬಗ್ಗೆ ಪುರಾವೆಗಳನ್ನು ಹುಡುಕಲು ನಾನು ಎದ್ದೆ, ಆದರೆ ನನ್ನ ಪರವಾಗಿ ಸಾಕ್ಷಿ ಹೇಳುವ ಯಾರನ್ನೂ ನಾನು ನೋಡಲಿಲ್ಲ ಆದ್ದರಿಂದ ನಾನು ಕುಳಿತುಕೊಂಡೆ. ನಂತರ ನನಗೆ ಒಂದು ಉಪಾಯ ಹೊಳೆಯಿತು ಈ ಕೊಂದು ಹೋದವನ ಘಟನೆಯನ್ನು ನಾನು ಪೈಗಂಬರ್(ಸ) ಅವರಿಗೆ ವಿವರಿಸಿದೆ. ಪೈಗಂಬರ್(ಸ)ರವರ ಪಕ್ಕದಲ್ಲಿ ಕುಳಿತಿದ್ದ ಜನರಲ್ಲಿ ಓರ್ವರು ಹೇಳಿದರು ಅವರು ಹೇಳುವ ಕೊಂದು ಹೋದವನ ಆಯುಧ ನನ್ನ ಬಳಿ ಇದೆ ಆ ಆಯುಧದ ಬದಲು ಅವರನ್ನು ಏನಾದರು ನೀಡಿ ಅವರನ್ನು ರಾಜಿ ಮಾಡಿಸಿರಿ. ಹಝ್ರತ್ ಅಬೂಬಕ್ಕರ್(ರ) ಹೇಳುತ್ತಾರೆ ಪೈಗಂಬರ್(ಸ) ಅವರು ಖುರೈಶ್‌ನ ಸಾಮಾನ್ಯ ವ್ಯಕ್ತಿಗೆ ಸರಕುಗಳನ್ನು ನೀಡಲು ಮತ್ತು ಅಲ್ಲಾಹನ ಸಿಂಹಗಳಲ್ಲಿ ಒಂದನ್ನು ಅಲ್ಲಾಹ್ ಮತ್ತು ಅವನ ರಸೂಲ್(ಸ)ನಿಂದ ಬಿಡಲು ಸಾಧ್ಯವಿಲ್ಲ. ಹಝ್ರತ್ ಖತಾದ(ರ) ಹೇಳುತ್ತಾರೆ ಪೈಗಂಬರ್(ಸ) ಅವರು ಎದ್ದು ನಿಂತು ಆ ಸರಕುಗಳನ್ನು ನನಗೆ ನೀಡಿದರು. ನಾನು ಅದರಿಂದ ಒಂದು ಸಣ್ಣ ಖರ್ಜೂರದ ತೋಟವನ್ನು ಖರೀದಿಸಿದೆ ಅದು ಇಸ್ಲಾಮಿನಲ್ಲಿ ಆಸ್ತಿಯಾಗಿ ನಾನು ರಚಿಸಿದ ಮೊದಲ ಆಸ್ತಿ ಆಗಿತ್ತು. (ಸಾಹಿಹ್ ಅಲ್-ಬುಖಾರಿ, ಕಿತಾಬುಲ್‌ಮಗಾಝಿ, ಹದೀಸ್-4322)

ಜಾಹಿಲಿಯಾ ಕಾಲದಲ್ಲಿ ಹರಕೆ ಮಾಡಿದ ಒಂದು ಇತಿಕಾಫ್ ಕುರಿತು ಹಝ್ರತ್ ಉಮರ್(ರ) ಹುನೈನ್ ಯುದ್ಧದಿಂದ ಮರಳಿಬರುವಾಗ ಹಝ್ರತ್ ಪೈಗಂಬರರೊಡನೆ(ಸ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಜಾಹಿಲಿಯ ಕಾಲದ್ದಾದರೂ ಆ ಹರಕೆಯನ್ನು ಈಡೇರಿಸು. (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ ಹದೀಸ್-4320) ಇಸ್ಲಾಮಿಕ ಶಿಕ್ಷಣದ ಒಳಗೆ ಇದ್ದುಕೊಂಡು ಮಾಡಬಹುದಾದ ಎಲ್ಲವನ್ನು ಈಡೇರಿಸಬಹುದು.

ತಬೂಕ್ ಯುದ್ಧದಲ್ಲಿ ಹಝ್ರತ್ ಉಮರ್(ರ) ವಹಿಸಿದ ಪಾತ್ರದ ಬಗ್ಗೆ ಹೀಗೆ ಪ್ರಸ್ತಾಪ ಬರುತ್ತದೆ. ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಧನತ್ಯಾಗಕ್ಕಾಗಿ ವಿಶೇಷವಾಗಿ ಮನವಿ ಮಾಡಿದರು. ಇದರ ಬಗ್ಗೆ ಹಝ್ರತ್ ಉಮರ್(ರ) ಹೇಳುತ್ತಾರೆ: ಒಂದು ದಿನ ಹಝ್ರತ್ ಪೈಗಂಬರ್(ಸ) ನಮ್ಮೊಡನೆ ಧನತ್ಯಾಗವನ್ನು ಮಾಡಲು ಹೇಳಿದರು. ಆ ಸಮಯದಲ್ಲಿ ನನ್ನ ಬಳಿ ಸಂಪತ್ತು ಇತ್ತು. ಇಂದು ಇಂದು ನಾನು ಅಬೂಬಕರ್‌ಗಿಂತ(ರ) ಮುಂದೆ ಆಗುವೆನು ಎಂದು ಯೋಚಿಸಿಕೊಂಡು ಅವರು ನನ್ನ ಬಳಿಯಲ್ಲಿದ್ದ ಸಂಪತ್ತಿನ ಅರ್ಧ ಭಾಗವನ್ನು ತೆಗೆದುಕೊಂಡು ಹೋದೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನಿನ್ನ ಕುಟುಂಬಕ್ಕೆ ಏನು ಬಾಕಿಯಿರಿಸಿದ್ದೀಯ? ನಾನು ಹೇಳಿದೆ: ಕೊಂಡು ಬಂದದ್ದಷ್ಟೇ ಬಿಟ್ಟು ಬಂದಿದ್ದೇನೆ. ಹಝ್ರತ್ ಅಬೂಬಕರ್(ರ) ಅವರ ಬಳಿಯಿದ್ದ ಎಲ್ಲವನ್ನು ತೆಗೆದುಕೊಂಡು ಬಂದರು. ನಾನು ಅರ್ಧವನ್ನು ತೆಗೆದುಕೊಂಡು ಬಂದಿದ್ದೆ. ಅವರು ಎಲ್ಲವನ್ನು ಕೊಂಡುಬಂದಿದ್ದರು. ತನ್ನ ಕುಟುಂಬಕ್ಕೆ ಏನು ಬಿಟ್ಟುಬಂದಿದ್ದೀಯ ಎಂದು ಹಝ್ರತ್ ಪೈಗಂಬರ್(ಸ) ಅವರೊಡನೆ ಸಹ ಕೇಳಿದರು. ಆಗ ಅವರು ಹೇಳಿದರು: ನಾನು ಅವರಿಗಾಗಿ ಅಲ್ಲಾಹ್ ಮತ್ತು ಅವನ ರಸೂಲ್‌ನನ್ನು ಬಿಟ್ಟುಬಂದಿರುವೆನು. ಹಝ್ರತ್ ಉಮರ್(ರ) ಯೋಚಿಸಿದರು: ಈಗಂತು ನಾನು ಅವರೊಂದಿಗೆ ಯಾವ ವಿಷಯದಲ್ಲೂ ಮುಂದೆ ಬರಲು ಸಾಧ್ಯವಿಲ್ಲ. (ಸುನನ್ ಅಬೂದಾವೂದ್, ಹದೀಸ್-1678)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಜಿಹಾದಿನ ಸಂದರ್ಭದ ಬಗ್ಗೆ ಹಝ್ರತ್ ಉಮರ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಎಲ್ಲ ವಿಷಯದಲ್ಲೂ ಸದಾ ನನಗಿಂತ ಮುಂದೆ ಇರುತ್ತಾರೆ ಎಂದು ನಾನು ಯೋಚಿಸಿದೆ. ಇಂದು ನಾನು ಅವರಿಗಿಂತ ಮುಂದೆ ಬರುವೆನು. ಈ ಯೋಚನೆಯಿಂದ ನಾನು ಮನೆಗೆ ಹೋದೆನು. ನನ್ನ ಸಂಪತ್ತಿನಿಂದ ಅರ್ಧ ಸಂಪತ್ತನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್‌ರಿಗೆ(ಸ) ಸಮರ್ಪಿಸಲು ಹೋದೆನು. ಅಂದು ಇಸ್ಲಾಮಿಗೆ ಅತ್ಯಂತ ಆಪತ್ಕಾಲವಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ) ತನ್ನ ಸಂಪೂರ್ಣ ಸಂಪತ್ತನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್‌ರಿಗೆ(ಸ) ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಅಬೂಬಕರ್, ಮನೆಯಲ್ಲಿ ಏನು ಬಿಟ್ಟುಬಂದಿದ್ದೀಯಾ? ಅವರು ಹೇಳಿದರು: ಅಲ್ಲಾಹ್ ಮತ್ತು ಅಲ್ಲಾಹನ ರಸೂಲ್. ಹಝ್ರತ್ ಉಮರ್(ರ) ಹೇಳುತ್ತಾರೆ: ಇದನ್ನು ಕೇಳಿಕೊಂಡು ನನಗೆ ನಾಚಿಕೆಯಾಯಿತು. ಇಂದು ನಾನು ನನ್ನ ಸರ್ವ ಶಕ್ತಿಯನ್ನು ಉಪಯೋಗಿಸಿಕೊಂಡು ಅಬೂಬಕರ್‌ಗಿಂತ ಮುಂದೆ ಬರಲು ಬಯಸಿದೆ. ಆದರೆ ಇಂದು ಸಹ ಅಬೂಬಕರ್ ನನಗಿಂತ ಮುಂದೆ ಆದರು.
(ಫಝಾಎಲುಲ್ ಖುರ್‌ಆನ್(3), ಅನ್ವಾರುಲ್ ಉಲೂಮ್ ಸಂಪುಟ-11, ಪುಟ-577)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನ ಧರ್ಮಕ್ಕಾಗಿ ತಮ್ಮ ಜೀವಗಳನ್ನು ಆಡುಗಳು ಮತ್ತು ಕುರಿಗಳಂತೆ ತ್ಯಾಗಮಾಡುತ್ತಿದ್ದ ಒಂದು ಕಾಲವಿತ್ತು. ಸಂಪತ್ತಿನ ಬಗ್ಗೆ ಏನು ಹೇಳುವುದು. ಹಝ್ರತ್ ಅಬೂಬಕರ್(ರ) ಒಂದಕ್ಕಿಂತ ಹೆಚ್ಚು ಬಾರಿ ಮನೆಯಲ್ಲಿದ್ದ ಎಲ್ಲವನ್ನು ಸಮರ್ಪಿಸಿದರು. ಸೂಜಿಯನ್ನು ಕೂಡ ತನ್ನ ಮನೆಯಲ್ಲಿ ಇರಿಸಲಿಲ್ಲ. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ತನ್ನ ಶಕ್ತ್ಯಾನುಸಾರ ಮತ್ತು ಹಝ್ರತ್ ಉಸ್ಮಾನ್ ತನ್ನ ಶಕ್ತಿ ಮತ್ತು ನೆಲೆಯ ಪ್ರಕಾರ ತ್ಯಾಗ ಮಾಡಿದರು. ಎಲ್ಲ ಸಹಾಬರು ತಮ್ಮ ಜೀವಗಳು ಮತ್ತು ಸಂಪತ್ತುಗಳು ಸಮೇತ ಈ ದೈವಿಕ ಧರ್ಮಕ್ಕಾಗಿ ತ್ಯಾಗ ಮಾಡಲು ತಯಾರಾದರು. ಆದರೆ ಕೆಲವರು ಬೈಅತ್ ಮಾಡುತ್ತಾರೆ ಮತ್ತು ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುತ್ತೇವೆ ಎಂದೂ ಕರಾರು ಮಾಡಿರುತ್ತಾರೆ. ಆದರೆ ನೆರವು ಮತ್ತು ಸಹಾಯದ ಆವಶ್ಯಕತೆಯಿರುವ ಸಂದರ್ಭದಲ್ಲಿ ಖರ್ಚು ಮಾಡದೇ ತಮ್ಮ ಜೇಬುಗಳನ್ನು ಅದುಮಿಕೊಂಡು ಹಿಡಿಯುತ್ತಾರೆ. ಇಂತಹ ಲೌಕಿಕ ಪ್ರೇಮದಿಂದ ಧಾರ್ಮಿಕ ಉದ್ದೇಶ ಗಳಿಸಲು ಸಾಧ್ಯವೇ? ಇಂತಹ ಜನರಿಂದ ಯಾವುದೇ ಪ್ರಯೋಜನ ಲಭಿಸಲು ಸಾಧ್ಯವೇ? ಖಂಡಿತವಿಲ್ಲ, ಖಂಡಿತವಿಲ್ಲ. ಅಲ್ಲಾಹನು ಹೇಳುತ್ತಾನೆ: **ಲನ್‌ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**. ಎಂದರೆ, ಎಲ್ಲಿಯವರೆಗೆ ನೀವು ನಿಮಗೆ ಪ್ರಿಯವಾದ ವಸ್ತುಗಳನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದಿಲ್ಲವೋ ಅಲ್ಲಿಯ ವರೆಗೆ ಒಳಿತನ್ನು ಗಳಿಸಲಾರಿರಿ.
(ಮಲ್‌ಫೂಝಾತ್, ಸಂಪುಟ-6, ಪುಟ-40 ಅಡಿಟಿಪ್ಪಣಿ)

ಪೈಗಂಬರ್(ಸ) ನಿಧನರಾದಾಗ ಹಝ್ರತ್ ಉಮರ್(ರ) ಅವರ ಪ್ರತಿಕ್ರಿಯೆ ಏನಾಗಿತ್ತು? ಪೈಗಂಬರ್ (ಸ) ರವರ ನಿಧನದ ಸಮಯ ಸಮೀಪಿಸುತ್ತಿದ್ದಾಗ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಸೇರಿದಂತೆ ಮನೆಯಲ್ಲಿ ಕೆಲವು ಪುರುಳರು ಇದ್ದರು ಎಂದು ಇಬ್ನ್ ಅಬ್ಬಾಸ್ ಅವರಿಂದ ವರದಿಯಾಗಿದೆ. ಅವರು ಹೇಳುತ್ತಾರೆ ಹಝ್ರತ್ ಪೈಗಂಬರರ(ಸ) ನಿಧನದ ಸಮಯ ಸಮೀಪವಾಯಿತು. ಮನೆಯಲ್ಲಿ ಕೆಲವು ಪುರುಷರು ಇದ್ದರು. ಅವರಲ್ಲಿ ಹಝ್ರತ್ ಉಮರ್ ಬಿನ್ ಖ಼ತ್ತಾಬ್(ರ) ಸಹ ಇದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಬರೆಯಲು ಬೇಕಾಗಿರುವ ಸಾಮಗ್ರಿಗಳನ್ನು ತನ್ನಿರಿ. ನೀವು ಸನ್ಮಾರ್ಗದಿಂದ ದುರ್ಮಾರ್ಗಕ್ಕೆ ಹೋಗದಿರಲಿಕ್ಕಾಗಿ ನಿಮಗೆ ಒಂದು ಲಿಖಿತವನ್ನು ಬರೆದು ಕೊಡುವೆನು. ಸುತ್ತಮುತ್ತ ಕುಳಿತುಕೊಂಡಿದ್ದ ಜನರೊಡನೆ ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ತೀವ್ರವಾಗಿ ರೋಗಿಯಾಗಿರುವರು. ನಿಮ್ಮ ಬಳಿ ಪವಿತ್ರ ಖುರ್‌ಆನ್ ಸಹ ಇದೆ. ನಿಮಗೆ ಅಲ್ಲಾಹನ ಗ್ರಂಥ ಸಾಕು. ಮನೆಯಲ್ಲಿ ಇರುವ ವ್ಯಕ್ತಿಗಳು ಭಿನ್ನಾಭಿಪ್ರಾಯ ಪಟ್ಟರು. ವಾಗ್ವಾದ ಶುರುವಾಯಿತು. ಅಲ್ಲಿಂದ ಎದ್ದು ಹೋಗಲು ಎಲ್ಲರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು (ಸಹೀಹ್ ಬುಖಾರಿ, ಕಿತಾಬುಲ್ ವಸೀಯ ಹದೀಸ್-4234)

ಇದು ಮುಸ್ಲಿಮ್‌ನ ವರದಿ ಆಗಿದೆ. ಇದರ ಕೆಲವು ವಿವರಗಳು ಬುಖಾರಿಯಲ್ಲೂ ಇವೆ. ಅಲ್ಲಿ ಅದನ್ನು ಉಬೈದುಲ್ಲಾ ಬಿನ್ ಅಬ್ದುಲ್ಲಾ ಅವರಿಂದ ವರದಿಯಾಗಿದೆ. ಅವರು ಅದನ್ನು ಇಬ್ನ್ ಅಬ್ಬಾಸ್ ಅವರಿಂದ ವರದಿ ಮಾಡಿದರು. ಅವರು ಹೇಳುತ್ತಾರೆ ಹಝ್ರತ್ ಪೈಗಂಬರರ(ಸ) ನಿಧನದ ಸಮಯ ಸಮೀಪವಾಯಿತು. ಮನೆಯಲ್ಲಿ ಕೆಲವು ಪುರುಷರು ಇದ್ದರು. ಅವರಲ್ಲಿ ಹಝ್ರತ್ ಉಮರ್ ಬಿನ್ ಖ಼ತ್ತಾಬ್(ರ) ಸಹ ಇದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಬರೆಯಲು ಬೇಕಾಗಿರುವ ಸಾಮಗ್ರಿಗಳನ್ನು ತನ್ನಿರಿ. ನೀವು ಸನ್ಮಾರ್ಗದಿಂದ ದುರ್ಮಾರ್ಗಕ್ಕೆ ಹೋಗದಿರಲಿಕ್ಕಾಗಿ ನಿಮಗೆ ಒಂದು ಲಿಖಿತವನ್ನು ಬರೆದು ಕೊಡುವೆನು. ಸುತ್ತಮುತ್ತ ಕುಳಿತುಕೊಂಡಿದ್ದ ಜನರೊಡನೆ ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ತೀವ್ರವಾಗಿ ರೋಗಿಯಾಗಿರುವರು. ನಿಮ್ಮ ಬಳಿ ಪವಿತ್ರ ಖುರ್‌ಆನ್ ಸಹ ಇದೆ. ನಮಗೆ ಅಲ್ಲಾಹನ ಗ್ರಂಥ ಸಾಕು. ಮನೆಯಲ್ಲಿ ಇರುವ ವ್ಯಕ್ತಿಗಳು ಭಿನ್ನಾಭಿಪ್ರಾಯ ಪಟ್ಟರು. ವಾಗ್ವಾದ ಶುರುವಾಯಿತು. ಅಲ್ಲಿಂದ ಎದ್ದು ಹೋಗಲು ಎಲ್ಲರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. (ಸಹೀಹ್ ಬುಖಾರಿ ಕಿತಾಬುಲ್ ಇಲ್ಮ್, ಹದೀಸ್-114)

ಇದರ ವಿವರಣೆ ಮುಸ್ಲಿಮ್ ಮತ್ತು ಬುಖಾರಿಯಲ್ಲಿ ಸ್ವಲ್ಪ ಇದೆ. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಬಳಿಗೆ ಬರೆಯಲಿಕ್ಕೆ ಬೇಕಾದ ಸಾಮಾನುಗಳನ್ನು ಕೊಂಡುಬನ್ನಿರಿ. ನೀವು ಮರೆಯದಂತಹ ಒಂದು ಲಿಖಿತವನ್ನು ನಮಗೆ ಬರೆದುಕೊಡುವೆನು. ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ತೀವ್ರವಾಗಿ ರೋಗಿಯಾಗಿರುವರು. ನಮ್ಮ ಬಳಿ ಪವಿತ್ರ ಖುರ್‌ಆನ್ ಇದೆ. ಅದು ನಮಗೆ ಸಾಕು. ಆದ್ದರಿಂದ ಹಝ್ರತ್ ಪೈಗಂಬರ್‌ರಿಗೆ(ಸ) ತೊಂದರೆ ಕೊಡುವ ಆವಶ್ಯಕತೆಯಿಲ್ಲ. ಆಗ ಅಲ್ಲಿದ್ದ ಜನರಲ್ಲಿ

ಭಿನ್ನಾಭಿಪ್ರಾಯವುಂಟಾಯಿತು. ಎಷ್ಟು ಗದ್ದಲವೆದ್ದಿತ್ತು ಎಂದರೆ ಹಝ್ರತ್ ಪೈಗಂಬರ್(ಸ) ಹೇಳಿದರು: ಇಲ್ಲಿಂದ ಎದ್ದು ಹೊರಟು ಹೋಗಿರಿ. ನನ್ನ ಬಳಿಯಲ್ಲಿ ಜಗಳವಾಡಬೇಡಿರಿ. ಹಝ್ರತ್ ಸಯ್ಯದ್ ಝೈನುದ್ದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ನಿಧನರಾಗುವರು ಎಂದು ಹಝ್ರತ್ ಉಮರ್(ರ) ಊಹಿಸಿಯೂ ಇರಲಿಲ್ಲ. ಹೀಗಾಗಿ ಅವರು ಜನರೊಡನೆ ಹೇಳಿದರು: ನಮ್ಮ ಬಳಿ ಪವಿತ್ರ ಖುರ್‌ಆನ್ ಇದೆ. ಅದು ನಮಗೆ ಸಾಕು. ಆದ್ದರಿಂದ ಹಝ್ರತ್ ಪೈಗಂಬರ್‌ರಿಗೆ(ಸ) ತೊಂದರೆ ಕೊಡುವ ಆವಶ್ಯಕತೆಯಿಲ್ಲ. ಆಗ ಅಲ್ಲಿದ್ದ ಜನರಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಎಷ್ಟು ಗದ್ದಲವೆದ್ದಿತ್ತು ಎಂದರೆ ಹಝ್ರತ್ ಪೈಗಂಬರ್(ಸ) ಹೇಳಿದರು: ಇಲ್ಲಿಂದ ಎದ್ದು ಹೊರಟು ಹೋಗಿರಿ. ನನ್ನ ಬಳಿಯಲ್ಲಿ ಜಗಳವಾಡಬೇಡಿರಿ. ಈ ನೋವಿನ ಸ್ಥಿತಿಯಲ್ಲೂ ಹಝ್ರತ್ ಪೈಗಂಬರ್‌ರಿಗೆ(ಸ) ಪವಿತ್ರ ಖುರ್‌ಆನಿನ ಮೇಲೆ ಎಷ್ಟು ಗೌರವವಿತ್ತು ಎಂದರೆ, ಹಝ್ರತ್ ಉಮರ್‌ರ(ರ) ಮಾತು ಆಲಿಸಿದ ನಂತರ ಲಿಖಿತವನ್ನು ಬರೆದು ಕೊಡುವ ಉದ್ದೇಶವನ್ನೇ ಉಪೇಕ್ಷಿಸಿದರು. ಈ ಘಟನೆಯ ನಂತರ ಕೆಲವು ದಿನಗಳ ಕಾಲ ಹಝ್ರತ್ ಪೈಗಂಬರ್(ಸ) ಜೀವಂತವಾಗಿದ್ದರು. ಆ ದಿನಗಳಲ್ಲಿ ಬೇರೆ ಕೆಲವು ವಸಿಯ್ಯತ್‌ಗಳನ್ನು ಹಝ್ರತ್ ಪೈಗಂಬರ್(ಸ) ಮಾಡಿದ್ದರು. ಆದರೆ ಈ ಲಿಖಿತದ ಬಗ್ಗೆ ಏನೂ ಹೇಳಿರಲಿಲ್ಲ. ಇದರಿಂದ ಗೊತ್ತಾಗುವುದೇನೆಂದರೆ, ಹಝ್ರತ್ ಪೈಗಂಬರ್(ರ) ಬರೆಯಲು ಉದ್ದೇಶಿಸಿದ್ದ ಸಂಗತಿಗಳು ಪವಿತ್ರ ಖುರ್‌ಆನಿನಲ್ಲಿ ಇತ್ತು. ಆದ್ದರಿಂದಲೇ ಹಝ್ರತ್ ಉಮರರ ಮಾತನ್ನು ಸಮ್ಮತಿಸುತ್ತಾ ಮೌನವಾಗಿದ್ದರು.

ಹಝ್ರತ್ ಪೈಗಂಬರ್(ಸ) ನಿಧನರಾದಾಗ ಹಝ್ರತ್ ಉಮರ್(ರ) ನಿಂತುಕೊಂಡು ಹೇಳಿದರು: ಅಲ್ಲಾಹನಾಣೆ, ರಸೂಲುಲ್ಲಾಹ್ ಮೃತಪಟ್ಟಿಲ್ಲ. ಹಝ್ರತ್ ಪೈಗಂಬರ್(ಸ) ನಿಧನರಾಗಿರುವರು ಎಂದು ಹೇಳುವವನನ್ನು ನಾನು ನನ್ನ ಖಡ್ಗದಿಂದ ಕೊಲ್ಲುವೆನು. ಕೆಲವು ಜನರ ಕೈಕಾಲುಗಳನ್ನು ಕಡಿಯಲು ಅಲ್ಲಾಹನು ಖಂಡಿತ ಅವರನ್ನು ಎಬ್ಬಿಸುವನು. ಹಝ್ರತ್ ಪೈಗಂಬರರ(ಸ) ನಿಧನದ ವೇಳೆ ಎರಡು ಮೈಲುಗಳಷ್ಟು ದೂರದಲ್ಲಿರುವ ಸನಾ ಎಂಬ ಸ್ಥಳದಲ್ಲಿ ಹಝ್ರತ್ ಅಬೂಬಕರ್(ಸ) ಇದ್ದರು. ಹಝ್ರತ್ ಉಮರರ(ಸ) ಈ ಭಾಷಣದ ವೇಳೆ ಅವರು ಅಲ್ಲಿಗೆ ತಲುಪಿದರು. ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಮುಖದಿಂದ ಬಟ್ಟೆಯನ್ನು ಸರಿಸಿಕೊಂಡು ಹಝ್ರತ್ ಪೈಗಂಬರರ(ಸ) ಮುಖವನ್ನು ಹಝ್ರತ್ ಅಬೂಬಕರ್(ರ) ಚುಂಬಿಸಿದರು ಮತ್ತು ಹೀಗೆ ಹೇಳಿದರು: ನನ್ನ ತಂದೆ ತಾಯಿ ನಿಮಗೆ ಸಮರ್ಪಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಜೀವಿತದಲ್ಲೂ ಮರಣದ ನಂತರವೂ ಪರಿಶುದ್ಧರಾಗಿರುವರು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆ ಹಾಕಿ ಹೇಳುತ್ತೇನೆ: ಅಲ್ಲಾಹನು ನಿಮಗೆ ಎರಡು ಮರಣವನ್ನು ನೀಡದು. ಅನಂತರ ಹೊರಗೆ ಬಂದರು ಮತ್ತು ಜನರನ್ನು ಸಂಬೋಧಿಸಿ ಭಾಷಣ ಮಾಡಿದರು. ಅಲ್ಲಾಹನಿಗೆ ಸ್ತುತಿಸ್ತೋತ್ರಗಳನ್ನು ಅರ್ಪಿಸಿದ ನಂತರ ಹಝ್ರತ್ ಅಬೂಬಕರ್(ರ) ಹೇಳಿದರು: **ಅಲಾ ಮನ್‌ಕಾಖನ ಯಅ್‌ಬುದು ಮುಹಮ್ಮದುನ್ ಸಲ್ಲಲ್ಲಾಲು ಅಲೈಹಿ ವಸಲ್ಲಮ್. ಫಇನ್ನ ಮುಹಮ್ಮದನ್ ಖದ್ ಮಾತ. ವಮನ್‌ಕಾನ ಯಅ್‌ಬುದುಲ್ಲಾಹ ಫಇನ್ನಲ್ಲಾಹ ಹಯ್ಯುನ್ ಲಾ ಯಮೂತ್**. ಎಂದರೆ, ನೋಡಿರಿ, ಯಾರು ಮುಹಮ್ಮದ್‌ರನ್ನು(ರ) ಪೂಜಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್(ಸ) ನಿಧನರಾಗಿರುವರು. ಯಾರು ಅಲ್ಲಾಹನನ್ನು ಪೂಜಿಸುತ್ತಾರೋ ಅವರು ನೆನಪಿಡಲಿ, ಅಲ್ಲಾಹನು ಜೀವಂತನು ಅವನು ಎಂದಿಗೂ ಸಾಯುವುದಿಲ್ಲ. ಅನಂತರ ಹಝ್ರತ್ ಅಬೂಬಕರ್(ರ) ಈ ವಚನವನ್ನು ಓದಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲ್. ಖದ್ ಖ಼ಲತ್ ಮಿನ್‌ಖಬ್‌ಲಿಹಿರ್‍ರುಸುಲ್. ಅಫಇಮ್ಮಾತ ಔ ಖುತಿಲ ಇನ್‌ಖಲಬ್‌ತುಂ ಅಲಾ ಅಅ್‌ಖಾಬಿಕುಮ್ ವಮನ್‌ಯನ್‌ಖಲಿಬು ಅಲಾ ಅಖಿಬೈಹಿ ಫಲನ್‌ಯಝುರ್‍ರುಲ್ಲಾಹ ಶೈಅನ್ ವಸಯಜ್‌ಝಿಯಲ್ಲಾಹುಶ್ಶಾಕಿರೀನ್**. ಎಂದರೆ, "ಮುಹಮ್ಮದ್(ಸ) ಕೇವಲ ಅಲ್ಲಾಹನ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಪೈಗಂಬರ್‌ಗಳೂ ಗತಿಸಿದ್ದಾರೆ. ಒಂದು ವೇಳೆ ಪೈಗಂಬರ್(ಸ) ಮೃತಪಟ್ಟರೆ ಅಥವಾ ಕೊಲ್ಲಲ್ಪಟ್ಟರೆ ನೀವು ಹಿಂತಿರುಗಿ ಹೋಗುವಿರಾ? ಹಿಂತಿರುಗಿ ಹೋಗುವವನು ಅಲ್ಲಾಹನಿಗೆ ಏನೂ ಹಾನಿಯುಂಟು ಮಾಡಲಾರ. ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ." ಈ ವಚನವನ್ನು ಆಲಿಸಿಕೊಂಡು ಜನರು ಬಿಕ್ಕಿ ಬಿಕ್ಕಿ ಅತ್ತರು.

(ಸಹೀಹ್ ಬುಖಾರಿ ಕಿತಾಬ್ ಫಝಾಎಲ್ ಅಸ್ಹಾಬನ್ನಬಿ(ಸ), ಹದೀಸ್–3667–3668) (ಫರ್‌ಹಂಗ್ ಸೀರತ್ ಪುಟ–157, ಝುವಾರಿ ಅಕಾಡಮಿ ಪಬ್ಲಿಕೇಷನ್ ಉರ್ದು ಬಾಝಾರ್ ಕರಾಚಿ 2003)

ಹಝ್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಅಬೂಬಕರ್(ರ) ಈ ವಚನವನ್ನು ಓದುವುದನ್ನು ನಾನು ಆಲಿಸಿದಾಗ, ನಾನು ಎಷ್ಟು ಹೆದರಿದೆನು ಎಂದರೆ, ಭಯದಿಂದ ನನ್ನ ಕಾಲುಗಳು ನಡುಗಿದುವು ಮತ್ತು ನಾನು ನೆಲಕ್ಕೆ ಬಿದ್ದನು. ಅಲ್ಲಾಹನು ಈ ವಚನವನ್ನೂ ಅವತೀರ್ಣಗೊಳಿಸಿದ್ದನು ಎಂದು ಜನರಿಗೆ ಗೊತ್ತೇ ಇರಲಿಲ್ಲವೆಂಬಂತೆ ಇತ್ತು ಎಂದು ವರದಿಗಾರ ಹೇಳಿದ್ದನ್ನು ಹಝ್ರತ್ ಮಸೀಹ್ ಮೌಊದ್(ಅ) ಉಲ್ಲೇಖಿಸಿದ್ದಾರೆ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನಾನು ಈ ವಚನವನ್ನು ಅಬೂಬಕರ್‌ರಿಂದಲೇ ಆಲಿಸಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಗ ಯೋಚಿಸಿರಿ, ಎಲ್ಲ ಪೈಗಂಬರ್‌ಗಳು ಮರಣಹೊಂದಿರುವರು ಎಂಬ ಸ್ಪಷ್ಟ ಮತ್ತು ಖಚಿತ ಪುರಾವೆಯನ್ನು ಹಝ್ರತ್ ಅಬೂಬಕರ್(ರ) ಓದಿ ಹೇಳಿದ್ದು ಪವಿತ್ರ ಖುರ್‌ಆನಿನಿಂದ ಅಲ್ಲವೆಂದಾದರೆ, ಒಂದು ಲಕ್ಷಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಅಲ್ಲಿದ್ದ ಸಹಾಬರು ಕೇವಲ ಊಹೆ ಮತ್ತು ಸಂಶಯಾಸ್ಪದ ಸಂಗತಿಯನ್ನು ಏಕೆ ಸಮ್ಮತಿಸಿದರು? ಹೇ ಅಬೂಬಕರ್, ನಿಮ್ಮ ಪುರಾವೆ ಅಪೂರ್ಣವೆಂದೂ, ಹಝ್ರತ್ ಈಸಾ(ಅ) ಶರೀರ ಸಮೇತ ಆಕಾಶಕ್ಕೆ ಹೋಗಿರುವ ಬಗ್ಗೆ ಪವಿತ್ರ ಖುರ್‌ಆನಿನ **ರಾಫಿಉಕ ಇಲಯ್ಯ** ಎಂಬ ಆಯತ್ ಸೂಚನೆ ನೀಡುತ್ತದೆ ಎಂದು ನಿಮಗೆ ಗೊತ್ತಿಲ್ಲವೇ ಎಂದೂ ಮತ್ತು **ಬಲ್‌ರಫಅಹುಲ್ಲಾಹು ಇಲೈಹಿ** ಎಂದು ಅಲ್ಲಾಹನು ಹೇಳಿದ್ದು ನೀವು ಕೇಳಿಲ್ಲವೇ? ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಆಕಾಶಕ್ಕೆ ಹೋಗಿರುವುದನ್ನು ನೀವೇಕೆ ನಂಬುವುದಿಲ್ಲ ಎಂದೂ ಸಹಾಬರು ಏಕೆ ಪ್ರಶ್ನಿಸಲಿಲ್ಲ. ಸತ್ಯದಲ್ಲಿ, ಸಹಾಬರಿಗೆ ಪವಿತ್ರ ಖುರ್‌ಆನಿನ ಶೈಲಿ ಗೊತ್ತಿತ್ತು. ಹಝ್ರತ್ ಅಬೂಬಕರ್ ಓದಿದ ಈ ವಚನವನ್ನು ಆಲಿಸಿಕೊಂಡು ಮತ್ತು **ಖ಼ಲತ್** ಎಂಬ ಪದದ ವ್ಯಾಖ್ಯಾನವನ್ನು **ಅಫಇಮ್ಮಾತ ಔ ಖುತಿಲ** ಎಂಬ ವಾಕ್ಯದಲ್ಲಿ ಮನವರಿಕೆ ಮಾಡಿಕೊಂಡ ಸಹಾಬರು ತಕ್ಷಣವೇ ಹಝ್ರತ್ ಪೈಗಂಬರರ(ಸ) ಮರಣದ ಕಾರಣದಿಂದ ತೀವ್ರವಾಗಿ ದುಃಖಿತರಾದರು. ಹಿಂದಿನ ಎಲ್ಲ ಪೈಗಂಬರ್‌ಗಳು ಮೃತಪಟ್ಟಿರುವರು ಎಂದು ಅವರಿಗೆ ಗೊತ್ತಾಯಿತು.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಸಾವಿರಾರು ಉತ್ತಮ ಪ್ರತಿಫಲಗಳನ್ನು ಹಝ್ರತ್ ಅಬೂಬಕರರಿಗೆ(ಸ) ದಯಪಾಲಿಸಲಿ. ಅವರು ಬೇಗನೇ ಈ ಫಿತ್ನವನ್ನು ಹೋಗಲಾಡಿಸಿದರು. ಪವಿತ್ರ ಖುರ್‌ಆನಿನಿಂದ ಪುರಾವೆಯನ್ನು ಮುಂದಿರಿಸಿಕೊಂಡು, ಹಿಂದಿನ ಪೈಗಂಬರ್‌ಗಳು ಮೃತಪಟ್ಟಿರುವರು ಎಂದು ಹೇಳಿದರು. **ಖ಼ಲತ್** ಎಂಬ ಪದಕ್ಕೆ ಕೆಲವು ಪೈಗಂಬರ್‌ಗಳು ಆಕಾಶದಲ್ಲಿ ಕುಳಿತುಕೊಂಡಿರುವರು ಎಂಬ ಅರ್ಥವನ್ನು ಇಲ್ಲಿ ಕೊಡುವುದಾದರೆ, ಹಝ್ರತ್ ಉಮರ್(ರ) ಹೇಳಿದ್ದು ಸರಿಯೆಂದು ಹೇಳಬಹುದಾಗಿತ್ತು. ಅವರ ನಿಲುವಿಗೆ ಈ ವಚನ ಸಹಾಯಕವಾಗುತ್ತಿತ್ತು. ಆದರೆ ಖ಼ಲತ್ ಎಂಬ ಪದ ಎರಡು ವಿಧಗಳಲ್ಲಿ ಗತಿಸಿ ಹೋಗುವುದನ್ನು ಮಾತ್ರ ಸೂಚಿಸುತ್ತದೆ. ಒಂದು ಸಾಮಾನ್ಯ ಮರಣ ಮತ್ತೊಂದು ಹತ್ಯೆಗೀಡಾಗುವುದು.

ಬೇರೊಂದು ಕಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ನಿಧನದ ಸಂದರ್ಭದಲ್ಲಿ ಸಹಾಬರು ಎಲ್ಲ ಪೈಗಂಬರ್‌ಗಳು ಮೃತಪಟ್ಟರು ಎಂಬುದಕ್ಕೆ ಸಾಕ್ಷ್ಯವಹಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಹಝ್ರತ್ ಉಮರ್(ರ) ಹೇಳಿದರು: ಅವರು ಈಗ ಮೃತಪಟ್ಟಿಲ್ಲ. ಹೀಗೆ ಹೇಳುತ್ತಾ ಖಡ್ಗವನ್ನು ಹಿಡಿದು ನಿಂತುಕೊಳ್ಳುತ್ತಾರೆ. ಆದರೆ ಹಝ್ರತ್ ಅಬೂಬಕರ್(ರ) ನಿಂತುಕೊಂಡು ಖುತ್‌ಬ ನೀಡುತ್ತಾರೆ ಮತ್ತು ಅದರಲ್ಲಿ **ಮಾ ಮುಹಮ್ಮದನ್ ಇಲ್ಲಾ ರಸೂಲ್ ಖದ್‌ಖ಼ಲತ್ ಮಿನ್‌ಖಬ್ಲಿಹಿರ್‍ರುಸುಲ್** ಎಂದು ಹೇಳುತ್ತಾರೆ. ಆ ಸಮಯವು ಒಂದು ಖಿಯಾಮತಿನ ಒಂದು ಮೈದಾನದಂತಿತ್ತು. ಹಝ್ರತ್ ಪೈಗಂಬರ್(ಸ) ಈ ಲೋಕದಿಂದ ಹೊರಟುಹೋಗಿದ್ದರು. ಎಲ್ಲ ಸಹಾಬರು ಅಲ್ಲಿದ್ದರು. ಎಲ್ಲಿಯ ವರೆಗೆ ಎಂದರೆ, ಉಸಾಮರ ಸೈನ್ಯ ಕೂಡ ಹೊರಡಿರಲಿಲ್ಲ. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವರು ಎಂದು ಹಝ್ರತ್ ಅಬೂಬಕರ್(ರ) ಉಚ್ಚ ಸ್ವರದಲ್ಲಿ ಹೇಳುತ್ತಾರೆ. ಹಝ್ರತ್ ಈಸಾ ಅಲೈಹಿಸ್ಸಲಾಂ ಜೀವಂತವಾಗಿರುವರು ಎಂದು ಸಹಾಬರು ಊಹಿಸುತ್ತಿದ್ದರೆ, ಅವರು ಅದನ್ನು ಖಂಡಿತ ಹೇಳುತ್ತಿದ್ದರು. ಆದರೆ ಎಲ್ಲರೂ ಸುಮ್ಮನಿದ್ದರು. **ಮಾ ಮುಹಮ್ಮದಿನ್ ಇಲ್ಲಾ ರಸೂಲ್** ಎಂಬ ಆಯತ್ ಇಂದೇ ಅವತೀರ್ಣವಾಯಿತೆಂಬ ರೀತಿಯಲ್ಲಿ ಬಝ಼ಾರಿನಲ್ಲಿ ಈ ಆಯತ್ತನ್ನು ಓದುತ್ತಾ ನಡೆಯುತ್ತಿದ್ದರು. ಹಝ್ರತ್ ಅಬೂಬಕರ್(ರ) ಹೇಳಿದ್ದು ಸರಿಯೇ ಆಗಿದ್ದ ಕಾರಣದಿಂದ ಎಲ್ಲ ಸಹಾಬರು ತಲೆಯನ್ನು ತಗ್ಗಿಸಿದರು. ಇದು ಸಹಾಬರ ಒಮ್ಮತಾಭಿಪ್ರಾಯವಾಗಿತ್ತು. ಹಝ್ರತ್ ಪೈಗಂಬರ್(ಸ) ಪುನಃ ಬರುವರು ಎಂದು ಹಝ್ರತ್ ಉಮರ್(ರ) ಸಹ ಹೇಳುತ್ತಿದ್ದರು. ಹೀಗಿರುವಾಗ ಹಝ್ರತ್ ಅಬೂಬಕರ್(ರ) ನೀಡಿದ್ದ ಪುರಾವೆ ಅಪೂರ್ಣವಾಗಿದ್ದರೆ ಹಝ್ರತ್ ಉಮರ್(ರ) ಅದನ್ನು ನಿರಾಕರಿಸುತ್ತಿದ್ದರು. (ಮಲ್‌ಫೂಝಾತ್, ಸಂಪುಟ–1, ಪುಟ–440–441)

ಹಝ್ರತ್ ಈಸಾ ಅಲೈಹಿಸ್ಸಲಾಂ ಆಕಾಶದಲ್ಲಿ ಜೀವಂತವಾಗಿ ಇರುವರು ಎಂಬ ವಿಶ್ವಾಸವಿರುವ ಜನರ ಮೆದುಳಿನಿಂದ ಈ ವಿಶ್ವಾಸವನ್ನು

ದೂರೀಕರಿಸಲು ಹಲವು ಕಡೆಗಳಲ್ಲಿ ಹಝ್ರ‌ತ್ ಮಸೀಹ್ ಮೌಊದ್(ಅ) ಈ ಘಟನೆಯನ್ನು ವಿವರಿಸಿರುವರು. ಯಾವುದೇ ಮನುಷ್ಯನು ಜೀವಂತವಾಗಿ ಆಕಾಶಕ್ಕೆ ಹೋಗಿಲ್ಲ, ಹೋಗಲು ಸಾಧ್ಯವೂ ಅಲ್ಲ. ಅದೇ ರೀತಿಯಲ್ಲಿ ಹಝ್ರ‌ತ್ ಈಸಾ ಅಲೈಹಿಸ್ಸಲಾಂ ಮೃತಪಟ್ಟಿರುವರು.

ಹಝ್ರ‌ತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಹಝ್ರ‌ತ್ ಉಮರರ ಖಿಲಾಫತ್ ಕಾಲದಲ್ಲಿ ನಾನು ಒಂದು ಬಾರಿ ಅವರೊಂದಿಗೆ ಯಾವುದೋ ಕೆಲಸಕ್ಕಾಗಿ ಹೋಗುತ್ತಿದ್ದೆ. ಅವರ ಕೈಯಲ್ಲಿ ಒಂದು ಬಡಿಗೆಯಿತ್ತು. ನಾನಲ್ಲದೆ ಬೇರೆ ಯಾರೂ ಅವರೊಂದಿಗೆ ಇರಲಿಲ್ಲ. ಅವರು ಸ್ವತಃ ಮಾತನಾಡುತ್ತಿದ್ದರು. ತನ್ನ ಕಾಲಿನ ಹಿಂದಿನ ಭಾಗಕ್ಕೆ ಬಡಿಗೆಯಿಂದ ಹೊಡೆಯುತ್ತಾ ಇದ್ದರು. ಹೀಗೆ ಒಂದೇ ಸವನೇ ನನ್ನನ್ನು ನೋಡಿ ಹೇಳಿದರು: ಹೇ ಇಬ್ನು ಅಬ್ಬಾಸ್, ಹಝ್ರ‌ತ್ ಪೈಗಂಬರ್(ಸ) ನಿಧನರಾದರು ಎಂದು ಹೇಳುವವರನ್ನು ಖಡ್ಗದಿಂದ ಕೊಲ್ಲುವೆನು ಎಂದು ನಾನು ಅಂದು ಹೇಳಲು ಕಾರಣವೇನೆಂದು ನಿನಗೆ ಗೊತ್ತೆ? ನಾನು ಹೇಳಿದೆ: ಯಾ ಅಮೀರಲ್ ಮೂಮಿನೀನ್, ನನಗೆ ಗೊತ್ತಿಲ್ಲ. ಹಝ್ರ‌ತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ ಅದರ ಕಾರಣವೇನೆಂದರೆ, ನಾನು ಈ ಆಯತ್ತನ್ನು ಓದುತ್ತಿದ್ದೆ: **ವಕಝಾಲಿಕ ಜಅಲ್‌ನಾಕುಂ ಉಮ್ಮತನ್ ವಸತಲ್ಲಿ ತಕೂನೂ ಶುಹದಾಅ ಅಲನ್ನಾಸಿ ವಯಕೂನುರ್ರಸೂಲು ಅಲೈಕುಂ ಶಹೀದಾ.** ಎಂದರೆ, ಹೀಗೆ ನಿಮ್ಮನ್ನು ನಾವು ಉತ್ತಮ ಸಮುದಾಯವನ್ನಾಗಿ ಮಾಡಿರುವೆವು. ನೀವು ಇತರ ಜನರ ಮೇಲೆ ಮೇಲ್ನೋಟಗಾರರಾಗಲಿಕ್ಕೂ ಈ ಪೈಗಂಬರ್ ನಿಮ್ಮ ಮೇಲ್ನೋಟಗಾನಾಗಲಿಕ್ಕೂ ಬೇಕಾಗಿ. ಹಝ್ರ‌ತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ ನನಗೆ ಅನಿಸಿದ್ದು ಏನೆಂದರೆ, ಹಝ್ರ‌ತ್ ಪೈಗಂಬರ್(ಸ) ತನ್ನ ಸಮುದಾಯದಲ್ಲಿ ಜೀವಂತವಾಗಿಯೇ ಇದ್ದುಕೊಂಡು ಅವರ ಕೃತ್ಯಗಳಿಗೆ ಸಾಕ್ಷಿಯಾಗಿ ನಿಲ್ಲುವರು ಎಂದು. ಆದ್ದರಿಂದ ನಾನು ಅಂದಿನ ದಿನ ಹಾಗೆ ಹೇಳಿದ್ದೆ.(ಸೀರತ್ ಇಬ್ನೆ ಹಿಶ್ಶಾಮ್, ಪುಟ–901, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರ‌ತ್ ಅಬೂಬಕರ್‌ರ(ರ) ಖಿಲಾಫತಿನ ಬಗ್ಗೆ ಬುಖಾರಿಯಲ್ಲಿ ಪ್ರಸ್ತಾಪ ಬರುತ್ತದೆ. ಅದನ್ನು ವಿವರಿಸುತ್ತೇನೆ. ಖಲೀಫರನ್ನಾಗಿ ಆಯ್ಕೆ ಮಾಡಲಾಗುವ ಸಂದರ್ಭದಲ್ಲಿ, ಅನ್ಸಾರ್‌ಗಳು ಬನೀ ಸಅದರ ಮನೆಯಲ್ಲಿ ಹಝ್ರ‌ತ್ ಸಅದ್ ಬಿನ್ ಉಬಾದರ(ರ) ಬಳಿ ಒಟ್ಟುಗೂಡಿಕೊಂಡು ಹೀಗೆ ಹೇಳಿದರು: ಒಬ್ಬ ಅಮೀರ್ ನಿಮ್ಮಿಂದ ಮತ್ತು ಒಬ್ಬ ಅಮೀರ್ ನಮ್ಮಿಂದ ಆಗಬೇಕು. ಹಝ್ರ‌ತ್ ಅಬೂಬಕರ್(ರ), ಹಝ್ರ‌ತ್ ಉಮರ್(ರ) ಮತ್ತು ಹಝ್ರ‌ತ್ ಅಬೂಉಬೈದ ಬಿನ್ ಜರಾಹ್(ರ) ಅವರ ಬಳಿಗೆ ಹೋದರು. ಹಝ್ರ‌ತ್ ಉಮರ್(ರ) ಮಾತನಾಡಲು ಹೋದರು. ಆದರೆ ಹಝ್ರ‌ತ್ ಅಬೂಬಕರ್(ರ) ಅವರೊಡನೆ ಸುಮ್ಮನಿರಲು ಹೇಳಿದರು. ಹಝ್ರ‌ತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ನಾನು ಮಾತನಾಡಲು ಬಯಸಿದ ಕಾರಣವೇನೆಂದರೆ, ನನಗೆ ಬಹಳ ಪ್ರಿಯವಾದ ಒಂದು ಭಾಷಣವನ್ನು ನಾನು ತಯಾರಿಸಿದ್ದೆ. ಹಝ್ರ‌ತ್ ಅಬೂಬಕರ್(ರ) ಹಾಗೆ ಮಾತನಾಡಲಿಕ್ಕಿಲ್ಲ ಎಂದು ನಾನು ಭಾವಿಸಿದೆ. ಆದರೆ ಹಝ್ರ‌ತ್ ಅಬೂಬಕರ್(ರ) ಭಾಷಣ ಮಾಡಿದರು. ಅದು ಎಲ್ಲ ಜನರ ಭಾಷಣಕ್ಕಿಂತ ಉತ್ತಮವಾಗಿತ್ತು. ತನ್ನ ವೈಭವಶಾಲಿಯಾದ ಭಾಷಣವನ್ನು ಮಾಡುತ್ತಾ ಅವರು ಹೇಳಿದರು: ನಾವು ಅಮೀರ್ ಆಗಿರುವೆವು ಮತ್ತು ನೀವು ಮಂತ್ರಿಗಳಾಗಿರುವಿರಿ. ಏಕೆಂದರೆ, ಖುರೈಶಿಗಳು ವಂಶೀಯ ಪರವಾಗಿ ಅರೇಬಿಯರಲ್ಲಿ ಅತ್ಯಂತ ಶ್ರೇಷ್ಠರು ಮತ್ತು ಖುರೈಶ್ ಎಲ್ಲರಿಗಿಂತ ಹಳೆಯ ಗೋತ್ರವಾಗಿದೆ. ಆದ್ದರಿಂದ ಉಮರ್ ಅಥವಾ ಅಬೂಉಬೈದರನ್ನು ಬೈಅತ್ ಮಾಡಿರಿ. ಆಗ ಹಝ್ರ‌ತ್ ಉಮರ್(ರ) ಹೇಳಿದರು: ಇಲ್ಲ, ನಾವಂತು ನಿಮಗೆ ಎಂದರೆ, ಅಬೂಬಕರರ ಕೈಯಲ್ಲಿ ಬೈಅತ್ ಮಾಡುವೆವು. ಏಕೆಂದರೆ, ನಮ್ಮ ನೇತಾರ ನಮ್ಮೆಲ್ಲರಿಗಿಂತ ಉತ್ತಮ ಮತ್ತು ಹಝ್ರ‌ತ್ ಪೈಗಂಬರ್‌ರಿಗೆ(ಸ) ಅತ್ಯಂತ ಪ್ರಿಯರಾಗಿದ್ದರು. ಹೀಗೆ ಹೇಳುತ್ತಾ ಹಝ್ರ‌ತ್ ಉಮರ್(ರ) ಅಬೂಬಕರರ(ರ) ಕೈಯನ್ನು ಹಿಡಿದುಕೊಂಡು ಬೈಅತ್ ಮಾಡಿದರು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್ಹಾಬನ್ನಬಿ(ಸ), ಹದೀಸ್–3668)

ಧರ್ಮತ್ಯಾಗಿಗಳ ಫಿತ್ನದ ಬಗ್ಗೆ ಸೀರತ್ ಹಿಶಾಮ್‌ನಲ್ಲಿ ಹೀಗೆ ಬರೆಯಲಾಗಿದೆ: ಹಝ್ರ‌ತ್ ಪೈಗಂಬರ್(ಸ) ನಿಧನರಾದಾಗ ಮುಸ್ಲಿಮರ ಕಷ್ಟತೆಗಳು ವರ್ಧಿಸಿದುವು. ಯಹೂದಿಗಳು ಮತ್ತು ಕ್ರೈಸ್ತರು ತಲೆಯೆತ್ತಿದ್ದರು. ಕಾಪಟ್ಯ ಪ್ರಕಟವಾಯಿತು.(ಸೀರತ್ ಇಬ್ನೆ ಹಿಶ್ಶಾಮ್, ಪುಟ–903, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರ‌ತ್ ಅಬೂಹುರೈರ(ರ) ಹೇಳುತ್ತಾರೆ: ಹಝ್ರ‌ತ್ ಪೈಗಂಬರ್(ಸ) ನಿಧನರಾದಾಗ ಮುಸ್ಲಿಮರ ಕಷ್ಟತೆಗಳು ವರ್ಧಿಸಿದುವು. ಯಹೂದಿಗಳು ಮತ್ತು ಕ್ರೈಸ್ತರು ತಲೆಯೆತ್ತಿದ್ದರು. ಕಾಪಟ್ಯ ಪ್ರಕಟವಾಯಿತು. ಧರ್ಮತ್ಯಾಗಿಗಳು ತಲೆಯೆತ್ತಿದ್ದರು. ಅವರ ವಿರುದ್ಧ ಯುದ್ಧ ಮಾಡುವುದನ್ನು ಮೊದಲು ಹಝ್ರ‌ತ್ ಉಮರ್(ರ) ವಿರೋಧಿಸಿದರು. ಆದರೆ ಹಝ್ರ‌ತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಯಾರು ನಮಾಝ್ ಮತ್ತು ಝಕಾತ್‌ನ ನಡುವೆ ವ್ಯತ್ಯಾಸವನ್ನು ಕಲ್ಪಿಸುತ್ತಾರೋ ಅವರ ವಿರುದ್ಧ ನಾನು ಯುದ್ಧ ಮಾಡುವೆನು. ಏಕೆಂದರೆ ಝಕಾತ್ ಕಡ್ಡಾಯವಾಗಿ ಕೊಡಬೇಕಾದ ಧನವಾಗಿದೆ. ಝಕಾತ್ ಆಗಿ ಕೊಡಬೇಕಾದ ಒಂದು ಹಗ್ಗವನ್ನು ಕೂಡ ಅವರು ಕೊಡದಿದ್ದರೆ ನಾನು ಅವರ ವಿರುದ್ಧ ಹೋರಾಡುವೆನು. ಅನಂತರ ಹಝ್ರ‌ತ್ ಉಮರ್(ರ) ಹೇಳುತ್ತಾರೆ: ಯುದ್ಧ ಮಾಡಲಿಕ್ಕಾಗಿ ಹಝ್ರ‌ತ್ ಅಬೂಬಕರ್‌ರ ಹೃದಯವನ್ನು ಅಲ್ಲಾಹನು ತಯಾರು ಮಾಡಿದ್ದಾನೆ ಎಂದು ನಾನು ಕಂಡಾಗ, ಇದೇ ಸರಿಯೆಂದು ನನಗೆ ಮನವರಿಕೆಯಾಯಿತು. (ಸಹೀಹ್ ಬುಖಾರಿ ಕಿತಾಬುಲ್ ಅತಸಾಮ್, ಹದೀಸ್–7284–7285)

ಹಝ್ರ‌ತ್ ಉಸಾಮ ಬಿನ್ ಝೈದ್‌ನ ಸೈನ್ಯವನ್ನು ರವಾನೆ ಮಾಡುವ ಸಂದರ್ಭದಲ್ಲಿ ಹಝ್ರ‌ತ್ ಉಸಾಮರಿಗೆ ಹಝ್ರ‌ತ್ ಅಬೂಬಕರ್(ರ) ಕೆಲವು ನಿರ್ದೇಶನಗಳನ್ನು ನೀಡಿದರು. ಹಝ್ರ‌ತ್ ಉಸಾಮ ಸವಾರರಾಗಿದ್ದರು ಮತ್ತು ಹಝ್ರ‌ತ್ ಅಬೂಬಕರ್(ರ) ಅವರೊಂದಿಗೆ ನಡೆಯುತ್ತಾ ಹೋಗುತ್ತಿದ್ದರು. ನೀವು ಸವಾರರಾಗಿರಿ, ಇಲ್ಲದಿದ್ದರೆ ನಾನು ಸಹ ಸವಾರಿಯಿಂದ ಇಳಿಯುವೆನು ಎಂದು ಹಝ್ರ‌ತ್ ಉಸಾಮ ವಿನಂತಿಸಿದರು. ಹಝ್ರ‌ತ್ ಅಬೂಬಕರ್(ರ) ಹೇಳಿದರು: ನೀನು ಇಳಿಯಬೇಡ, ಅಲ್ಲಾಹನಾಣೆ ನಾನು ಸವಾರನಾಗುವುದಿಲ್ಲ. ಅಲ್ಲಾಹನ ಮಾರ್ಗದಲ್ಲಿ ನನ್ನ ಪಾದಗಳಿಗೆ ಸ್ವಲ್ಪ ಧೂಳಾದರೆ ಏನು ಅಡ್ಡಿಯಿದೆ. ಏಕೆಂದರೆ ಯೋಧನ ಪ್ರತಿಯೊಂದು ಹೆಜ್ಜೆಯ ಬದಲಿಗೆ ಏಳು ನೂರು ಪುಣ್ಯಗಳು ಬರೆಯಲ್ಪಡುತ್ತವೆ. ಅದರೊಂದಿಗೆ 700 ಪದವಿಗಳು ಉನ್ನತವಾಗುತ್ತವೆ. ಅವನ 700 ಪಾಪಗಳನ್ನು ಕ್ಷಮಿಸಲಾಗುತ್ತವೆ. ಅನಂತರ ಹೇಳಿದರು. ಹಝ್ರ‌ತ್ ಉಮರ್‌ರನ್ನು(ರ) ನನ್ನ ಬಳಿ ಇರಿಸು. ಅವರನ್ನು ಯುದ್ಧಕ್ಕೆ ಕೊಂಡುಹೋಗಬೇಡ. ಹಝ್ರ‌ತ್ ಉಸಾಮ ಅದನ್ನು ಸಮ್ಮತಿಸಿದರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–246, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಹಝ್ರ‌ತ್ ಅಬೂಬಕರರ(ರ) ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಪವಿತ್ರ ಖುರ್‌ಆನ್ ಕಂಠಮಾಡಿದ್ದ ಎಪ್ಪತ್ತು ಹಾಫಿಝ್‌ಗಳು ಹುತಾತ್ಮರಾದರು. ಇದರ ಬಗ್ಗೆ ಹಝ್ರ‌ತ್ ಝೈದ್ ಬಿನ್ ಸಾಬಿತ್ ಅನ್ಸಾರಿ(ರ) ವರದಿ ಮಾಡುತ್ತಾರೆ: ಯಮಾಮದ ಜನರು ಶಹೀದಾದಾಗ ಹಝ್ರ‌ತ್ ಅಬೂಬಕರ್(ರ) ನನ್ನನ್ನು ಕರೆದರು. ಆ ಸಮಯದಲ್ಲಿ ಹಝ್ರ‌ತ್ ಉಮರ್(ರ) ಅವರೊಂದಿಗೆ ಇದ್ದರು. ಹಝ್ರ‌ತ್ ಅಬೂಬಕರ್(ರ) ಹೇಳಿದರು: ಹಝ್ರ‌ತ್ ಉಮರ್ ನನ್ನ ಬಳಿಗೆ ಬಂದಿರುವರು. ಯಮಾಮದ ಯುದ್ಧದಲ್ಲಿ ಅನೇಕ ಜನರು ಶಹೀದಾದರು. ಇನ್ನು ಬರುವ ಯುದ್ಧಗಳಲ್ಲೂ ಹಾಫಿಝ್‌ಗಳು ಕೊಲ್ಲಲ್ಪಡಲು ಸಾಧ್ಯತೆಯಿದೆ ಎಂದು ತೋರುತ್ತದೆ ಎಂದು ಉಮರ್ ಹೇಳುತ್ತಿದ್ದಾರೆ. ಹೀಗಾದರೆ ಪವಿತ್ರ ಖುರ್‌ಆನಿನ ಹಲವಾರು ಭಾಗಗಳು ನಷ್ಟವಾಗುವುವು. ಆದ್ದರಿಂದ ಪವಿತ್ರ ಖುರ್‌ಆನನ್ನು ಒಂದು ಕಡೆ ಸಂಕಲಿಸಬೇಕು. ಹಝ್ರ‌ತ್ ಅಬೂಬಕರ್(ರ) ಹೇಳಿದರು: ಹಝ್ರ‌ತ್ ಪೈಗಂಬರ್(ಸ) ಮಾಡದ ಕೆಲಸವನ್ನು ನಾನು ಹೇಗೆ ಮಾಡಲಿ. ಹಝ್ರ‌ತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನಮ್ಮ ಈ ಕೆಲಸ ಉತ್ತಮವಾಗಿರುವುದು. ಹಝ್ರ‌ತ್ ಉಮರ್(ರ) ಪದೇ ಪದೇ ಇದನ್ನೇ ಹೇಳುತ್ತಿದ್ದರು. ಆಗ ಹಝ್ರ‌ತ್ ಅಬೂಬಕರರ ಹೃದಯವು ಈ ಕೆಲಸಕ್ಕಾಗಿ ತೆರೆಯಲ್ಪಟ್ಟಿತ್ತು. ಹಝ್ರ‌ತ್ ಉಮರ್ ಹೇಳಿದ್ದು ಸರಿಯೆಂದು ಅವರಿಗೂ ಅನಿಸಿತು. ಅನಂತರ ಹಝ್ರ‌ತ್ ಅಬೂಬಕರ್(ರ) ಝೈದ್ ಬಿನ್ ಸಾಬಿತ್‌ರೊಡನೆ ಹೇಳಿದರು; ನೀವು ಬುದ್ಧಿವಂತರಾಗಿರುವಿರಿ, ನೀವು ಹಝ್ರ‌ತ್ ಪೈಗಂಬರ್‌ರಿಗೆ(ಸ) ಅವತೀರ್ಣವಾಗುತ್ತಿದ್ದ ದಿವ್ಯವಾಣಿಗಳನ್ನು ಬರೆಯುತ್ತಿದ್ದೀರಿ. ಆದ್ದರಿಂದ ಎಲ್ಲೆಲ್ಲ ಪವಿತ್ರ ಖುರ್‌ಆನಿನ ವಚನಗಳು ಇವೆಯೋ ಅವುಗಳನ್ನು ಹುಡುಕಿಕೊಂಡು ಒಂದು ಕಡೆ ಒಟ್ಟುಗೂಡಿಸಿರಿ. ಹಝ್ರ‌ತ್ ಝೈದ್ ಬಿನ್ ಸಾಬಿತ್ ಹೇಳುತ್ತಾರೆ: ಅಲ್ಲಾಹನಾಣೆ, ಒಂದು ಪರ್ವತವನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಕೊಂಡು ಹೋಗಲು ಹೇಳುತ್ತಿದ್ದರೆ, ಅದು ನನಗೆ ಈ ಕೆಲಸಕ್ಕಿಂತ ಸುಲಭವಾಗಿತ್ತು. ನಾನು ಎದ್ದುನಿಂತೆ ಮತ್ತು ಪವಿತ್ರ ಖುರ್‌ಆನಿನ ವಚನಗಳನ್ನು ಹುಡುಕಲು ಶುರುಮಾಡಿದೆ. ಚರ್ಮದ ಕಾಗದದಲ್ಲಿ, ಎಲುಬುಗಳಲ್ಲಿ, ಖರ್ಜೂರದ ಕೊಂಬೆಗಳಲ್ಲಿ ಮತ್ತು ಕಂಠಪಾಠ ಮಾಡಿದ್ದ ಜನರಿಂದ ಅವುಗಳನ್ನು ಹುಡುಕಿ ಒಂದು ಕಡೆ ಒಟ್ಟುಗೂಡಿಸಿದೆ. ಸೂರಃ ತೌಬದ ಎರಡು ಆಯತ್ತುಗಳು ಹಝ್ರ‌ತ್ ಹಝೀಮ ಅನ್ಸಾರಿಯ ಬಳಿಯಲ್ಲಿ ಮಾತ್ರವಿದ್ದುವು. ಆ ವಚನಗಳು ಬೇರೆ ಯಾರ ಬಳಿಯಲ್ಲೂ ಇರಲಿಲ್ಲ. ಅವು ಇವುಗಳಾಗಿವೆ: **ಲಖದ್ ಜಾಅಕುಂ ರಸೂಲು ಮಿನ್ ಅನ್‌ಫುಸಿಕುಂ ಅಝೀಝುನ್ ಅಲೈಹಿ ಮಾ ಅನಿತ್ತುಂ ಹರೀಸುನ್ ಅಲೈಕುಂ ಬಿಲ್‌ಮೂಮಿನೀನ್ ರಊಫುನ್ ರಹೀಂ.** ಎಂದರೆ, ನಿಜವಾಗಿಯೂ ನಿಮ್ಮ ಬಳಿಗೆ ನಿಮ್ಮಿಂದಲೇ ಇರುವ ಒಬ್ಬ ಸಂದೇಶವಾಹಕನ ಆಗಮನವಾಗಿದೆ. ನೀವು ಕಷ್ಟಕ್ಕೀಡಾಗುವುದು ಅವರನ್ನು ವ್ಯಾಕುಲಗೊಳಿಸುತ್ತದೆ. ಅವರು ನಿಮ್ಮ ಕ್ಷೇಮಾಭಿವೃದ್ಧಿಯನ್ನು ಹೃತ್ಪೂರ್ವಕವಾಗಿ ಆಶಿಸುವವರಾಗಿದ್ದಾರೆ. ಸತ್ಯವಿಶ್ವಾಸಿಗಳ ಮೇಲೆ ಅವರಿಗೆ ಕನಿಕರವೂ ದಯೆಯೂ ಇದೆ.

ಪವಿತ್ರ ಖುರ್‌ಆನ್ ಒಟ್ಟುಗೂಡಿಸಲ್ಪಟ್ಟ ಆ ಕಾಗದಗಳು ಹಝ್ರತ್ ಅಬೂಬಕರ್‌ರ ಬಳಿಯಲ್ಲಿತ್ತು. ಅವರ ಮರಣದ ನಂತರ ಅವು ಹಝ್ರತ್ ಉಮರರ ಬಳಿಯಲ್ಲಿದ್ದುವು. ಅವರ ನಿಧನದ ನಂತರ ಅವು ಅವರ ಮಗಳಾದ ಹಝ್ರತ್ ಹಪ್ಸ ಬಿನ್ತ್ ಉಮರರ ಬಳಿಯಲ್ಲಿ ಇದ್ದುವು. ಅನಂತರ ಅವುಗಳನ್ನು ಹಝ್ರತ್ ಉಸ್ಮಾನ್(ರ) ಪಡೆದರು. (ಸಹೀಹ್ ಬುಖಾರಿ ಕಿತಾಬುತ್ತಫ್‌ಸೀರ್, ಹದೀಸ್–4679)

ಇದರ ಬಗ್ಗೆ ಪ್ರಸ್ತಾಪ ನಡೆಯುತ್ತಿದೆ. ಇನ್ನೂ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

**********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಇದೀಗ ನಾವು ಆರೋಪದ ಪ್ರತಿ ಆರೋಪವಾಗಿ ಒಂದು ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಮತ್ತು ಈ ಎರಡು ಸಾವಿರ ರೂಪಾಯಿಯ ಜಾಹೀರಾತನ್ನು ನಮ್ಮ ಸತ್ಯತೆಯ ಮೂರನೆಯ ಸಾಕ್ಷ್ಯವಾಗಿ ಜಾರಿ ಮಾಡುತ್ತಿದ್ದೇವೆ. ನಮ್ಮ ವಿರೋಧಿಗಳು ನೆನಪಿಡಲಿ. ಈಗಲೂ ಸಹ ಆಥಮ್ ಸಾಹಿಬ್ ಖಂಡಿತವಾಗಿಯೂ ಆಣೆ ಮಾಡಲಾರರು. ಏಕೆಂದರೆ ಸುಳ್ಳುಗಾರರಾದ ಕಾರಣ ಬಹುಶಃ ಅವರಿಗೆ ಈ ಹೆದರಿಕೆ ಇದೆ. ಒಂದು ವರ್ಷದೊಳಗೆ ಸಾಯಬೇಕಾಗಿದೆ. ನಾವು ಹೇಳುತ್ತೇವೆ. ಯಾರು ಸಾಯಿಸುವವರು? ದೇವನಾದ ಮಸೀಹನೇ ಅಥವಾ ಬೇರೊಬ್ಬರೇ. ಅಂದ ಹಾಗೆ ಈ ಎರಡು ದೇವರುಗಳ ಯುದ್ಧದಲ್ಲಿ ಒಂದು ನಮ್ಮ ಸತ್ಯವಂತ ದೇವನಾಗಿದ್ದಾನೆ ಮತ್ತು ಇನ್ನೊಂದು ಕೃತಕ ದೇವನಾಗಿದ್ದಾನೆ. ಅದು ಕ್ರೈಸ್ತರ ದೇವನಾಗಿದ್ದಾನೆ. ಹೀಗಿರುವಾಗ ಆಥಮ್ ಸಾಹಬರು ಹಝ್ರತ್ ಮಸೀಹ್ ದೇವತ್ವ ಮತ್ತು ಅವರ ಪ್ರಭುತ್ವದ ಮೇಲೆ ವಿಶ್ವಾಸ ಹೊಂದುವವರಾದರೆ? ಬದಲು ಅವರು ಪರೀಕ್ಷಿಸಿಯೂ ಆಗಿದೆ. ಮತ್ತೆ ಇದೀಗ ಅವರ ಮುಂದೆ ಹೇಳಿಕೊಳ್ಳಲಿ ಇದೀಗ ಈ ನಿರ್ಣಾಯಕ ಘಟ್ಟದಲ್ಲಿ ನನ್ನನ್ನು ಅವಶ್ಯವಾಗಿ ಜೀವಂತವಾಗಿರಿಸು ಎಂದು. ಹಾಗೆ ನೋಡಿದರೆ ಸಾವು ಯಾರಿಗೂ ತಪ್ಪಿದ್ದಲ್ಲ. ಆಥಮ್ ಸಾಹಿಬರು 64 ವರ್ಷದವರಾಗಿದ್ದರೆ ಈ ವಿನೀತನು 60 ವರ್ಷದವನಾಗಿದ್ದಾನೆ. ನಮ್ಮಿಬ್ಬರ ಮೇಲೆ ಒಂದೇ ದೇವನಿಯಮ ವಿಧಿಸಿದಂತಿದೆ. ಆದರೆ ಅದೇ ರೀತಿಯ ಆಣೆ ಸತ್ಯಪರೀಕ್ಷೆಗಾಗಿ ನನಗೆ ಮಾಡಲು ಹೇಳುತ್ತಿದ್ದರೆ ನಾವು ಒಂದು ವರ್ಷವೇಕೆ ಹತ್ತು ವರ್ಷ ತನಕ ಜೀವಂತವಾಗಿರಲು ಆಣೆ ಮಾಡುತ್ತಿದ್ದೆವು. ಏಕೆಂದರೆ ನಾವು ಬಲ್ಲವರಾಗಿದ್ದೇವೆ. ಧರ್ಮದ ಪರವಾಗಿ ಮಾತನಾಡುವವರನ್ನು ಅಲ್ಲಾಹನು ಅವಶ್ಯವಾಗಿ ರಕ್ಷಿಸುತ್ತಾನೆ. ಇಂತಹ ಸಮಯದಲ್ಲಿ ನಾನು ಸಾಯಬಹುದು ಎಂಬ ಸಂಶಯ ಊಹಿಸಿದರೂ ಸಹ ಅವನ ಕಪಟತನ ಬಯಲಾಗುತ್ತದೆ. ಹುಟ್ಟು, ಸಾವು ದೇವನ ಕೈಯಲ್ಲಿಲ್ಲವೇ. ಅವನ ಆಜ್ಞೆಯಿಲ್ಲದೇ ಹಾಗೆ ಸುಮ್ಮನೆ ಜನರು ಸಾಯುತ್ತಾರೆಯೇ? ಹಾಗೆ ನೋಡಿದರೆ ಈ ಪ್ರಶ್ನೆ ಎರಡರಲ್ಲೂ ಬರುತ್ತದೆ, ಮರಣದಲ್ಲಿಯೂ ಹಗೂ ಉಳಿಯುವುದರಲ್ಲಿಯೂ ಅದರಲ್ಲ ಉಳಿಯುವ ಸಂಭವವೇ ಹೆಚ್ಚಾಗಿರುತ್ತದೆ. ಏಕೆಂದರೆ ಸಾಯುವುದು ಒಂದು ಹೊಸ ಘಟನೆಯಾಗಿರುತ್ತದೆ ಅದು ತಿಳಿದಿರುವುದಿಲ್ಲ. ಜೀವಂತವಾಗಿರುವುದು ಒಂದು ಮಾಮೂಲು ಕ್ರಿಯೆಯಾಗಿದೆ. ಹೀಗಿರುವಾಗ ಸಾವಿನ ಬಗ್ಗೆ ಚಿಂತಿಸುವುದು ತನ್ನ ಪ್ರಭುವಿನ ಮೇಲೆ, ಅವನ ಶಕ್ತಿಯ ಮೇಲೆ ವಿಶ್ವಾಸವಿಲ್ಲ ಎಂದಾಗುತ್ತದೆ. ಸಾಹೇಬರೇ ಇದು ಎರಡು ದೇವರುಗಳ ಯುದ್ಧವಾಗಿದೆ. ಯಾವನು ಸತ್ಯವಂತನು ಅವನೇ ವಿಜಯಿಯಾಗುವನು. ಅದಾಗ್ಯೂ ನಾವು ಹೇಳುತ್ತೇವೆ. ನಮ್ಮ ಪ್ರಭು ಅವಶ್ಯವಾಗಿ ತನ್ನ ಚಮತ್ಕಾರ ತೋರಿಸುವವನು ಮತ್ತು ನಾವು ಈ ಆಣೆಯ ಅವಧಿಯಲ್ಲಿ ಸಾಯುವುದಿಲ್ಲ. ಆದರೆ ಆಥಮ್ ಸಾಹಿಬರು ಸುಳ್ಳು ಆಣೆ ಮಾಡಿರುವವರಾದರೆ ಅವಶ್ಯವಾಗಿ ಮರಣ ಹೊಂದುವರು. ಆಗ ಅವರಿಗೆ ದೇವರ ಮೇಲೆ ಯಾವ ಪರಿಣಾಮ ಉಂಟಾಗುವುದೋ ಆಗ ಅವನು ಅವರನ್ನು ಉಳಿಸಲಾರನು ಮತ್ತು ಮುಕ್ತಿಕೊಡುವ ಸ್ಥಾನದಿಂದ ರಾಜಿನಾಮೆ ಕೊಡುವನು. (ಇಶ್ತಿಹಾರ್ ಇನ್‌ಆಮಿ ದೋ ಹಝಾರ್ ರುಪಿಏ, ಅನ್ವಾರುಲ್ ಉಲೂಮ್, ರೂಹಾನಿ ಖಝಾಇನ್, ಸಂಪುಟ–9, ಪುಟ–63)

**ಆಥಮನ ದೇವನು ಅವನನ್ನು ಒಂದು ವರ್ಷ ಉಳಿಸಲು ಅಶಕ್ತನೆಂದಾದರೆ, ಬದಲು ಮೂರು ದಿನಗಳವರೆಗೆ ಬೇಕಾದರೆ ಉಳಿಸಬಹುದು ಎಂದಾದರೆ ನಾವು ಮೂರು ದಿನಗಳ ಶರತ್ತಿಗ ಒಪ್ಪಲು ಸಿದ್ಧರಿದ್ದೇವೆ.**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಈಗ ಪಲಾಯನ ಮಾಡಲು ಯಾವ ಕಾರಣವೂ ಇಲ್ಲ. ಒಂದು ಮಸೀಹರನ್ನು ಸರ್ವಶಕ್ತ ದೇವ ಎನ್ನುವುದು ಬಿಡಬೇಕು. ಇಲ್ಲ ಆಣೆ ಮಾಡಬೇಕು. ಹೌದು ಒಂದು ವೇಳೆ ಅವರು ಸಾರ್ವಜನಿಕ ಸಭೆಯಲ್ಲಿ ಒಪ್ಪಿಕೊಳ್ಳಬೇಕು. ಅವರ ದೇವಪುತ್ರನು ಒಂದು ವರ್ಷ ಜೀವಂತವಾಗಿಡುವ ಸಾಮರ್ಥ್ಯ ಹೊಂದಿಲ್ಲ. ಆದರೆ ವರ್ಷದ 1/3 ಭಾಗ ಅಥವಾ ಮೂರು ದಿನದವರೆಗೆ, ತನ್ನ ಭಕ್ತನನ್ನು ಜೀವಂತವಾಗಿಡಬಹುದು ಎಂದು ಹೇಳಿಕೆ ನೀಡಿದ ನಂತರ ನಾವು ನಾಲ್ಕು ತಿಂಗಳು ಅಥವಾ ಮೂರು ದಿನಗಳನ್ನೇ ಒಪ್ಪಿಕೊಳ್ಳುವೆವು. ಈಗಲೂ ಸಹ ಈ ಎರಡು ಸಾವಿರ ರೂಪಾಯಿಗಳ ಜಾಹೀರಾತಿನಿಂದ ಮುಖ ತಿರುಗಿಸಿದರೆ ಎಲ್ಲಾ ಕಡೆಯೂ ನಮ್ಮ ಪರಿಪೂರ್ಣ ವಿಜಯದ ಡಂಗುರ ಬಾರಿಸಿದಂತಾಗುವುದು. ಕ್ರೈಸ್ತರು ಮತ್ತು ಅರೆಬರೆ ಕ್ರೈಸ್ತರು ಎಲ್ಲರೂ ಅವಮಾನಿತರಾದ ಹಾಗೆ ಸೋಲುಣ್ಣುವಂತಾಗುವುದು. ನಾವು ಈ ಪತ್ರಿಕೆ ಪ್ರಕಟಗೊಂಡ ದಿನದಿಂದ ಒಂದು ವಾರದ ಅವಧಿ ಆಥಮ್ ಸಾಹಿಬರಿಗೆ ನೀಡುತ್ತೇವೆ. ಬಾಕಿ ಶರತ್ತುಗಳೆಲ್ಲ 9 ಸೆಪ್ಟೆಂಬರ್ 1894 ಪತ್ರಿಕೆಯಲ್ಲಿ ಉಲ್ಲೇಖಿಸಿದಂತೆಯೇ ಇರುವುದು. ವಸ್ಸಲಾಮು ಅಲಾ ಮನತ್ತಬಲ್‌ಹುದಾ. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–9, ಪುಟ–70)

**ಒಂದು ವರ್ಷ ಕೂಡ ಕಾಪಾಡದಂತಹ ದೇವನ ಮೇಲೆ ವಿಶ್ವಾಸ ಹೊಂದುವುದು ತುಂಬಾ ಅಪಾಯಕರವಾಗಿದೆ.**

ಅವರ ಕೃತಕ ದೇವನು ಒಂದು ವರ್ಷ ತನಕ ಆಥಮನಿಗೆ ಉಳಿಸಲು ಸಾಧ್ಯವಿಲ್ಲವೇ? ಅವರ ವಯಸ್ಸು ಸಹ ಅಷ್ಟೊಂದು ದೀರ್ಘವಾಗಿಲ್ಲ. ಬದಲಾಗಿ ನನ್ನ ವಯಸ್ಸಿಗಿಂತ ಕೆಲವೇ ವರ್ಷಗಳು ಹೆಚ್ಚಾಗಿವೆ. ಹೀಗಿರುವಾಗ ಆ ಕೃತಕ ದೇವನಿಗೆ ಯಾವ ದುರ್ಬಲತೆ ಕಾಡುವುದು, ಒಂದು ವರ್ಷ ಕಾಪಾಡಲಿಕ್ಕೆ ಆಗುವುದಿಲ್ಲವೇ. ಇಂತಹ ದೇವನ ಮೇಲೆ ಮೋಕ್ಷದ ಭರವಸೆ ಹೊಂದುವುದು ತೀರ ಅಪಾಯಕರವಾಗಿದೆ. ಅವನು ಒಂದು ವರ್ಷ ಕಾಪಾಡದಿದ್ದರೆ ಏನು ಪ್ರಯೋಜನ, ನಾವು ಪ್ರತಿಜ್ಞೆ ಮಾಡಲಿಲ್ಲವೇ. ನಮ್ಮ ಅಲ್ಲಾಹನು ಒಂದು ವರ್ಷದವರೆಗೆ ನಿಶ್ಚಿತವಾಗಿಯೂ ಕಾಪಾಡುವನು ಎಂದು. ಮತ್ತು ಆಥಮ್ ಸಾಹಿಬ್ ಈ ಲೋಕದಿಂದ ಅಗಲಿ ಹೋಗುವನು ಎಂದು. ಏಕೆಂದರೆ ಅವನು ಸರ್ವಶಕ್ತನು ಮತ್ತು ಸತ್ಯವಂತ ದೇವನಾಗಿದ್ದಾನೆ. ಅದರಿಂದ ಕ್ರೈಸ್ತರು ವಂಚಿತರಾಗಿದ್ದಾರೆ. ಮತ್ತು ತಮ್ಮಲ್ಲಿರುವ ಮನುಷ್ಯನೊಬ್ಬನನ್ನು ದೇವನನ್ನಾಗಿ ಮಾಡಿಕೊಂಡಿದ್ದಾರೆ. ಆಗ ತಾನೆ ಅವರು ಅಂಜುಬುರುಕರಾದದ್ದು. ಒಂದು ವರ್ಷದ ಭರವಸೆ ಮಾಡಲು ಆಗುತ್ತಿಲ್ಲ. ಸತ್ಯ ಹೇಳಬೇಕಾದರೆ ಹೇಗೆ

ತಾನೇ. ದೇವರುಗಳ ಮೇಲೆ ಭರವಸೆ ಬರುವುದು. ಸತ್ಯ ಪ್ರಕಾಶವು ಹೇಗೆ ತಾನೇ ಸಾಕ್ಷಿ ನೀಡಬಲ್ಲುದು. ಇಂತಹ ದುರ್ಬಲ ದೇವನು ಒಂದು ವರ್ಷ ನಮ್ಮನ್ನು ಉಳಿಸಬಹುದೆಂದು. ಆದರೆ ನಾವಂತೂ 20 ಸೆಪ್ಟೆಂಬರ್ 1894 ರ ಜಾಹಿರಾತಿನಲ್ಲಿ ಇದನ್ನು ಸಹ ಬರೆದಿದ್ದೇವೆ. ಒಂದು ವೇಳೆ ಆಥಮ್ ಸಾಹಿಬರಿಗೆ ತನ್ನ ಕೃತಕ ದೇವ ಎಂತಹ ದುರ್ಬಲನಾಗಿದ್ದಾನೆ, ಅವನು ಒಂದು ವರ್ಷ ಕಾಪಾಡುತ್ತಾನೆಂಬ ಭರವಸೆ ಇಲ್ಲ ಎಂದಾದರೆ, ಇಷ್ಟಾದರೂ ಹೇಳಲಿ ಆ ದೇವಪುತ್ರ ಹೆಸರಿನ ದೇವನು ನನಗೆ ಒಂದು ವರ್ಷತನಕ ಕಾಪಾಡಲು ಸಾಧ್ಯವಿಲ್ಲ. ನಾವು ಈ ಹೇಳಿಕೆಯ ನಂತರ ಮೂರು ದಿನಗಳಿಗೆ ಒಪ್ಪುವೆವು ಎಂದು. ಆದರೆ ಯಾವುದಕ್ಕೂ ಅವರು ಮೈದಾನದಲ್ಲಿ ಬರಲಾರರು. ಏಕೆಂದರೆ ಸುಳ್ಳುಗಾರರಿಗೆ ತನ್ನ ಸುಳ್ಳಿನ ಭಯವಿರುತ್ತದೆ. ಸತ್ಯದ ಮುಂದೆ ಬರಬೇಕಾದರೆ ಸಾವಿನ ಎದುರು ಬಂದಂತೆಯೇ ಸರಿ. (ಅದೇ ಪುಟ 79).

**ಅಬ್ದುಲ್ಲ ಆಥಮನು ಆಣೆ ಮಾಡಲಿಲ್ಲ ಅಥವಾ ಆಣೆ ಮಾಡಿದ ಶಿಕ್ಷೆ ಅವಧಿಯ ಒಳಗೆ ಕಾಣಲಿಲ್ಲ ಎಂದಾದರೆ ನಾವು ಸತ್ಯವಂತರು.**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ನಾವು ಎಲ್ಲಾ ಗ್ರಂಥಗಳನ್ನು ನೋಡಿದ್ದೇವೆ ಮತ್ತು ಪವಿತ್ರ ಖುರ್‌ಆನ್‌ನನ್ನು ಮೊದಲಿನಿಂದ ಹಿಡಿದು ಕೊನೆಯ ತನಕ ಓದಿದ್ದೆವು. ಆದರೆ ಇಂತಹ ಘಟನೆ ಯಾವ ಗ್ರಂಥದಲ್ಲೂ ಕಾಣಲಿಲ್ಲ. ಭಯವುಳ್ಳ ಕಾಫಿರನ ಮೇಲೆ ಸಿಡಿಲು ಬಡಿದಿರಬೇಕು. ಅಂತಹವರ ಶಿಕ್ಷೆಗಾಗಿ ಪರಲೋಕವಿದೆ. ಇಹಲೋಕದಲ್ಲಿ ಪಿತೂರಿಗಾರರಿಗೆ, ವಂಚಕರಿಗೆ ಮತ್ತು ಹಿಂಸಾವಾದಿಗಳಿಗೆ ಅದು ಮಿತಿಮೀರಿದರೆ ಶಿಕ್ಷೆ ಅವತರಿಸುತ್ತದೆ. ಇದೀಗ ಕಣ್ಣು ತೆರೆದು ಎಚ್ಚೆತ್ತಿಕೊಂಡು ವಿಚಾರಿಸಿರಿ. ಪುರಾತನ ಕಾಲದಿಂದ ದೇವನಿಯಮ ಹೀಗಿರುವಾಗ ಮತ್ತು ಭವಿಷ್ಯವಾಣಿಯಲ್ಲಿ ಶರತ್ತಿರುವಾಗ ಹೇಗೆ ತಾನೆ ಅಬ್ದುಲ್ಲ ಆಥಮನ ಮೇಲೆ ಮರಣದ ಶಿಕ್ಷೆ ಎರಗಲು ಸಾಧ್ಯವಿತ್ತು. ಹೌದು ಅವರು ಕಿಂಚಿತ್ತೂ ಸತ್ಯದೆಡೆ ಮರಳಲಿಲ್ಲ ಮತ್ತು ಹೆದರಲಿಲ್ಲ ಎಂದಾದರೆ ಈ ಸಂಶಯ ದೂರ ಮಾಡಲು ಈ ಒಂದು ನೇರವಾದ ಮತ್ತು ಸ್ಪಷ್ಟವಾದ ಮಾನದಂಡವಾಗಿದೆ. ನಾವು ಅಬ್ದುಲ್ಲ ಆಥಮರಿಗೆ ಎರಡು ಸಾವಿರ ರೂಪಾಯಿ ನಗದು ನೀಡುತ್ತೇವೆ. ಅವರು ಮೂರು ಸಲ ಆಣೆ ಮಾಡಿ ಹೇಳಲಿ. ತಾನು ಒಂದಿಷ್ಟು ಸಹ ಇಸ್ಲಾಮಿನ ಸತ್ಯತೆಯನ್ನು ಒಪ್ಪಲಿಲ್ಲ, ಇಸ್ಲಾಮಿನ ಭವಿಷ್ಯವಾಣಿಯ ಪ್ರತಾಪದ ಪ್ರಭಾವ ನನ್ನ ಮೇಲಾಗಲಿಲ್ಲ, ಬದಲಾಗಿ ನಾನು ಕಠಿಣ ಹೃದಯಿಯೂ ಆಗಿದ್ದೆ ಮತ್ತು ಇಸ್ಲಾಮಿನ ಶತ್ರುವಾಗಿದ್ದೆ. ಹಾಗೂ ಮಸೀಹರನ್ನು ದೇವನೆಂದೇ ನಂಬಿದ್ದೆ. ಆಗ ನಾವು ಅದೇ ಸಮಯಕ್ಕೆ ತಡಮಾಡದೆ ಎರಡು ಸಾವಿರ ರೂಪಾಯಿ ಕೊಡದಿದ್ದರೆ ನಮ್ಮ ಮೇಲೆ ಶಾಪವಿರಲಿ. ನಾವು ಸುಳ್ಳುಗಾರರು ಮತ್ತು ನಮ್ಮ ದೇವವಾಣಿ ಸುಳ್ಳು ಎನ್ನಬಹುದಾಗಿದೆ. ಅದಲ್ಲದೇ ಅಬ್ದುಲ್ಲ

ಆಥಮ್ ಆಣೆ ಮಾಡಲಿಲ್ಲ. ಅಥವಾ ಆಣೆ ಮಾಡಿದ ಅವಧಿಯ ಒಳಗೆ ಶಿಕ್ಷೆ ಅನುಭವಿಸಲಿಲ್ಲ ಎಂದಾದರೆ ನಾವು ಸತ್ಯವಂತರು ಮತ್ತು ನಮ್ಮ ದೇವವಾಣಿ ಸತ್ಯವಾದುದು. ಅಷ್ಟಾದರೂ ಯಾರಾದರೂ ಉದ್ಧಟತನದಿಂದ ನಮ್ಮನ್ನು ಸುಳ್ಳಾಗಿಸಿದರೆ, ವಿನಾಕಾರಣ ಸತ್ಯವನ್ನು ಮರೆ ಮಾಚಿಸುವವರಾದರೆ ನಿಸ್ಸಂಶಯವಾಗಿಯೂ ಅವರು ಧರ್ಮಬದ್ಧ ಸಂತಾನ ಮತ್ತು ಸಜ್ಜನರಾಗಿರಲು ಸಾಧ್ಯವಿಲ್ಲ. ಸುಖಾಸುಮ್ಮನೆ ಸತ್ಯವನ್ನು ಅಲ್ಲಗಳೆಯುವವರು ಮತ್ತು ತಮ್ಮ ರಾಕ್ಷಸಿ ಪ್ರಯತ್ನಗಳಿಂದ ಸತ್ಯವನ್ನು ಸುಳ್ಳಾಗಿಸುವವರು ಎಂದೂ ವಿಜಯ ಪಡೆಯಲಾರರು.

**ಕ್ರೈಸ್ತರು ಜಾಹೀರಾತು ಹೊರಡಿಸಿದ್ದಾರೆ. ದೇವನಾದ ಮಸೀಹನು ಆಥಮನ ಜೀವ ಉಳಿಸಿದನೆಂದು. ಹಾಗಾದರೆ ಈಗಲೂ ಸಹ ದೇವನಾದ ಮಸೀಹನು ಜೀವ ಉಳಿಸುವನು, ಎದುರು ಬರಲು ಆಥಮನಿಗೆ ಭಯವೇಕೆ?**

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಈಗ ಅದಕ್ಕಿಂತ ಹೆಚ್ಚು ಸ್ಪಷ್ಟವಾದ ನಿರ್ಣಯ ಏನಾಗಬಹುದು? ನಾವು ಇಬ್ಬರ ವಚನಗಳಂತೆ ಸ್ವಯಂ ಅಮೃತ್ಸರಕ್ಕೆ ಬಂದು ಎರಡು ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಶ್ರೀ ಅಬ್ದುಲ್ಲ ಆಥಮನು ನಿಜವಾಗಿಯೂ ನನ್ನನ್ನು ಸುಳ್ಳುಗಾರ ಎಂದು ಭಾವಿಸುವುದಾದರೆ, ಕಿಂಚಿತ್ತು ಇಸ್ಲಾಮನ್ನು ಗೌರವಿಸಲು ಒಪ್ಪುವುದಿಲ್ಲ ಎಂದಾದರೆ ಅವಶ್ಯವಾಗಿ, ಯಾವ ಆತಂಕವಿಲ್ಲದೆ, ತಡಮಾಡದೆ ಮೇಲ್ಕಾಣಿಸಿದ ಬರಹದನ್ವಯ ಒಪ್ಪಿಗೆ ಸೂಚಿಸಬೇಕು. ಏಕೆಂದರೆ ಈಗಂತೂ ಅವರು ತಮ್ಮ ಅನುಭವದಿಂದ ನಾನು ಸುಳ್ಳುಗಾರನೆಂದು ತಿಳಿದುಕೊಂಡಿದ್ದಾರೆ. ಮತ್ತು ಅವರಿಗೆ ಮಸೀಹರ ರಕ್ಷಣೆಯು ಖಾತರಿಯಾಗಿದೆ. ಇನ್ನು ನಮ್ಮನ್ನು ಎದುರಿಸಲು ಭಯವಾದರೇನು? ಏನು ಈಸ ಮಸೀಹರು ಮೊದಲು ಹದಿನೈದು ತಿಂಗಳಿಗೋಸ್ಕರ ಜೀವಂತವಾಗಿದ್ದರೆಯೇ? ಮತ್ತು ಮಿಸ್ಟರ್ ಅಬ್ದುಲ್ಲ ಆಥಮರ ರಕ್ಷಣೆ ಮಾಡಬಹುದಿತ್ತೇ, ಈಗ ಮರಣ ಹೊಂದಿದ್ದಾರೆಯೇ ಆದ್ದರಿಂದ ಉಳಿಸಲು ಸಾಧ್ಯವಿಲ್ಲ, ಕ್ರೈಸ್ತರು ತಮ್ಮ ಜಾಹೀರಾತಿನಲ್ಲಿ ನೀಡಿದ ಹೇಳಿಕೆ ಪ್ರಕಾರ ದೇವನಾದ ಮಸೀಹರು ಶ್ರೀ ಅಬ್ದುಲ್ಲ ಆಥಮನ ಜೀವ ಉಳಿಸಿದ್ದಿದ್ದಾದರೆ ಈಗಲೂ ಉಳಿಸಬಹುದಲ್ಲ?

ಈಗ ದೇವನಾದ ಮಸೀಹರ ಶಕ್ತಿ ಸಾಮರ್ಥ್ಯದ ಬಗ್ಗೆ ಸಂಶಯಪಡಲು ಯಾವ ಕಾರಣವಿದೆ. ಬದಲಾಗಿ ಇನ್ನಷ್ಟು ಖಾತರಿಯಾಗಬೇಕು. ಏಕೆಂದರೆ ಅವರ ದೇವತ್ವದ ಸಾಮರ್ಥ್ಯದ ಅನುಭವವಾಗಿರುತ್ತದೆ, ಮತ್ತು ನಮ್ಮ ಸುಳ್ಳಿನ ಬಗ್ಗೆಯೂ ಸಹ. ಆದರೆ ನೆನಪಿಡಿರಿ. ಶ್ರೀ ಅಬ್ದುಲ್ಲ ಆಥಮರು ಚೆನ್ನಾಗಿ ಬಲ್ಲರು. ಇದೆಲ್ಲ ಸುಳ್ಳಾಗಿದೆ. ಅವರನ್ನು ಮಸೀಹರನ್ನು ಕಾಪಾಡಲಿಲ್ಲ. ಅವನು ಸ್ವಯಂ ಮೃತಪಟ್ಟಿರುವವನು, ಹೇಗೆ ತಾನೆ ಇತರರನ್ನು ಉಳಿಸಲು ಸಾಧ್ಯ? ಮೃತ ಹೊಂದಿರುವವನು ಶಕ್ತನಾಗಲು ಹೇಗೆ ಸಾಧ್ಯ? ಅವನು ಎಂತಹ ದೇವನು. ನಿಜ ಹೇಳಬೇಕೆಂದರೆ ಸತ್ಯ ಮತ್ತು ಸರ್ವಶಕ್ತನಾದ ಅಲ್ಲಾಹನ ಭಯ ಅವನಲ್ಲಿ ಉಳಿಸಿದ್ದಾನೆ, ಈಗ ಕ್ರೈಸ್ತರು ಹುರಿದುಂಬಿಸುತ್ತಿರುವ ಕಾರಣ ನಿರ್ಭಯವಾದರೆ ಅದೇ ಸತ್ಯ ಮತ್ತು ಸರ್ವಶಕ್ತನಾದ ಅಲ್ಲಾಹನ ಶಿಕ್ಷೆಯ ರುಚಿ ಕಾಣುವನು. ಒಟ್ಟಿನಲ್ಲಿ ಇದೀಗ, ನಾವು ಅಂತಿಮ ತೀರ್ಪಿಗಾಗಿ ನೇರವಾದ ಮಾರ್ಗವನ್ನು ತೋರಿಸಿದ್ದೇವೆ. ಸತ್ಯ ಮತ್ತು ಮಿಥ್ಯದ ಮಾನದಂಡವನ್ನು ಮುಂದಿಟ್ಟಿದ್ದೇವೆ. ಇದೀಗ ಯಾವ ವ್ಯಕ್ತಿ ಇಂತಹ ಸ್ಪಷ್ಟ ನಿರ್ಣಯದ ವಿರುದ್ಧ ಪಿತೂರಿ ನಡೆಸುವವನೋ ಮತ್ತು ನನ್ನ ಕುತಂತ್ರಗಳಿಂದ ಕ್ರೈಸ್ತರ ವಿಜಯವಾಗಿದೆ ಎಂದು ಲಜ್ಜೆಬಿಟ್ಟು ಹೇಳುವವನೋ, ನಮ್ಮ ನಿರ್ಣಯವನ್ನು ನ್ಯಾಯದೃಷ್ಟಿಯಿಂದ ನೋಡದೇ, ಉತ್ತರ ನೀಡದೇ ನಾಲಿಗೆ ಹರಿಬಿಟ್ಟರೆ ನಮ್ಮ ವಿಜಯವನ್ನು ಒಪ್ಪಿಕೊಳ್ಳುವುದಿಲ್ಲವೆಂದರೆ, ಸ್ಪಷ್ಟವಾಗಿ ತಿಳಿದು ಕೊಳ್ಳಬಹುದು. ಅವರಿಗೆ ಧರ್ಮದ ವಿರುದ್ಧ ಮಾತನಾಡುವ ಚಟವಿದೆ. ಅಂದ ಹಾಗೆ ಧರ್ಮಬದ್ಧ ನಿರ್ಣಯ ಬಯಸುವುದಾದರೆ, ನನಗೆ ಸುಳ್ಳುಗಾರ ಎಂದು ಭಾವಿಸುವವನಿಗೆ ಮತ್ತು ಕ್ರೈಸ್ತರಿಗೆ ವಿಜೇತರು ಎನ್ನುವವರು ನಾನು ನೀಡಿದ ಜಾಹೀರಾತಿಗೆ ಉತ್ತರ ನೀಡಬೇಕಾಗಿದೆ. ಅಂದ ಹಾಗೆ ನನ್ನ ಪತ್ರಿಕೆ ಓದಿದವರಾದರೆ ಅವರು ಆಥಮನ ಬಳಿಗೆ ಊಟೋಪಾಚಾರ ಬಿಟ್ಟು ಮೇಲೆ ಹೇಳಿದ ವಚನಗಳು ಉಚ್ಚರಿಸಲು ಹೇಳಬೇಕು. ಆ ಕಾರ್ಯ ಸಾಧಿಸಿ ತೋರಿಸಿದರೆ ಮೂರು ಸಾವಿರ ರೂಪಾಯಿ ಪಡೆದುಕೊಳ್ಳಲಿ. ಮತ್ತೆ ಅಬ್ದುಲ್ಲಾ ಆಥಮನು ಅವಧಿಯ ಒಳಗೆ ಉಳಿಯುವವನಾದರೆ ನಿಸ್ಸಂಶಯವಾಗಿ ಇಡೀ ಲೋಕದಲ್ಲಿ ಡಂಗುರ ಸಾರಲಿ. ಕ್ರೈಸ್ತರ ವಿಜಯವಾಯಿತು. ಇಲ್ಲವಾದರೆ ಧರ್ಮಭ್ರಷ್ಟರ ಇದೇ ಕೆಲಸವಾಗಿರುತ್ತದೆ. ನೇರ ಮಾರ್ಗ ಸ್ವೀಕರಿಸದೇ ದೌರ್ಜನ್ಯ ಅನ್ಯಾಯ ಮಾರ್ಗಗಳನ್ನು ಪ್ರೀತಿಸುತ್ತಾರೆ. (ಅದೇ ಪುಟ 30)

ಮುಂಚಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರು ನೀಡಿದ ಮೂರು ಸಾವಿರ ಮತ್ತು ನಾಲ್ಕು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ ಹಾಗೂ ಕೆಲವು ಪ್ರತಾಪಶಾಲಿ ಪಂಥಾಹ್ವಾನಗಳ ವಿವರ ನೀಡುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

***(ಪುಟ ಸಂಖ್ಯೆ 01ರ ಉಳಿದ ಭಾಗ)***

ರವರ ಮೇಲಾದ ದೇವವಾಣಿಗಳನ್ನು ಮುಂದಿಟ್ಟು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಅದಾಗ್ಯೂ ಅರಬಿ ಮತ್ತು ಉರ್ದು ಹೊರತಾಗಿ ಆದ ಅನ್ಯಭಾಷೆಯ ದೇವವಾಣಿಗಳು ಅದು ದೃಷ್ಟಾಂತ ಮತ್ತು ಪವಾಡಗಳ ನೆಲೆಯಲ್ಲಿ ಆದದ್ದಾಗಿವೆ. ಅರಬಿಯಲ್ಲಿ ದೇವವಾಣಿಯಾಗಲು ಕಾರಣ ಅರಬಿ ಇಸ್ಲಾಂ ಧರ್ಮದ ಧಾರ್ಮಿಕ ಭಾಷೆಯಾಗಿದೆ. ಅದೇ ರೀತಿ ಉರ್ದು ಮುಸ್ಲಿಮರ ದೇಶಿಯ ಭಾಷೆಯಾಗಿದೆ. ಆದುದರಿಂದ ಮಸೀಹರ(ಅ) ಮೊದಲ ಸಂಬೋಧಕರು ಉರ್ದು ಭಾಷಿಯರಾಗಿದ್ದಾರೆ. ಹಾಗೆ ನೋಡಿದರೆ ಅವರ ದೇವವಾಣಿಗಳ ಸೈದ್ಧಾಂತಿಕ ಭಾಗವೆಲ್ಲ ಅರಬಿಯಲ್ಲಿದೆ ಅಥವಾ ಉರ್ದುವಿನಲ್ಲಿ. ಇತರ ಭಾಷೆಗಳ ದೇವವಾಣಿಗಳೆಲ್ಲ ಪ್ರಚಾರದಲ್ಲಿ ತೊಡಕಾಗುವಂತಿರಲಿಲ್ಲ ಅವು ಕೇವಲ ಒಂದು ಹೆಚ್ಚಿನ ಪುಷ್ಟಿ ನೀಡಲು ದೃಷ್ಟಾಂತ ನೆಲೆಯದ್ದಾಗಿದ್ದವು.

ಕ್ರೈಸ್ತರು ಮತ್ತು ವಿಶೇಷವಾಗಿ ಮೇರಿ ಅವರು ಈ ವಚನದ ಬಗ್ಗೆ, ರಸೂಲುಲ್ಲಾಹ್(ಸ) ರವರ ಬಗ್ಗೆ ಆಕ್ಷೇಪವೆತ್ತಿದ್ದಾರೆ. ಮೇರಿ ಸಾಹಿಬರು ಪ್ರಕಾರ ಈ ವಚನದಿಂದ ತಿಳಿದುಬರುವುದೇನೆಂದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಕೇವಲ ಅರಬಿಗಾಗಿ ಆಗಮಿಸಿದ್ದರು. ಅದರ ಜೊತೆಯಲ್ಲಿ ಹೀಗೂ ಬರೆಯುತ್ತಾರೆ. ಈ ವಚನದಿಂದ ಸಾಬೀತಾಗುವುದೇನೆಂದರೆ ಪವಿತ್ರ ಖುರ್‌ಆನ್‌ನ ಭಾಷಾಂತರ ಮಾಡುವುದು ಧರ್ಮಬದ್ಧವಾಗಿದೆ ಎಂದು. ಅವರ ಈ ಎರಡು ಮಾತುಗಳು ತದ್ವಿರುದ್ಧವಾಗಿವೆ. ನಬಿ ಕರೀಂ(ಸ) ಕೇವಲ ಅರಬಿಯರಿಗೆ ಆಗಮಿಸಿದವರಾಗಿದ್ದರೆ. ಭಾಷಾಂತರದ ಪ್ರಶ್ನೆಯೇ ಬರುತ್ತಿರಲಿಲ್ಲ. ಇತರ ದೇಶಗಳೊಡನೆ ಸಂಬಂಧವೇ ಇಲ್ಲ ಎಂದಾಗ ಭಾಷಾಂತರ ಮಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಈ ವಚನದಿಂದ ಭಾಷಾಂತರ ಮಾಡುವುದು ಧರ್ಮಬದ್ಧ ಎಂದು ಸಾಬೀತಾದಾಗ ಅವರ ಪ್ರವಾದಿತ್ವ ಇತರ ದೇಶದವರಿಗೂ ಸಂಬಂಧಿಸಿದ್ದಾಗಿದೆ ಎಂದು ನಿಚ್ಚಳವಾಯಿತು. ವಾಸ್ತವದಲ್ಲಿ ಹೇಳಬೇಕಾದರೆ ಹಝ್ರತ್ ರಸೂಲುಲ್ಲಾಹ್(ಸ) ಕೇವಲ ಅರಬರಿಗಾಗಿ ಆಗಮಿಸಿದ್ದರು ಎಂಬ ವಿಷಯ ಈ ವಚನದ್ದಾಗಿರಲಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್‌ನ ಇತರ ಸ್ಥಳಗಳಿಂದ ಇದು ಸ್ಪಷ್ಟವಿದೆ. ಅವರು ಸರ್ವಲೋಕಗಳಿಗಾಗಿ ಆಗಮಿಸಿದ್ದರು. ಈ ವಚನದಿಂದ ಇದು ಸಹ ತಿಳಿದುಬರುತ್ತದೆ. ಅರಬಿ ಭಾಷೆಯು "ಉಮುಲ-ಅಲ್ ಸಿನ" ಆಗಿದೆ. ಏಕೆಂದರೆ ಅರಬಿಯಲ್ಲಿ ಆಗಮಿಸಿದ ಪ್ರವಾದಿವರ್ಯರಿಗೆಯೇ ಸರ್ವಲೋಕಗಳ ಸುಧಾರಣೆಯ ಹೊಣೆ ಹೊರಿಸಲಾಗಿದೆ. ಆದುದರಿಂದ ಅರಬಿಯಲ್ಲಿ ಅವತರಿಸಿದ ದೇವವಾಣಿಯು ಸರ್ವಲೋಕಗಳಿಗೆ ಮಾರ್ಗದರ್ಶಕವಾಗಿರುವ ಕಾರಣ ಸಾಬೀತಾಗುವುದೇನೆಂದರೆ ಅರಬಿ ಭಾಷೆಯು ಆಯಾಯ ನೆಲೆಯಲ್ಲಿ ಎಲ್ಲಾ ಭಾಷೆಗಳ ಮೂಲವಾಗಿದೆ ಮತ್ತು ಇತರ ಭಾಷೆಗಳು ಅದರ ಶಾಖೆಗಳಾಗಿವೆ.

ಈ ವಚನದಿಂದ ಆರ್ಯರ ಈ ತರ್ಕವು ರದ್ದಾಗುತ್ತದೆ. ದಿವ್ಯವಾಣಿಯು ಯಾರು ಅರಿಯದಂತಹ ಭಾಷೆಯಲ್ಲಿ ಆಗಬೇಕು. ಅದರಿಂದ ಎಲ್ಲರೂ ಸಮಾನರು ಎಂಬಂತಾಗುತ್ತದೆ. ಆದರೆ ಪವಿತ್ರ ಖುರ್‌ಆನ್ ಹೇಳುವುದು ದಿವ್ಯವಾಣಿಯು ಜನರ ಭಾಷೆಯಲ್ಲಿಯೇ ಅವತರಿಸಬೇಕು. ಅದರಿಂದ ಪ್ರವಾದಿಯರಿಗೆ ಜನರನ್ನು ಬೋಧಿಸಲು ಸುಲಭವಾಗುತ್ತದೆ. ಒಂದು ಭಾಷೆಯನ್ನು ಯಾರು ಅರಿಯದಂತಾದರೆ ಆ ದಿವ್ಯವಾಣಿಯ ಪ್ರಯೋಜನವಾದರೂ ಏನು? ಆರ್ಯರ ಈ ವಿಶ್ವಾಸ ಹೀಗೂ ತಪ್ಪೆಂದು ಹೇಳಬಹುದು. ವೇದಗಳು ಅವತರಿಸಿದಾಗ ಅದು ಋಷಿಮುನಿಗಳಿಗೆ ಅರಿಯದಂತಾದರೆ ಏನು ಪ್ರಯೋಜನವಾಯಿತು. ಅವರಿಗೆ ವೇದಗಳು ತಿಳಿಸಿಕೊಟ್ಟರೆ ಸಮಾನತೆ ಎಲ್ಲಿ ಉಳಿಯಿತು. ಒಂದು ವೇಳೆ ಆ ಸಮಾಜದ ಜನರಿಗೆ ತಿಳಿಸಿಕೊಟ್ಟರೆ, ಆ ಸಮಯಕ್ಕೆ ಜನರಲ್ಲಿ ಸಮಾನತೆ ಇತ್ತು ಎಂದು ತಿಳಿದುಕೊಳ್ಳೋಣ. ಆದರೆ ಆನಂತರ ಬಂದ ಜನರಲ್ಲಿ ಸಮಾನತೆ ಎಲ್ಲಿ ಬಂತು. ಈಗ ಪಂಡಿತರೂ ಸಹ ವೇದಗಳ ಭಾಷೆ ಅರಿಯದಂತಾಗಿದೆ. ಅಂದ ಹಾಗೆ ಈ ಕಾಲಘಟ್ಟದಲ್ಲಿ ಅವತರಿಸಿರುವ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಅರಬಿಯ ನಂತರ ಉರ್ದುವಿನಲ್ಲಿ ದಿವ್ಯವಾಣಿ ಹೇರಳವಾಗಿ ಆಗಿದೆ. ನಾನು ಭಾವಿಸುತ್ತೇನೆ. ಈ ವಚನವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಬಹುದಾಗಿದೆ. ಭಾರತದ ಮುಂದಿನ ಭಾಷೆ ಉರ್ದು ಆಗಿರಬಹುದು ಮತ್ತು ಅದರ ಮುಂದೆ ಯಾವ ಭಾಷೆಗಳು ಸಹ ನಿಲ್ಲಲಾರವು.

"ಲಿಯುಬಯ್ಯಿನ ಲಹುಮ್" ನಂತರ "ಯುಝಿಲ್ಲುಲ್ಲಾಹು" ನಲ್ಲಿ ಅಲ್ಲಾಹನು ಸಂಕೇತಿಸಿದ್ದೇನೆಂದರೆ ಒಂದು ಭಾಷೆಯನ್ನು ಅರಿಯುವ ಯಾವ ಸಾಧನೆಗಳು ಇರದಿದ್ದರೆ ಅಲ್ಲಾಹನ ಅವರಿಗೆ ದಾರಿ ತಪ್ಪಿದವರು ಎಂದು ಹೇಳುವುದಿಲ್ಲ. ಅರಿವಿಗೆ ತಂದ ನಂತರವೇ ಹೊಣೆ ಹೇರಬಹುದಾಗಿದೆ. ಆದ್ದರಿಂದಲೇ ತಬಯ್ಯನ ನಂತರವೇ ಅಲ್ಲಾಹನು ಅವರಿಗೆ ತಪ್ಪಿತಸ್ಥರು ಎನ್ನುತ್ತಾನೆ. ಅದರಿಂದ ಸ್ಪಷ್ಟವಾಗುವುದೇನಂದರೆ ಯಾವ ಸಮುದಾಯಕ್ಕೆ ಖಚಿತವಾದ ಮಾಹಿತಿ ದೊರೆಯಂತದಾಗುತ್ತದೆ ಅವರಿಗೆ ಅವರಿಗೆ ವಿಶ್ವಾಸ ತರದಿದ್ದರೆ ಶಿಕ್ಷಿಸಲಾಗುವುದು. ಈ ಪೈಕಿ ಈ ಆರೋಪವು ದೂರಪಡಬಯಸುತ್ತೇನೆ ಅದು ಮಬಾಯಿನೇತರರು ನಮ್ಮ ಮೇಲೆ ಹೊರಿಸುತ್ತಾರೆ, ನಾವು ಎಲ್ಲಾ ವ್ಯಕ್ತಿಗಳಿಗೂ ಶಿಕ್ಷಾರ್ಹರು ಎನ್ನುತ್ತೇವೆ ಎಂದು, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದಾವೆಯ ಸಂದೇಶ ತಲುಪಲಿ ಅಥವಾ ತಲುಪದಿರಲಿ ಶಿಕ್ಷಾರ್ಹವಾಗಿರುತ್ತಾರೆ ಎನ್ನುವುದು ಇದು ಆರೋಪವೂ ತಪ್ಪಾಗಿದೆ. ನಾವು ಈ ವಿಶ್ವಾಸ ಹೊಂದಲು ಹೇಗೆ ಸಾಧ್ಯ, ಅದಾಗ್ಯೋ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ವಿವರಿಸಿದೆ- ತಬಯ್ಯನ ನಂತರವೇ ಶಿಕ್ಷಿಸಲಾಗುವುದು.

**(ತಫ್ಸೀರೆ ಕಬೀರ್, ಸಂಪುಟ-3, ಪುಟ-442-444, ಮುದ್ರಣ 2010 ಖಾದಿಯಾನ್)**

**ಪ್ರತಿಯೊಬ್ಬ ಮನುಷ್ಯನು ಇಬ್ರಾಹೀಮಿ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಿದಾಗ ಮತ್ತು ಅದನ್ನು ಅನುಸರಿಸುವ ಮೂಲಕ ನಿಷ್ಠೆಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಾನೆ. ಪ್ರತಿ ಮಹಿಳೆ ಹಝ್ರತ್ ಹಾಜಿರ ಅವರ ಮಾದರಿಯನ್ನು ಅನುಸರಿಸಲು ಸಿದ್ಧರಾದಾಗ ಮತ್ತು ಪ್ರತಿಯೊಬ್ಬ ಯುವಕನು ಹಝ್ರತ್ ಇಸ್ಮಾಈಲ್(ಅ) ಅವರ ಮಾದರಿಯನ್ನು ಅನುಸರಿಸಲು ಸಿದ್ಧನಾದಾಗ, ಅಲ್ಲಾಹನ ಅನುಗ್ರಹಗಳು ಸಹ ಸುರಿಯುವವು.**

**ಪ್ರವಾದಿ ಮುಹಮ್ಮದ್(ಸ) ರವರ ಧ್ವಜವನ್ನು ಜಗತ್ತಿನಲ್ಲಿ ಹಾರಾಡಿಸಲು ಮತ್ತು ಅಲ್ಲಾಹನ ಹತ್ತಿರವಾಗಲು ನಂಬಿದ್ದರೆ, ನಮ್ಮಲ್ಲಿ ಪ್ರತಿಯೊಬ್ಬರೂ ಇಸ್ಮಾಈಲ್ ಆಗಲು ಪ್ರಯತ್ನಿಸಬೇಕು. ಪ್ರತಿಯೊಂದು ಮಹಿಳೆಯು ಹಾಜಿರ ಆಗಲು ಪ್ರಯತ್ನಿಸಬೇಕು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–07–2020** ರಂದು ನೀಡಿದ **ಈದುಲ್ ಅಝ್‌ಹಾ ಖುತ್‌ಬದ ಸಾರಾಂಶ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ತಶಹ್ಹುದ್, ತಅವ್ವುಝ್ ಮತ್ತು ಸೂರಾ ಫಾತಿಹಾ, ಪಠಿಸಿದ ನಂತರ, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ) ಹೇಳಿದರು: ಇಂದು ನಾವು ತ್ಯಾಗದ ಹಬ್ಬ ಎಂದು ಕರೆಯಲ್ಪಡುವ ಈದ್-ಉಲ್-ಅಧ್‌ಹವನ್ನು ಆಚರಿಸುತ್ತಿದ್ದೇವೆ. ಎಲ್ಲಾ ಮುಸ್ಲಿಮರು ಇದನ್ನು ಬಹಳ ಪ್ರೀತಿಯಿಂದ ಇಂದು ಆಚರಿಸುತ್ತಿದ್ದಾರೆ. ಇದು 4000 ವರ್ಷಗಳ ಹಿಂದೆ ಮಾಡಿದ ತ್ಯಾಗದ ಉದಾಹರಣೆಯ ಸ್ಮರಣೆಯಲ್ಲಿ ಆಚರಿಸುತ್ತಿದ್ದಾರೆ. ಮುಸ್ಲಿಮರು ಇಸ್ಲಾಮಿನ ಆರಂಭದಿಂದಲೂ ಈ ತ್ಯಾಗದ ಹಬ್ಬವನ್ನು ಆಚರಿಸುತ್ತಿದ್ದಾರೆ. ಇಷ್ಟು ಸಮಯ ಕಳೆದರೂ, ಈ ಸ್ಮರಣೆಯನ್ನು ಜೀವಂತವಾಗಿರಿಸಿದ್ದಾರೆ ಅದು ಕಡಿಮೆಯಾಗಿಲ್ಲ. ಸಾಮಾನ್ಯವಾಗಿ ಮನುಷ್ಯ ತನ್ನ ತೊಂದರೆ ಸಂಕಷ್ಟಗಳನ್ನು ಸ್ವಲ್ಪ ಸಮಯದ ನಂತರ ಮರೆತುಬಿಡುತ್ತಾನೆ ಆದರೆ ಈ ಘಟನೆಯನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸಂರಕ್ಷಿಸಿ ತ್ಯಾಗದ ಒಂದು ಮಟ್ಟವನ್ನು ಸದಾಕಾಲಕ್ಕೆ ಸ್ಥಿರವಾಗಿ ನೆಲೆನಿಲ್ಲಿಸಿದ್ದಾನೆ. ಓರ್ವ ಮೂಮಿನ್ ಆ ಮಟ್ಟವನ್ನು ಯಾವಾಗಲು ತಮ್ಮ ಮುಂದೆ ಇರಿಸಲು ಆದೇಶಿಸಿ ಮೂಮಿನ್ ಮುಸ್ಲಿಮನಿಗೆ ಅದರ ನೆನಪು ಖಿಯಾಮತ್ ತನಕ ಸ್ಥಿರಗೊಳಿಸಿದ್ದಾನೆ. ಇಂದು ಈ ಘಟನೆಯನ್ನು ನಾವು ನೆನಪಿಸಿಕೊಂಡರೆ ನಿಜವಾಗಿಯು ಮನಸ್ಸುಗಳು ಭಾವನಾತ್ಮಕತೆಯಿಂದ ತುಂಬಿ ಹೋಗುತ್ತದೆ.

90 ವರ್ಷ ಅಥವಾ ಅದಕ್ಕೆ ಸಮೀಪವಿರಬಹುದಾದ ಹಿರಿಯ ವಯಸ್ಸಿನಲ್ಲಿ ಓರ್ವ ಮನುಷ್ಯನಿಗೆ ಮಗು ಜನಿಸುವುದು ಸಾಮಾನ್ಯವಾದ ವಿಷಯವಲ್ಲ. ಆತನಿಗೆ ಅಲ್ಲಾಹನ ಕಡೆಯಿಂದ ಕನಸ್ಸಿನಲ್ಲಿ ನೀನು ನಿನ್ನ ಪುತ್ರನನ್ನು ಬಲಿ ಕೊಡು ಎಂದು ಆದೇಶವಾಗುತ್ತದೆ. ಅದನ್ನು ಅವರು ಪ್ರತ್ಯಕ್ಷ ರೂಪದಲ್ಲಿ ಆಗಿರಬಹುದೆಂದು ಅರ್ಥ ಮಾಡಿಕೊಂಡು ತನ್ನ ಏಕಮಾತ್ರ ಪುತ್ರನನ್ನು ವಧಿಸಲು ಸಿದ್ಧರಾಗುತ್ತಾರೆ. ಹೀಗೆ ಅವರು ಅಲ್ಲಾಹನ ಆದೇಶವನ್ನು ಪಾಲಿಸಲು ವಿಧೇಯರಾಗಿ ತಲೆ ಬಾಗಿಸುತ್ತಾರೆ. ಎಂತಹ ಉತ್ತಮ ಮಟ್ಟವಾಗಿದೆ ಇದು, ಎಂತಹ ಉತ್ತುಂಗ ಸ್ಥಾನವಾಗಿದೆ ಇದು. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರವರು ಅಲ್ಲಾಹನ ಆದೇಶವನ್ನು ಕೇಳಿದ ತಕ್ಷಣ ತನ್ನ ಪುತ್ರನನ್ನು ವಧಿಸಲು ಸಿದ್ಧರಾದರು. ಅದಲ್ಲದೆ ಕೇವಲ ತಂದೆ ಮಾತ್ರ ಈ ತ್ಯಾಗಕ್ಕೆ ಸಿದ್ಧರಾಗಲಿಲ್ಲ, ಬದಲು ಆ ಪುತ್ರನೂ ತನ್ನ ಆ ಚಿಕ್ಕ ವಯಸ್ಸಿನಲೇ ತಂದೆಯ ಮಾತನ್ನು ಪಾಲಿಸಲು ಸಿದ್ದನಾದನು. ತಕ್ಷಣವೇ ತನ್ನನ್ನು ಬಲಿಕೊಡಲು ಅಲ್ಲಾಹನ ಆದೇಶ ಪ್ರಕಾರ ಆತನು ಸಹ ಸಿದ್ಧನಾದನು. ಈ ಮಗುವಿನ ಉತ್ತರವನ್ನು ಸಹ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸಂರಕ್ಷಿಸಿದ್ದಾನೆ ಮತ್ತು ಆ ಮಗುವಿಗೆ ಹೀಗೆ ಉತ್ತರಿಸಿದನು:

**ಯಾಅಬತಿಫ್‌ಅಲ್ ಮಾ ತುಮರ್, ಸತಜಿದುನೀ ಇನ್‌ಶಾಅಲ್ಲಾಉ ಮಿನಸ್ಸಾಬಿರೀನ್**. ಅಂದರೆ ಪ್ರೀತಿಯ ಅಪ್ಪಾ! ನಿಮಗೆ ಆಜ್ಞಾಪಿಸಲಾಗಿರುವುದನ್ನು ಮಾಡಿರಿ. ಅಲ್ಲಾಹನು ಇಚ್ಛಿಸಿದರೆ ನೀವು ನನ್ನನ್ನು ಸಹನಶೀಲರ ಸಾಲಿನಲ್ಲಿ ಗುರುತಿಸುವಿರಿ.

ಹೀಗಾಗಿ ನಾವು ಗಾಂಭೀರ್ಯದಿಂದ ಆಲೋಚಿಸಿದರೆ ನಮಗೆ ಅರ್ಥವಾಗುವುದೇನೆಂದರೆ ಯಾರು ಇಂತಹ ಉತ್ತರವನ್ನು ಆಲಿಸಿ ಪ್ರಭಾವಿತನಾಗುವುದಿಲ್ಲ? ವಯಸ್ಕರಿಗಾಗಿ ತ್ಯಾಗ ಬಲಿದಾನದ ಉದಾಹರಣೆ ಈ 90 ವರ್ಷ ಪ್ರಾಯದ ವೃದ್ಧರು ನೀಡಿದರು. ಅದೇ ರೀತಿ ಮಕ್ಕಳಿಗೆ ಮತ್ತು ಯುವಕರಿಗೆ ಈ ಚಿಕ್ಕ ಪ್ರಾಯದ ಮಗು ಉದಾಹರಣೆ ನೀಡಿದೆ. ಈ ತಂದೆ ಹಾಗೂ ಮಗನ ತ್ಯಾಗವನ್ನು ಆಲಿಸಿದರೆ ಅಥವಾ ನೋಡಿದರೆ ನಿಸ್ಸಂದೇಹವಾಗಿಯೂ ನಾವು ಭಾವುಕರಾಗುತ್ತೇವೆ. ಸಾಮಾನ್ಯವಾಗಿ ಜನರು ಭಾವುಕರಾಗಿ ಅವರ ಕಣ್ಣುಗಳಿಂದ ಕಂಬನಿ ಸುರಿಯುತ್ತದೆ. ಆದರೆ ನಮಗೆ ಇದು ಸಾಲದು, ಬದಲಿಗೆ ನಾವು ಕೂಡ ಈ ರೀತಿಯ ಎಲ್ಲಾ ತ್ಯಾಗಗಳಿಗೆ ಸಿದ್ಧರಾಗುವೆವು ಎಂಬ ವಾಗ್ದಾನದ ಬಗ್ಗೆ ಸಮಾಲೋಚಿಸುವ ಅವಶ್ಯಕತೆ ಇದೆ.

ಪವಿತ್ರ ಖುರ್‌ಆನ್ ಹೇಳುತ್ತದೆ, ಅವರು ಹಲೀಮ್ ಮತ್ತು ಅವ್ವಾಹುನ್ ಆಗಿದ್ದರು ಅಂದರೆ ಬಹಳ ಮೃಧು ಮನಸ್ಸುಳ್ಳವರು, ಅವರ ಹೃದಯವು ಮೃದ್‌ತ್ವದಿಂದ ತುಂಬಿತ್ತು. ಈ ಮನಸ್ಥಿತಿ ಇದ್ದಾಗ ಅವರ ಮನಸ್ಸಿನಲ್ಲಿ ಪುತ್ರನಗಾಗಿ ದುಃಖ ಉಂಟಾಗಲಿಲ್ಲವೇ? ನಿಸ್ಸಂದೇಹವಾಗಿಯು ಉಂಟಾಗಿರಬಹುದು ಆದರೆ ಆ ಸಂದರ್ಭದಲ್ಲಿ ಅವರು ತಮ್ಮ ಸ್ವಂತ ದುಃಖವನ್ನು ಮತ್ತು ಪ್ರೀತಿಯನ್ನು ಬದಿಗಿರಿಸಿ ಅವರು ಕೇವಲ ಅಲ್ಲಾಹನ ಒಪ್ಪಿಗೆಗಾಗಿ ಹಾಗೂ ಅಲ್ಲಾಹನ ಪ್ರೀತಿಗೆ ಎಲ್ಲಾ ವಸ್ತುಗಳ ಮೇಲೆ ಆದ್ಯತೆ ನೀಡಿದರು. ಹೀಗೆ ಈ ವಿಷಯವೂ ಇವರಿಗೆ ಎಲ್ಲರಿಗಿಂತ ಉತ್ತಮವಾಗಿಸಿತು. ಇದು ಉತ್ತುಂಗ ಸ್ಥಾನವಾಗಿದೆ ಮತ್ತು ಇದು ಅಲ್ಲಾಹನಗಾಗಿ ವಿಧೇಯನಾಗುವುದು, ಮತ್ತು ಪ್ರೀತಿ ಹಾಗೂ ತ್ಯಾಗ ನೀಡುವ ಮಟ್ಟವಾಗಿದೆ. ಹೀಗಾಗಿ ಖಿಯಾಮತ್‌ನ ವರೆಗೂ ಮುಸ್ಲಿಮರು ಪ್ರವಾದಿ ಮುಹಮ್ಮದ್(ಸ) ರವರ ಮೇಲೆ ದರೂದ್ ಪಠಿಸಿದಾಗ ಹಝ್ರತ್ ಇಬ್ರಾಹೀಮ್(ಅ) ರವರ ಪ್ರಸ್ತಾಪವೂ ಅದರಲ್ಲಿ ಅವಶ್ಯಕವಾಗಿ ಆಗುವುದು.

ಇದು ಕೇವಲ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರವರ ತ್ಯಾಗವಾಗಿರಲಿಲ್ಲ ಇದು ಹಝ್ರತ್ ಇಸ್ಮಾಈಲ್ ಅಲೈಹಿಸ್ಸಲಾಮ್‌ರವರ ತ್ಯಾಗವೂ ಆಗಿತ್ತು. ಅವರು ಈ ತ್ಯಾಗಕ್ಕೆ ಏಕೆ ಸಿದ್ಧರಾದರು? ಏಕೆಂದರೆ ಅವರಿಗೆ ಸರ್ವಶಕ್ತನಾದ ಅಲ್ಲಾಹನ ಪ್ರೀತಿಯ ಬಗ್ಗೆ ನಿಜವಾದ ತಿಳುವಳಿಕೆ ಇತ್ತು. ಹಝ್ರತ್ ಇಬ್ರಾಹೀಮ್(ಅ) ರವರ ಈ ತ್ಯಾಗವನ್ನು ಅಲ್ಲಾಹನು ಇಂದು ವಿಶಿಷ್ಠ ಗುರುತನ್ನಾಗಿ ಮಾಡಿದನು. ಏಕೆಂದರೆ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರವರ ದುಃಖದ ಭಾವನೆಗಳ ಮೇಲೆ ಅಲ್ಲಾಹನ ಈ ಕರುಣೆಯು ಆವರಿಸಿಕೊಂಡಿತ್ತು. ಅದೇನೆಂದರೆ ಅಲ್ಲಾಹನು ನನ್ನನ್ನು ಮಾತ್ರ ಇದಕ್ಕಾಗಿ ಆಯ್ದುಕೊಂಡಿದ್ದಾನೆ ಎಂದು. ತ್ಯಾಗ ಮಾಡುವ ಮೂಲಕ, ನನ್ನ ತ್ಯಾಗಕ್ಕೆ ಮೌಲ್ಯವಿಲ್ಲ ಎಂಬ ಆಲೋಚನೆಯನ್ನು ಅವರು ತನ್ನ ಮನಸ್ಸಿಗೆ ಮತ್ತು ಹೃದಯಕ್ಕೆ ತಂದರು. ಆದರೆ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವನು ನನ್ನನ್ನು ಈ ತ್ಯಾಗಕ್ಕೆ ಅರ್ಹನೆಂದು ಪರಿಗಣಿಸಿದನು. ಹೀಗಾಗಿ ನಾವು ಯಾವುದೇ ತ್ಯಾಗಕ್ಕೆ ಸಿದ್ಧರಾಗುತ್ತೇವೆ ಎಂದು ಪ್ರತಿಜ್ಞೆ ಮಾಡಿದಾಗ, ತಮ್ಮ ತ್ಯಾಗಕ್ಕೆ ಯಾವುದೇ ಮೌಲ್ಯವಿಲ್ಲ ಎಂಬ ಆಲೋಚನೆಯನ್ನು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ನಿಯಂತ್ರಿಸಲು ಪ್ರಯತ್ನಿಸಬೇಕು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಆತನು ನಮಗೆ ಯಶಸ್ಸನ್ನು ನೀಡಿದ್ದಾನೆ ಅದರಿಂದ ನಾವು ಒಮ್ಮೆಯೂ ವಂಚಿತರಾಗಬಾರದು. ಆದರೆ ಸರ್ವಶಕ್ತನಾದ ಅಲ್ಲಾಹನಿಗೆ ಹತ್ತಿರವಾಗಬೇಕೆಂಬ ಆಸೆ ಮತ್ತು ಅದಕ್ಕಾಗಿ ಶ್ರಮಿಸುವುದು ಜೀವನದ ಶಾಶ್ವತ ಭಾಗವಾಗಲಿ, ಆಗ ನಾವು ನಮ್ಮ ಭರವಸೆಯನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದೇವೆ ಮತ್ತು ಇದು ಎಚ್ಚರಗೊಳ್ಳುವ ಪ್ರಯತ್ನವಾಗಿದೆ. ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿಯನ್ನು ಪಡೆಯುವುದು ಮತ್ತು ಆತನೊಂದಿಗೆ ಹತ್ತಿರವಾಗುವುದು ನಮ್ಮ ಜೀವನದ ಉದ್ದೇಶವಾಗಿರಬೇಕು ಎಂದು ಹೆಂಡತಿಯರು ಮತ್ತು ಮಕ್ಕಳು ಸಹ ಅರಿತುಕೊಳ್ಳುತ್ತಾರೆ. ಆದ್ದರಿಂದ ಮನೆಯಲ್ಲಿ ಈ ವಾತಾವರಣವನ್ನು ಸೃಷ್ಟಿಸಲು ಪ್ರಾರ್ಥನೆ ಮತ್ತು ಕ್ರಿಯೆಯ ಅಗತ್ಯವಿದೆ.

ಓರ್ವ ಮಹಿಳೆಯನ್ನು ಈ ತ್ಯಾಗದಲ್ಲಿ ಸೇರಿಸುವ ಮೂಲಕ ಒಬ್ಬ ಮಹಿಳೆ ಸರ್ವಶಕ್ತನಾದ ಅಲ್ಲಾಹನ ಮೇಲೆ ನಂಬಿಕೆ ಇರಿಸಿ, ಅವನ ಮುಂದೆ ಬಾಗಿ ಅವನಗೆ ಹತ್ತಿರವಾದರೆ ಸರ್ವಶಕ್ತನಾದ ಅಲ್ಲಾಹನು ಸಹ ಅವಳನ್ನು ಬಿಡುವುದಿಲ್ಲ ಎಂಬುದನ್ನು ಈ ಒಂದು ಉದಾಹರಣೆಯ ಮೂಲಕ

ಸರ್ವಶಕ್ತನಾದ ಅಲ್ಲಾಹನು ಮಹಿಳೆಯರಿಗೆ ನೀಡಬಯುಸುತ್ತಾನೆ. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಇಡೀ ಕುಟುಂಬವನ್ನು ಗಂಡ, ಹೆಂಡತಿ ಮತ್ತು ಮಗುವನ್ನು ಚಾಕುವಿಗಿಂತ ದೊಡ್ಡ ತ್ಯಾಗಕ್ಕಾಗಿ ಕರೆದಿದ್ದಾನೆ ಎಂಬುದನ್ನು ನಾವು ಕಾಣುತ್ತೇವೆ, ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ರವರು ಹಝ್ರತ್ ಹಾಜಿರ ಮತ್ತು ಹಝ್ರತ್ ಇಸ್ಮಾಈಲ್ ಅಲೈಹಿಸ್ಸಲಾಮ್ ಅವರನ್ನು ಜನರಿಲ್ಲದಿರುವ ಸ್ಥಳಕ್ಕೆ ಕರೆದೊಯ್ದಿದ್ದರು. ಅದು ಬಂಜರು ಮರುಭೂಮಿಯಾಗಿತ್ತು ನೀರಿರಲಿಲ್ಲ, ಆಹಾರವೂ ಇರಲಿಲ್ಲ. ಹಝ್ರತ್ ಇಬ್ರಾಹೀಮ್(ಅ) ರವರು ತನ್ನ ಹೆಂಡತಿ ಮತ್ತು ಮಗನನ್ನು ಈ ಸ್ಥಳದಲ್ಲಿ ಕೇವಲ ಒಂದುಯ ಮಶ್ಕೀಝು (ಚರ್ಮದ ಒಂದು ಚಿಕ್ಕ ನೀರಿನ ಚೀಲ) ನೀರು ಮತ್ತು ಖರ್ಜೂರದ ಒಂದು ಚೀಲವನ್ನು ನೀಡಿ ಅಲ್ಲಿ ಬಿಟ್ಟಿದ್ದರು. ಈ ಮಶ್ಕೀಝುವು ಮತ್ತು ಈ ಖರ್ಜೂರದ ಚೀಲ ಖಾಲಿಯಾದಾಗ ನೀರು ಅಥವಾ ಆಹಾರ ದೊರೆಯುವುದಿಲ್ಲ ಎಂದು ಹಝ್ರತ್ ಇಬ್ರಾಹೀಮ್(ಅ) ಅವರಿಗೆ ತಿಳಿದಿತ್ತು. ಅದೇ ರೀತಿ ಅವರಿಗೆ ತನ್ನ ಹೆಂಡತಿ ಮತ್ತು ಮಗು ಹೇಗೆ ಜೀವನಸಾಗಿಸುವರು ಎಂದು ತಿಳಿದಿರಲಿಲ್ಲ. ಆದರೆ ಸರ್ವಶಕ್ತನಾದ ಅಲ್ಲಾಹನು ಈ ತ್ಯಾಗಕ್ಕೆ ಆಜ್ಞಾಪಿಸಿದ್ದರಿಂದ ಅವರು ಅಲ್ಲಾಹನ ಸಂಪ್ರೀತಿಗಾಗಿ ತ್ಯಾಗ ಮಾಡುತ್ತಿದ್ದರು.

ಮೊದಲ ನೋಟದಲ್ಲಿ, ನೀರು ಖಾಲಿಯಾದ ನಂತರ ಈ ಬಂಜರು ಕಣಿವೆಯಲ್ಲಿ ನೀರು ಸಿಗಬಹುದೆಂದು ಒಪ್ಪಿಕೊಳ್ಳುವುದು ಅಸಾಧ್ಯವೆಂದು ತೋರುತ್ತದೆ, ಅಥವಾ ಖರ್ಜೂರದ ಚೀಲ ಖಾಲಿಯಾದ ನಂತರ ಖರ್ಜೂರಗಳು ದೊರೆಯುಬಹುದು, ಅಥವಾ ಯಾವುದೇ ಆಹಾರವನ್ನು ಕಂಡುಹಿಡಿಯಬಹುದೆನ್ನುವು ಅಸಾಧ್ಯವಾಗಿತ್ತು. ಆದರೆ ಹಝ್ರತ್ ಹಾಜರ ಅವರ ನಂಬಿಕೆಯ ಮಾನದಂಡವೂ ತುಂಬಾ ಹೆಚ್ಚಾಗಿತ್ತು. "ಇದು ಅಲ್ಲಾಹನ ಆಜ್ಞೆಯಾಗಿದೆಯೇ ಹೀಗಿದ್ದರೆ ನಾನು ಹೆದರುವುದಿಲ್ಲ" ಎಂದು ಅವರು ಭಯವಿಲ್ಲದೆ ಹೇಳಿದರು. ಖಂಡಿತವಾಗಿಯೂ ಅಲ್ಲಾಹನ ಆಜ್ಞೆಯಾಗಿದ್ದರೆ ಆತನು ನಮ್ಮನ್ನು ಎಂದಿಗೂ ವ್ಯರ್ಥ ಮಾಡುವುದಿಲ್ಲ ಎಂಬ ಹಾಜಿರನ ಮಾತುಗಳನ್ನು ಸಿಂಹಾಸನದ ಮೇಲೆ ಕುಳಿತಿರುವ ಅಲ್ಲಾಹನು ಕೇಳಿದಾಗ, ನಾನು ನಿಮ್ಮನ್ನು ಮತ್ತು ನಿಮ್ಮ ಮಗನ ತ್ಯಾಗವನ್ನು ಎಂದಿಗೂ ವ್ಯರ್ಥ ಮಾಡುವುದಿಲ್ಲ ಎಂದು ಸರ್ವಶಕ್ತ ಅಲ್ಲಾಹನು ಹೇಳಿದ್ದಿರಬಹುದು. ಮತ್ತು ನಂತರದ ಘಟನೆಗಳು ಸರ್ವಶಕ್ತನಾದ ಅಲ್ಲಾಹನು ತಾನು ನಿರೀಕ್ಷಿಸಿದಂತೆ ಮಾಡಿದನೆಂದು ತೋರಿಸುತ್ತದೆ, ಅವುಗಳನ್ನು ಕಳೆದುಕೊಳ್ಳದಂತೆ ಉಳಿಸಲು ಮಾತ್ರವಲ್ಲ, ಅವುಗಳ ಮೂಲಕ ಒಂದು ದೊಡ್ಡ ಖೌಮನ್ನು ರೂಪಿಸಲು ಹಝ್ರತ್ ಖಾತಮ್-ಉಲ್-ಅನ್ಬಿಯಾ ಮುಹಮ್ಮದ್ ಮುಸ್ತಫಾ(ಸ) ಅವರಂತಹ ಮಹಾನ್ ಪ್ರವಾದಿಯನ್ನು ಇಡೀ ಜಗತ್ತಿಗೆ ಕಳುಹಿಸಲಾಯಿತು. ಅವರು ಇಡೀ ಪ್ರಪಂಚದ ಆಧ್ಯಾತ್ಮಿಕ ರಾಜ ಆಗಿದ್ದರು. ಸರ್ವಶಕ್ತನಾದ ಅಲ್ಲಾಹನನ್ನು ತಲುಪುವುದು ಈಗ ಇವರ ಮೂಲಕ ಮಾತ್ರ ಸಾಧ್ಯ.

ಹಝ್ರತ್ ಹಾಜಿರ ಮತ್ತು ಹಝ್ರತ್ ಇಸ್ಮಾಈಲ್(ಅ) ಅವರು ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ಜಗತ್ತನ್ನು ತೊರೆದಿದ್ದರು. ಇಂದು, ಲಕ್ಷಾಂತರ ಜನರು ಪ್ರವಾದಿ(ಸ) ಮೂಲಕ ಹಜ್ಜ್ ಮತ್ತು ಉಮ್ರಾಗಳನ್ನು ಮಾಡುತ್ತಾರೆ ಮತ್ತು ಹಝ್ರತ್ ಹಾಜಿರ ಅವರ ಈ ತ್ಯಾಗವನ್ನೂ ನೆನಪಿಸಿಕೊಳ್ಳುತ್ತಾರೆ. ಆದ್ದರಿಂದ ಹಝ್ರತ್ ಹಾಜಿರ ಅವರ ಈ ತ್ಯಾಗಕ್ಕೆ (ಖಿಯಾಮತ್) ತೀರ್ಪಿನ ದಿನದವರೆಗೆ ಗೌರವ ನೀಡಲಾಯಿತು.

ಆದ್ದರಿಂದ ಹಝ್ರತ್ ಇಬ್ರಹೀಮ್(ಅ) ರವರ ವಿಧೇಯತೆ ಹಾಗೂ ನಿಷ್ಠೆಯನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬುದನ್ನು ಈ ದಿನ ನಮಗೆ ನೆನಪಿಸುತ್ತದೆ. ನಾವು ಹಝ್ರತ್ ಹಾಜಿರ ಅವರ ತ್ಯಾಗವನ್ನು ನಮ್ಮ ಜೀವನದ ಮಟ್ಟವನ್ನಾಗಿಸಬೇಕು. ಆದ್ದರಿಂದ, ಮೊದಲನೆಯದಾಗಿ, ಪುರುಳರು ತಮ್ಮ ಆಲೋಚನೆ ಮತ್ತು ತ್ಯಾಗದ ಮಾನದಂಡಗಳನ್ನು ಹೆಚ್ಚಿಸಿಕೊಳ್ಳಬೇಕು. ಮಹಿಳೆಯರು ಮತ್ತು ಮಕ್ಕಳ ಮಾನದಂಡವು ಅಲ್ಲಾಹನ ಮೇಲೆ ನಂಬಿಕೆ ಮತ್ತು ತ್ಯಾಗವನ್ನು ಹೆಚ್ಚಿಸಬೇಕಾದರೆ, ಪುರುಳರು ಹೇಗಾದರೂ ತಮ್ಮ ಉದಾಹರಣೆಯನ್ನು ತೋರಿಸಬೇಕಾಗುತ್ತದೆ. ಈ ಮಾದರಿಗಳು ತಮ್ಮಲ್ಲಿ ಸಣ್ಣ ಬದಲಾವಣೆಗಳನ್ನು ಸೃಷ್ಟಿಸಲು ಮಾತ್ರ ಎಂದು ಅರ್ಥಮಾಡಿಕೊಳ್ಳಬಾರದು ಮತ್ತು ಅವುಗಳ ಉದಾಹರಣೆಯನ್ನು ಸರ್ವಶಕ್ತನಾದ ಅಲ್ಲಾಹನು ಕಥೆಯಾಗಿ ಮಾತ್ರ ಸಂರಕ್ಷಿಸಿದ್ದಾನೆಯೇ? ಇಲ್ಲ! ಬದಲಾಗಿ, ಈ ಮಾದರಿಗಳು ನಮಗೆ ಮಾದರಿಯಾಗಿವೆ. ಪ್ರತಿಯೊಬ್ಬ ಮನುಳ್ಯನು ಇಬ್ರಾಹೀಮಿ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಿದಾಗ ಮತ್ತು ಅದನ್ನು ಅನುಸರಿಸುವ ಮೂಲಕ ನಿಷ್ಠೆಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಾನೆ. ಪ್ರತಿ ಮಹಿಳೆ ಹಝ್ರತ್ ಹಾಜಿರ ಅವರ ಮಾದರಿಯನ್ನು ಅನುಸರಿಸಲು ಸಿದ್ಧರಾದಾಗ ಮತ್ತು ಪ್ರತಿಯೊಬ್ಬ ಯುವಕನು ಹಝ್ರತ್ ಇಸ್ಮಾಈಲ್(ಅ) ಅವರ ಮಾದರಿಯನ್ನು ಅನುಸರಿಸಲು ಸಿದ್ಧನಾದಾಗ, ಅಲ್ಲಾಹನ ಅನುಗ್ರಹಗಳು ಸಹ ಸುರಿಯುವವು.

ಇಸ್ಲಾಮ್ ಧರ್ಮದ ಪುನರುಜ್ಜೀವನದಲ್ಲಿ ಪಾಲ್ಗೊಳ್ಳಲು ನಾವು ಈ ಯುಗದಲ್ಲಿ ಒಪ್ಪಿಕೊಂಡಿರುವ ಪ್ರವಾದಿ(ಸ) ರ ಗುಲಾಮರನ್ನು ಅಲ್ಲಾಹನು ಇಬ್ರಾಹೀಮ್ ಎಂದೂ ಕರೆಯುತ್ತಾನೆ. ಆದ್ದರಿಂದ, ಅನೇಕ ಸಂದರ್ಭಗಳಲ್ಲಿ, ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಇಲ್‌ಹಾಮ್‌ಗಳಿಂದ ಇಬ್ರಾಹೀಮ್ ಎಂದು ಸಂಬೋಧಿಸಿದನು. ಆದ್ದರಿಂದ ನಾವು ಈ ಇಬ್ರಾಹಿಮ್‌ರನ್ನು ಆಧ್ಯಾತ್ಮಿಕ ಪ್ರಗತಿ, ಜಗತ್ತಿನಲ್ಲಿ ಇಸ್ಲಾಮ್ ಧರ್ಮವು ಮೇಲುಗೈ ಸಾಧಿಸಲು, ಪ್ರವಾದಿ ಮುಹಮ್ಮದ್(ಸ) ರವರ ಧ್ವಜವನ್ನು ಜಗತ್ತಿನಲ್ಲಿ ಹಾರಾಡಿಸಲು ಮತ್ತು ಅಲ್ಲಾಹನ ಹತ್ತಿರವಾಗಲು ನಂಬಿದ್ದರೆ, ನಮ್ಮಲ್ಲಿ ಪ್ರತಿಯೊಬ್ಬರೂ ಇಸ್ಮಾಈಲ್ ಆಗಲು ಪ್ರಯತ್ನಿಸಬೇಕು. ಪ್ರತಿಯೊಂದು ಮಹಿಳೆಯು ಹಾಜಿರ ಆಗಲು ಪ್ರಯತ್ನಿಸಬೇಕು.

ತ್ಯಾಗವಿಲ್ಲದೇ ಎಂದಿಗೂ ಈ ಕ್ರಾಂತಿಗಳು ಬರುವುದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ, ತಮ್ಮ ಮಕ್ಕಳನ್ನು ವಖ್ಫ್ ಮಾಡಲು ತಮ್ಮನ್ನು ಅರ್ಪಿಸಿಕೊಳ್ಳುವ ತಾಯಂದಿರ ಗಮನವನ್ನು ಸೆಳೆಯಲು ನಾನು ಬಯಸುತ್ತೇನೆ, ಅವರ ಮಕ್ಕಳು ಯೌವನದ ವಯಸ್ಸಿಗೆ ತಲುಪಿದಾಗ, ಕೆಲವು ಪೋಳಕರು ನಮ್ಮ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ಹೇಳುತ್ತಾರೆ. ಮಗುವು ಜಮಾಅತ್ತಿನ ಸೇವೆ ಸಲ್ಲಿಸುತ್ತಿದ್ದರೆ, ಅವನು ಒಂದು ಸಣ್ಣ ಭತ್ಯೆಯಲ್ಲಿ ಜೀವನ ಸಾಗಿಸಲು ಅಸಾಧ್ಯ, ಆದ್ದರಿಂದ ಅವನಗೆ ಲೌಕಿಕ ಕೆಲಸ ಮಾಡಲು ಅವಕಾಶ ಮಾಡಿಕೊಡಿ. ಒಂದೆಡೆ, ಅವರು ತ್ಯಾಗದ ಪ್ರತಿಜ್ಞೆ ಮಾಡಿ ತಮ್ಮನ್ನು ಸ್ವತಃ ಅರ್ಪಿಸಿದರು, ಮತ್ತೊಂದೆಡೆ, ಅವರು ಅದನ್ನು ಲೌಕಿಕತೆಯ ಕಡೆಗೆ ಇಡಲು ಪ್ರಾರಂಭಿಸಿದ್ದಾರೆ. ಅದೇ ರೀತಿ, ಕೆಲವು ವಾಖಿಫೀನೆ ನೌ ಮಕ್ಕಳು, ವೈದ್ಯರಾಗುತ್ತಾರೆ, ಎಂಜಿನಿಯರ್‌ಗಳಾಗುತ್ತಾರೆ, ನಂತರ ಈಗ ಜಮಾಅತ್ತಿನ ಸೇವೆ ತುಂಬಾ ಕಷ್ಟಕರವಾಗಿದೆ ಎಂದು ಹೇಳುತ್ತಾರೆ. ನಾವು ಸ್ವಲ್ಪ ಹಣದಿಂದ ಬದುಕುವುದಿಲ್ಲ. ಲೌಕಿಕ ಕೆಲಸ ಮಾಡಲು ಅನುಮತಿ ನೀಡಿರಿ ಎನ್ನುತ್ತಾರೆ. ಧರ್ಮವನ್ನು ಲೌಕಿಕತೆಯ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಮಾಡಿದಾಗ, ತ್ಯಾಗದ ಪ್ರತಿಜ್ಞೆ ಮಾಡಿದರು, ಜನನದ ಮೊದಲು ಸರ್ವಶಕ್ತನಾದ ಅಲ್ಲಾಹನು ಪೋಷಕರಿಗೆ ಅರ್ಪಿಸುವ ಶಕ್ತಿಯನ್ನು ನೀಡಿದ್ದನು, ಈಗ ಇಂತಹ ಮನ್ನಿಸುವಿಕೆಯು ಅರ್ಥಹೀನವಾಗಿರುತ್ತದೆ. ಈ ಪ್ರತಿಜ್ಞೆಯನ್ನು ಈಡೇರಿಸಬೇಕಾಗಿದೆ. ಸಣ್ಣ ಭತ್ಯೆ ಇದ್ದರೂ ಸರ್ವಶಕ್ತನಾದ ಅಲ್ಲಾಹನು ಅದನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಯುವ ವಾಖಿಫೀನ್ ತಮ್ಮನ್ನು ಮುಬಲ್ಲಿಗ್ ಮತ್ತು ಮುರಬ್ಬಿ ಆಗಲು ಪ್ರಸ್ತುತಪಡಿಸಬೇಕು. ವೈದ್ಯರು ಮತ್ತು ಎಂಜಿನಿಯರ್ ಅಥವಾ ಶಿಕ್ಷಕರಾಗಿ ಜಮಾಅತ್ತಿಗಾಗಿ ತಮ್ಮ ಸೇವೆಗಳು ಮತ್ತು ತ್ಯಾಗಗಳನ್ನು ನೀಡಿರಿ. ಮತ್ತು ತ್ಯಾಗದ ಗುಣಮಟ್ಟವನ್ನು ಹೆಚ್ಚಿಸಿ. ಈ ಹಳೆಯ ಘಟನೆಗಳನ್ನು ಕೇಳಲು ನಾವು ಸಂತೋಳವಾಗಬೇಡಿರಿ ಬದಲಿಗೆ ಈ ಘಟನೆಗಳು ನಮ್ಮ ಉದಾಹರಣೆಯನ್ನು ತೋರಿಸಲಿಕ್ಕಿರುವುದು. ನಾವು ಲೌಕಿಕ ಸಾಮ್ರಾಜ್ಯಗಳ ಬಗ್ಗೆ ಆಸಕ್ತಿ ಹೊಂದಿಲ್ಲ, ಲೌಕಿಕ ಸರ್ಕಾರಗಳ ಬಗ್ಗೆ ನಮಗೆ ಆಸಕ್ತಿ ಇಲ್ಲ, ಸರ್ಕಾರಿ ವ್ಯವಸ್ಥೆಗಳು ಮತ್ತು ಸಂಪತ್ತಿನ ಬಗ್ಗೆ ನಮಗೆ ಆಸಕ್ತಿ ಇಲ್ಲ, ಮತ್ತು ನಮಗೆ ಅಧಿಕಾರಗಳ ಬಗ್ಗೆ ಆಸಕ್ತಿ ಇಲ್ಲ, ಮತ್ತು ನಮಗೆ ಇರಬಾರದು. ಹೌದು, ತಮ್ಮಲ್ಲಿ ಒಂದು ಉದ್ದೇಶವಿದೆ ಈ ಒಂದು ಉದ್ದೇಶವಿರಬೇಕು, ನಾವು ಹೇಗೆ ಇಸ್ಲಾಮ್ ಧರ್ಮದ ಸತ್ಯಾಸತ್ಯತೆಯನ್ನು ಜಗತ್ತಿಗೆ ತೋರಿಸಿ ಮೇಲುಗೈ ಸಾಧಿಸಬಹುದು? ಪ್ರವಾದಿ ಮುಹಮ್ಮದ್(ಸ) ರವರ ಧ್ವಜದ ಅಡಿಯಲ್ಲಿ ನಾವು ಜಗತ್ತನ್ನು ಹೇಗೆ ಒಂದುಗೂಡಿಸಬಹುದು? ಜಗತ್ತಿನಲ್ಲಿ ಒಬ್ಬ ದೇವರ ಆಡಳಿತವನ್ನು ನಾವು ಹೇಗೆ ಸ್ಥಾಪಿಸಬಹುದು? ಕಳೆದುಹೋದ ಮಾನವೀಯತೆಯನ್ನು ನಾವು ಸರ್ವಶಕ್ತ ದೇವರ ಮುಂದೆ ಹೇಗೆ ಬಾಗಿಸಬಹುದು? ಹೇಗೆ ನಾವು ಮನುಷ್ಯರನ್ನು ಒಬ್ಬರ ಹಕ್ಕುಗಳನ್ನು ಇನ್ನೊಬ್ಬರು ಈಡೇರಿಸುವವರ ಹಾಗೆ ಮಾಡಬಹುದು? ಇದು ನಮ್ಮ ಜಮಾಅತ್ತಿನ ಸ್ಥಾಪನೆಯ ಮೂಲ ಉದ್ದೇಶವಾಗಿದೆ. ಇದು ಅಹ್ಮದಿಗಳ ಉದ್ದೇಶವಾಗಿದೆ ಮತ್ತು ವಿಶೇಳವಾಗಿ ವಾಖಿಫೀನೆ ನೌರವರ ಉದ್ದೇಶವಾಗಿರಬೇಕು. ಅದಕ್ಕಾಗಿಯೇ ಅವರು ಜಾಮಿಯಾ ಅಹ್ಮದೀಯಕ್ಕೆ ಬರಲು ತಮ್ಮನ್ನು ಅರ್ಪಿಸಿಕೊಳ್ಳಬೇಕು. ಮತ್ತು ಹೆಚ್ಚು ಹೆಚ್ಚು ಮುಬಲ್ಲಿಗರಾಗಬೇಕು ಇದರಿಂದ ಇಸ್ಲಾಮ್ ಧರ್ಮದ ಈ ಸಂದೇಶವು ಸಾಧ್ಯವಾದಷ್ಟು ಬೇಗ ಪ್ರಪಂಚದಾದ್ಯಂತ ಹರಡಬಹುದು.

ಆದ್ದರಿಂದ ನಾನು ಹೇಳಿರುವ ಈ ವಿಳಯಗಳು ಜಮಾಅತ್ತನ್ನು ಸ್ಥಾಪಿಸುವ ಉದ್ದೇಶ ಮತ್ತು ಅದಕ್ಕಾಗಿ ನಾವು ತ್ಯಾಗಗಳನ್ನು ಮಾಡಬೇಕು. ಅಲ್ಲಾಹನು ನಮ್ಮಲ್ಲಿ ನಿಜವಾದ ತ್ಯಾಗದ ಗುಣವನ್ನು ಸೃಷ್ಟಿಸಲಿ. ನಾವು ಯಾವಾಗಲೂ ಧರ್ಮವನ್ನು ಲೌಕಿಕತೆಗಿಂತ ಮೇಲೆ ಇಡಲಿದ್ದೇವೆ. ಮುಂಬರುವ ಪ್ರತಿಯೊಂದು ತ್ಯಾಗದ ಈದ್ ಇಸ್ಲಾಮ್ ಧರ್ಮದ ಬೆಳವಣಿಗೆಯಲ್ಲಿ ನಮಗೆ ಹೊಸ ಮೈಲಿಗಲ್ಲುಗಳನ್ನು ತೋರಿಸಲಿ. ಅಂತಹ ತ್ಯಾಗಗಳನ್ನು ಮಾಡುವವರಾಗಲು ನಮಗೆ ಅಲ್ಲಾಹನು ತೌಫೀಕ್ ನೀಡಲಿ. **ಆಮೀನ್**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 15 July 2021, Issue No. 28

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

***ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)***

**(ಬದರ್ ಸಂಚಿಕೆ 27ರ ವರದಿಯ ಉಳಿದ ಭಾಗ)**

## ಹುಝೂರ ಅನ್ವರ್(ಅತಬಿಅ)ರವರೊಡನೆ ನೌಮುಬಾಯಿಯಾತರ ಭೇಟಿ

ಸಂಜೆ ಏಳುವರೆ ಗಂಟೆಗೆ ನಿಗದಿತ ಕಾರ್ಯಕ್ರಮದನ್ವಯ ಹುಝೂರ್ ಅನ್ವರ್(ಅಬಿಅ) ರವರೊಂದಿಗೆ ವಿವಿಧ ದೇಶಗಳಿಂದ ಆಗಮಿಸಿದ ನೌಮುಬಾಯಿನರು ಭೇಟಿಯಾಗುವ ಭಾಗ್ಯ ಪಡೆದರು.

ಅದರಲ್ಲಿ 21 ಮಹಿಳೆಯರು ಆಗಮಮಿಸಿದ್ದರು. ಬೇರೆ ಜಮಾಅತಿಗೆ ಸಂಬಂದಿಸಿದ ಮೂವರು ಮಹಿಳೆಯರು ಜೊತೆಯಲ್ಲಿದ್ದರು. ಅವರು ಜರ್ಮನಿ, ಗೇಂಬಿಯಾ, ಸ್ಪೇನ್, ಸೀರಿಯಾ ಮತ್ತು ಫ್ರೆಂಚ್ ದೇಶದವರಾಗಿದ್ದರು.

ಜರ್ಮನ್ ಅತಾಲವಿ ಮತ್ತು ಫ್ರೆಂಚ್ ಸಮುದಾಯದಿಂದ ಸಂಬಂಧಿಸಿದ ಮೂವರು ನೌಮುಬಾಯೀನರು ಜಲ್ಸದ ಕೊನೆಯ ದಿನದಲ್ಲಿ ಬೈಅತ್‌ನ ಭಾಗ್ಯ ಪಡೆದವರಾಗಿದ್ದರು.

ಸದರ್ ಲಜ್ನ ಇಮಾಯಿಲ್ಲಾಹ್ ಜರ್ಮನಿಯವರು ಹುಝೂರ್ ಅನ್ವರ್(ಅಬಿಅ) ಹೇಳಿದ ಪ್ರಯುಕ್ತ ಸಂಕ್ಷಿಪ್ತವಾಗಿ ಅವರ ಪರಿಚಯ ಮಾಡಿಕೊಟ್ಟರು.

ಅನಂತರ ಓರ್ವ ಮಹಿಳೆ ಪ್ರಶ್ನೆ ಕೇಳಿದರು. HANAU ವಿನ ಮಸೀದಿಯ ಉದ್ಘಾಟನೆ ಮತ್ತು ಜಲ್ಸ ಸಾಲಾನ ಜರ್ಮನಿಯಲ್ಲಿ ಹುಝೂರರ ಸಮಾರೋಪ ಬಾಷಣದಲ್ಲಿ ರಾಜಕೀಯ ವಿಷಯದ ಬಗ್ಗೆ ಮಾತನಾಡುತ್ತ ಯುವಕರು ರಾಜಕೀಯದಲ್ಲಿ ಪ್ರವೇಶ ಮಾಡಬಹುದೆ, ಜಮಾಅತಿನ ನಿಲುವು ಏನು? ಕೇಳಲಾಯಿತು

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ನಾನು ಹೀಗೆ ಹೇಳಿರಲಿಲ್ಲ. ಹೆಂಬರ್ಗಿನ ಅಸೆಂಬ್ಲಿಯ ಓರ್ವ ಅಹ್ಮದಿ ಸದಸ್ಯ ಗುಲ್ಫಾಮ್ ಮಲಿಕ್ ಸಾಹಿಬ್ ತನ್ನ ಪರಿಚಯ ಭಾಷಣದಲ್ಲಿ ಯುವಕರಿಗೆ ರಾಜಕೀಯ ಪ್ರವೇಶ ಮಾಡುವ ಸಲಹೆಯನ್ನು ನೀಡಿದ್ದರು. ಬಹುಶಃ ಅನುವಾದ ಸರಿಯಾಗಿರಲಿಕ್ಕಿಲ್ಲ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಈ ದೇಶದಲ್ಲಿ ನಡೆಯುತ್ತಿರುವ ಪದ್ಧತಿ ನೋಡಿದರೆ ನಾವು ಶಾಮೀಲಾಗಬಹುದು. ಧರ್ಮದ ಕುರಿತು ಯಾವ ಅಡೆತಡೆಯಿಲ್ಲ.

ಆ ಮಹಿಳೆಯು ಹೇಳಿದರು. ಇಸ್ಲಾಮ್ ಧರ್ಮ ಸ್ವೀಕಾರಕ್ಕೆ ಮುಂಚೆ ನನಗೆ ರಾಜಕೀಯದಲ್ಲಿ ತುಂಬ ಆಸಕ್ತಿ ಇತ್ತು. ಮತ್ತೆ ಇಸ್ಲಾಮಿನಲ್ಲಿ ಆಸಕ್ತಿ ಉಳಿಯಿತು. ಇದೀಗ ನಾನು ಓರ್ವ ಅಹ್ಮದಿ ಮುಸ್ಲಿಮ್ ಮಹಿಳೆಯಾಗಿದ್ದೇನೆ. ನನಗೆ ರಾಜಕೀಯದಲ್ಲಿ ಮುಂದುವರೆಯಲು ಯಾರ ಅನುಮತಿ ಪಡೆಯುವ ಅಗತ್ಯವಿದೆ?

ಆಗ ಹುಝೂರ್(ಅಬಿಅ) ಹೇಳಿದರು. ನನ್ನಿಂದ ಅನುಮತಿ ಪಡೆಯಬಹುದು. ರಾಜಕೀಯದಲ್ಲಿ ಸಕ್ರಿಯರಾಗಬಹುದಾದರೆ ಆಗಬಹುದು. ಆದರೆ ಈಗ ನೀವು ಅಹ್ಮದಿಯಾಗಿದ್ದೀರಿ. ಆದುದರಿಂದ ಎಲ್ಲ ರೀತಿಯಲ್ಲೂ ತಮ್ಮ ಘನತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಯಾವ ರೀತಿ ಇದೀಗ ನನ್ನ ಮುಂದೆ ಪರದೆ ಸಹಿತ ಇದ್ದೀರಿ. ಹಾಗೆ ಪರದೆಯಲ್ಲಿದ್ದು ಸೇವೆ ಮಾಡಬಹುದಾಗಿದೆ. ಒಂದು ಮಾತು ನೆನಪಿಡಬೇಕು. ರಾಜಕಾರಣಿಗಳು ಹೆಚ್ಚು ಸುಳ್ಳು ಹೇಳುವವರಾಗಿರುತ್ತಾರೆ. ನೀವು ಹಾಗೆ ಸುಳ್ಳು ಹೇಳಬಾರದು.

ಅದೇ ಮಹಿಳೆಯು ಇನ್ನೊಂದು ಪ್ರಶ್ನೆ ಕೇಳಿದರು. ನಾವು ಮಸೀದಿಯಲ್ಲಿ ರಾಜಕೀಯ ವಿಷಯ ಮಾತನಾಡಲು ಕಾರ್ಯಕ್ರಮವನ್ನು ಆಯೋಜಿಸಬಹುದೇ? ಹುಝೂರ್(ಅಬಿಅ) ಹೇಳಿದರು.

ಮಸೀದಿಯಲ್ಲಿ Multipurpose hall(ವಿವಿದ್ದೋದ್ದೇಶ) ಸಭಾಂಗಣಗಳಿದ್ದರೆ ಮಾಡಬಹುದಾಗಿದೆ. ಉದಾಹರಣೆಗೆ ಬೈತುಲ್ ಪುತೂಹ್‌ನಲ್ಲಿ ಸಭಾಂಗಣಗಳಿವೆ. ಅಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಮಸೀದಿಯ ಒಳಗೆ ಮಾಡಕೂಡದು. ಸಭಾಂಗಣ ಇತ್ಯಾದಿಯಲ್ಲಿ Games & meetings ಮಾಡಬಹುದಾಗಿದೆ.

ಹುಝೂರ್(ಅಬಿಅ) ಹೇಳಿದರು. ಇಲ್ಲಿ ಅಂತು ಸಣ್ಣ ಪ್ರಮಾಣದ ಮಸೀದಿಗಳು ನಿರ್ಮಾಣವಾಗುತ್ತಿವೆ. ದೊಡ್ಡ ಮಸೀದಿಗಳನ್ನು ನಿರ್ಮಿಸಿರಿ. ಬ್ರಿಟಾನಿಯಾ ಚುನಾವಣೆ ನಡೆಸಿದೆ. ಅಲ್ಲಿನ ಎರಡೂ ಪಕ್ಷಗಳವರು ಬೈತುಲ್ ಫುತೂಹ್‌ಗೆ ಬಂದು ತಮ್ಮ ಪಕ್ಷದ ಪ್ರಣಾಳಿಕೆಗಳನ್ನು ಹೇಳಿದರು.

ಓರ್ವ ಜಮಾತೇತರ ಮಹಿಳೆ (ಅವರು ಖಾಹಿರ ವಿಶ್ವವಿದ್ಯಾನಿಲಯದಲ್ಲಿ ಬೋಧಿಸುತ್ತಿದ್ದಾಳೆ) ಹುಝೂರ್(ಅಬಿಅ) ರವರೊಂದಿಗೆ ನಿವೇದಿಸಿಕೊಂಡರು. ನಾನು ತಮಗೆ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಮತ್ತು ತಮಗೋಸ್ಕರ ಪ್ರಾರ್ಥಿಸುತ್ತೇನೆ.

ಹುಝೂರ್(ಅಬಿಅ) ಕೇಳಿದಕ್ಕೆ ಉತ್ತರಿಸುತ್ತಾ ಅವರು ಹೇಳಿದರು. ನಾನು ಶನಿವಾರ ದಿನದಂದು ತಾವು ಜರ್ಮನ್ ಅತಿಥಿಗಳೊಡನೆ ಮಾಡಿದ ಭಾಷಣ ಕೇಳಿದ್ದೇನೆ. ಮತ್ತು "ಇಸ್ಲಾಮಿ ಉಸೂಲ್ ಕೀ ಫಿಲಾಸಫಿ (ಇಸ್ಲಾಮ್ ಧರ್ಮದ ತತ್ವಜ್ಞಾನ) ಗ್ರಂಥ ಓದಿರುತ್ತೇನೆ. ಇದು ತುಂಬ ಒಳ್ಳೆಯ ಗ್ರಂಥವಾಗಿದೆ.

ಇದಿನ ಬೈಅತ್ ಆಗುವ ಭಾಗ್ಯ ಪಡೆದ ಓರ್ವ ಮಹಿಳೆ ಹೇಳಿದರು. ನಾನು ವರ್ಷ ಆರಂಭದಲ್ಲಿಯೇ ನಿಶ್ಚಯಿಸಿಕೊಂಡಿದ್ದೆ. ನಾನು ಈ ಆಧ್ಯಾತ್ಮಿಕ ಪ್ರವಾಸ ಕೈಗೊಳ್ಳಬೇಕು ಮತ್ತು ನನ್ನ ಗೆಳತಿಯನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ಬರಬೇಕೆಂದು. ಆಕೆ ಇಂದು ಇಲ್ಲಿ ಬಂದಿರುವಳು. ಆಕೆಯು ನನ್ನ ಜೊತೆಯಲ್ಲಿರುವಳು. ಅವರ ಮನೆಯಲ್ಲಿ ಒಂದು ಸಭಾಂಗಣವಿದೆ. ಅದನ್ನು ಜಮಾಅತಿಗಾಗಿ ಕೊಡಬಯಸುತ್ತಾಳೆ. ಇದೊಂದು ದೊಡ್ಡ ಕೋಣೆ ಆಗಿದೆ.

ಆಗ ಹುಝೂರ್(ಅಬಿಅ) ಹೇಳಿದರು. ತಮ್ಮ ಕ್ಷೇತ್ರದ ಅಧ್ಯಕ್ಷರೊಂದಿಗೆ ಸಂಪರ್ಕಿಸಿರಿ. ಅವರೊಡನೆ ಮಾತನಾಡಿಕೊಳ್ಳಿ. ಲಜ್ನಾರವರಿಗೆ ಬೇಕಾದಾಗ ತಮ್ಮನ್ನು ಸಂಪರ್ಕಿಸಬಹುದಾಗಿದೆ. ಓರ್ವ ಮಹಿಳೆ ಹೇಳಿದರು ನನಗೆ Dippression ರೋಗವಿದೆ. ಆದುದರಿಂದ ಪತಿಯಿಂದ ಪ್ರತೇಕಗೊಂಡಿರುತ್ತೇನೆ. ಆಗ ಹುಝೂರ್(ಅಬಿಅ) ಅವರಿಗೆ ಹೋಮಿಯೋಪತಿ ಔಷಧಿಯ ಒಂದು ಚಿಕಿತ್ಸೆ ಹೇಳಿಕೊಟ್ಟರು ಮತ್ತು ಮಲಗುವ ಮುಂಚೆ ಹತ್ತು ಹನಿ ಔಷದ ತೆಗೆದುಕೊಳ್ಳಲು ನಿರ್ದೇಶನ ನೀಡಿದರು.

ಓರ್ವ ಮಹಿಳೆ ಹೇಳಿದರು. ನನ್ನ ಹೆಸರು EVA ಎಂದಾಗಿದೆ ನನಗೆ ಇಸ್ಲಾಮಿ ಹೆಸರನ್ನು ಸೂಚಿಸಿರಿ. ಆಗ ಹುಝೂರ್(ಅಬಿಅ) ಅಫೀಫ ಎಂದು ಹೆಸರು ಸೂಚಿಸಿದರು.

ಓರ್ವ ಮಹಿಳೆ ಹೇಳಿದರು. ನನ್ನ ಹೆಸರು Kathrina ಎಂದಿದೆ. ನಾನು ಸಹ ಇಸ್ಲಾಮಿ ಹೆಸರು ಇಡಬಯಸುತ್ತೆನೆ. ಹುಝೂರ್(ಅಬಿಅ) ಕೇಳಿದಾಗ ಆಕೆ ಹೇಳಿದಳು. Kathrina ಅರ್ಥ, ಪವಿತ್ರ ಮತ್ತು ಶುದ್ಧ ಎಂದಾಗಿದೆ. ಆಗ ಅವರು ಹೇಳಿದರು ತಾಮ್ಮ ಹೆಸರು "ತಯ್ಯಬ" ಎಂದು ಇಟ್ಟುಕೊಳ್ಳಬಹುದು.

ಇನ್ನೊರ್ವ ಮಹಿಳೆ ಹೇಳಿದರು. ನಾನು ಫೆಬ್ರವರಿಯಲ್ಲಿ ಬೈಅತ್ ಮಾಡಿರುತ್ತೇನೆ. ಮೊದಲು ನಾನು ಕ್ರೈಸ್ತಲಾಗಿದ್ದೆ. ಉಳಿದ ಕುಟುಂಬಸ್ಥರು ಸಹ ಕ್ರೈಸ್ತರಾಗಿದ್ದಾರೆ. ತನ್ನ ಕುಟುಂಬದಲ್ಲಿ ನಾನೊಬ್ಬಳೆ ಮುಸ್ಲಿಮಲಾಗಿರುತ್ತೆನೆ. ಮತ್ತು ಪವಿತ್ರ ಖುರ್‌ಆನ್ ಪಠಿಸುವುದನ್ನು ಕಲಿಯಬಯಸುತ್ತೇನೆ. ನಾನು ತರಬೇತಿಗೆ ಹೋಗುತ್ತಿದ್ದೇನೆ. ಅಲ್ಲಿ ಎಲ್ಲರೂ ಉರ್ದು ಮಾತನಾಡುತ್ತಾರೆ. ನನಗೆ ಏನೂ ತಿಳಿಯುವುದಿಲ್ಲ. ಆಗ ಹುಝೂರ್(ಅಬಿಅ) ಅಸಂತೋಷ ವ್ಯಕ್ತಪಡಿಸುತ್ತ ನಿರ್ದೇಶನ ನೀಡಿದರು. ನೀವು ಏಕೆ ವ್ಯವಸ್ಥೆ ಮಾಡುವುದಿಲ್ಲ. ಯಾರಿಗೆ ಕೇವಲ ಉರ್ದು ಭಾಷೆ ಬರುತ್ತದೆಯೋ ಅವರಿಗೆ ಜರ್ಮನ್ ಕಲಿಸಿರಿ.

ಇನ್ನಬ್ಬರು ಮಹಿಳೆಯರೂ ತಮ್ಮ ಹೆಸರನ್ನು ಸೂಚಿಸಲು ವಿನಂತಿಸಿಕೊಂಡರು. ಆಗ ಹುಝೂರ್(ಅಬಿಅ) ಒಬ್ಬರ ಹೆಸರು– ಮಾರಿಯ, ಇನ್ನೊಬ್ಬರ ಹೆಸರು: "ಆಲಿಯಾ" ಎಂದು ಸೂಚಿಸಿದರು.

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.